# ಯುಗಶ್ರೀ

★ "ವೇದಪ್ರಕಾಶ" ಮತ್ತು ಇಸ್ಲಾಂ

★ ಸಮತ್ವವೂ ಸಹೋದರತ್ವವೂ

★ ಪವಿತ್ರ ಖುರ್‌ಆನಿನ ಪ್ರಭಾವ


ತ್ರೈಮಾಸಿಕ

ಆಗಸ್ಟ್ 1983

ಬೆಲೆ: ರೂ. 1-00


ಸತ್ಯವಿಶ್ವಾಸಿಯಾದ ಪುರುಷನಾಗಲಿ ಸ್ತ್ರೀಯಾಗಲಿ ಸತ್ಕರ್ಮಗೈಯ್ಯುವುದಾದರೆ ನಾವು ಅವರಿಗೆ ಖಂಡಿತವಾಗಿಯೂ ಪರಿಶುದ್ಧ ಜೀವನವನ್ನು ದಯಪಾಲಿಸುವೆವು ಮತ್ತು ಅವರ ಧರ್ಮಶೀಲ ಕರ್ಮಕ್ಕೆ ಸಮುಚಿತ ಪ್ರತಿಫಲವನ್ನು ನೀಡುವೆವು.

—ಪವಿತ್ರ ಖುರ್‌ಆನ್ (16:98)

# ಯುಗರಶ್ಮಿ ತ್ರೈಮಾಸಿಕ

10-23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575 001.

ಬಿಡಿಪ್ರತಿ: ರೂ. 1-00

ವಾರ್ಷಿಕ ಚಂದಾ: ರೂ. 4-00
ಅಂಚೆ ಮೂಲಕ: ರೂ. 5-00


ವಿಷಯ ಸೂಚಿಕೆ:


| | | |
|---|---|---|
| | | ಪುಟ |
| * ಯುಗರಶ್ಮಿಯ ಒಂಭತ್ತನೆಯ ವಯಸ್ಸು | ... | 1 |
| * ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು | ... | 2 |
| * ದೈವಾಸ್ತಿತ್ವದ ಅನ್ವೇಷಣೆ | ... | 2 |
| * "ವೇದ ಪ್ರಕಾಶ" ಮತ್ತು ಇಸ್ಲಾಂ | ... | 3 |
| * ಸಮತ್ವವೂ ಸಹೋದರತ್ವವೂ | ... | 17 |
| * ಪವಿತ್ರ ಖುರ್‌ಆನಿನ ಪ್ರಭಾವ | ... | 20 |
| * ವಶೌದೂದಿಯ ಪತ್ನಿಯ ವಿರುದ್ಧ ಪುತ್ರನ ಮೊಕದ್ದಮೆ | ... | 23 |
| * ಕ್ರಿಸ್ತನ ಸಮಾಧಿ ಕಾಶ್ಮೀರದಲ್ಲಿ? | ... | 23 |
| * ಅಹ್ಮದಿಯಾ ವಾರ್ತೆಗಳು | ... | 24 |
| * ನಿಧನ ವಾರ್ತೆಗಳು | ... | 30 |



## AHMADIYYA ENGLISH LITERATURE

1. Muhammad the Liberator of women
2. Islam the Need of the Hour
3. Islam and Universal Brotherhood
4. Islamic Teachings on the Moral Conditions of man
5. The Last Message of the Prince of Peace

**WILL BE SENT FREE**

Apply with 25 Paise Stamp for each book to:

Book Secretary, Ahmadiyya Muslim Mission,
10-23/1008, Ansari Road, Mangalore-575 001.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಸಂಪುಟ: 9 | ಜುಲಾಯಿ–ಆಗಸ್ಟ್ 1983 / ವಫಾ–ಜುಹೂರ್ 1362 | ಸಂಚಿಕೆ: 1 |
| --- | --- | --- |

## ಯುಗರಶ್ಮಿಯ ಒಂಭತ್ತನೆಯ ವಯಸ್ಸು

ಈ ಸಂಚಿಕೆಯೊಂದಿಗೆ ಯುಗರಶ್ಮಿ ತನ್ನ ಒಂಭತ್ತನೆಯ ವಯಸ್ಸಿಗೆ ಅಡಿಯಿಟ್ಟಿದೆ. ಈ ಶುಭ ಸಂದರ್ಭದಲ್ಲಿ ನಾವು ಸರ್ವಶಕ್ತನಾದ ಅಲ್ಲಾಹನಿಗೆ ಅಪಾರ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ ಹಾಗೂ ನಮ್ಮ ವಾಚಕರಿಗೂ ಹಿತೈಷಿಗಳಿಗೂ ಶುಭಾಶಯಗಳನ್ನು ಬಯಸುತ್ತೇವೆ.

ಪವಿತ್ರ ಇಸ್ಲಾಂ ಧರ್ಮದ ಕುರಿತೂ ಅಹ್ಮದಿಯಾ ಜಮಾಅತಿನ ಬಗ್ಗೆಯೂ ಕನ್ನಡ ಪತ್ರಿಕೆಗಳಲ್ಲೂ ಒಮ್ಮೆ ಅಲ್ಲಿ, ಒಮ್ಮೆ ಇಲ್ಲಿ ಅಪಸ್ವರಗಳು ಕೇಳಿ ಬರುತ್ತವೆ. ನಮ್ಮ ಗಮನಕ್ಕೆ ಬಂದ ಅಂತಹ ಅಪಸ್ವರಗಳಿಗೆ ಕಳೆದ ಎಂಟು ವರ್ಷಗಳಲ್ಲಿ ನಮ್ಮ ಶಕ್ತ್ಯಾನುಸಾರ ಯುಗರಶ್ಮಿಯ ಮೂಲಕ ಸೂಕ್ತ ಪ್ರತಿಕ್ರಿಯೆಗಳನ್ನು ನೀಡಿರುವೆವು. ಇತ್ತೀಚೆಗೆ, ಉಡುಪಿಯಿಂದ ಹೊರಡುವ "ವೇದ ಪ್ರಕಾಶ" ಎಂಬ ಪತ್ರಿಕೆ ಇಸ್ಲಾಂ ಧರ್ಮ ಮತ್ತು ಮುಹಮ್ಮದ್ ಪೈಗಂಬರರ ಬಗ್ಗೆ ಬಹಳ ನಿಂದನೀಯ ಭಾಷೆಯಲ್ಲಿ ಲೇಖನವೊಂದನ್ನು ಪ್ರಕಟಿಸಿ ಮತರಂಗದಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡಿತು. ವಾಕ್ ಸ್ವಾತಂತ್ರವನ್ನೂ ಪತ್ರಿಕಾ ಸ್ವಾತಂತ್ರವನ್ನೂ ನಾವು ಅಲ್ಲಗಳೆಯುವುದಿಲ್ಲ. ನಮ್ಮ ರಾಷ್ಟ್ರದ ಸಂವಿಧಾನ ಸರ್ವ ಪೌರರಿಗೂ ಆ ಹಕ್ಕನ್ನು ನೀಡುತ್ತದೆ. ಆದರೆ ಅದನ್ನು ದುರುಪಯೋಗಪಡಿಸುವುದು ನ್ಯಾಯವೆನಿಸದು. ಒಂದು ಧರ್ಮದ ಕುರಿತು ವಸ್ತುನಿಷ್ಠವಾದ ವಿಮರ್ಶೆಯನ್ನು ನಾವು ನಿರಾಕರಿಸುವುದಿಲ್ಲ. "ವೇದಪ್ರಕಾಶ"ದಲ್ಲಿ ಪ್ರಕಟವಾದ ಲೇಖನವನ್ನು ಓದಿದರೆ ಆ ಲೇಖಕರಿಗೆ ಇಸ್ಲಾಂ ಧರ್ಮದ ಕುರಿತು ಏನೇನೂ ಗೊತ್ತಿಲ್ಲವೆಂದು ಸ್ಪಷ್ಟವಾಗುತ್ತದೆ. ಈ ಸಂಚಿಕೆಯಲ್ಲಿ, ಆ ಲೇಖನಕ್ಕೆ ಸಮಂಜಸವಾದ ಉತ್ತರವನ್ನು ಕೊಡಲು ಪ್ರಯತ್ನಿಸಲಾಗಿದೆ.

ಇಸ್ಲಾಂ ಧರ್ಮ ಮತ್ತು ಅಹ್ಮದಿಯತ್‌ನ ಕುರಿತು, ಮಾತ್ರವಲ್ಲ, ಸರ್ವಧರ್ಮಗಳ ಬಗ್ಗೆ ಇರುವ ತಪ್ಪು ಅಭಿಪ್ರಾಯಗಳನ್ನು ನಿವಾರಿಸುವುದು ಯುಗರಶ್ಮಿಯ ಧೋರಣೆಯಾಗಿದೆ. ನಮ್ಮ ಪ್ರಯತ್ನದಲ್ಲಿ ಅಲ್ಲಾಹನು ನಮಗೆ ಯಶಸ್ಸನ್ನು ಕರುಣಿಸಲೆಂದು ಪ್ರಾರ್ಥನೆ.

—ಸಂಪಾದಕ.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಜನರೊಡನೆ ಕರುಣೆ ತೋರಿಸುವುದು ಸತ್ಯ ವಿಶ್ವಾಸದ ನಂತರದ ಅತ್ಯುತ್ತಮ ಒಳಿತಾಗಿದೆ.

2. ತನ್ನ ಸಹೋದರನಿಗೆ ಒಳಿತನ್ನುಂಟು ಮಾಡಲು ಶಕ್ತಿಯುಳ್ಳವನು ಕೂಡಲೇ ಅದಕ್ಕೆ ಉದ್ಯುಕ್ತನಾಗಬೇಕು.

3. ನೀವು ಯಾರೊಡನೆಯಾದರೂ ಕೆಟ್ಟದಾಗಿ ವರ್ತಿಸಿದರೆ ಆತನಿಗೆ ಉಪಕಾರ ಮಾಡಲು ಯತ್ನಿಸಿರಿ.

4. ತನ್ನ ಸಹಚರರನ್ನು ಗೌರವಿಸುವುದು ಅತ್ಯುತ್ತಮ ಸ್ವಭಾವವಾಗಿದೆ.

5. ಪ್ರತಿಯೊಂದು ಸತ್ಕೃತ್ಯವೂ ದಾನವಾಗಿದೆ.

6. ಒಂದು ಉತ್ತಮ ಕಾರ್ಯವನ್ನು ಆರಂಭಿಸುವುದಕ್ಕಿಂತಲೂ ಪುಣ್ಯಕರವಾದುದು ಅದನ್ನು ಪೂರ್ತಿಗೊಳಿಸುವುದಾಗಿದೆ.

7. ಅಲ್ಲಾಹನ ಹೆಸರಿನಲ್ಲಿ ಒಂದು ಉಪಕಾರ ಮಾಡಲು ವಿನಂತಿಸಿದಾಗ, ಆ ಕೋರಿಕೆಯನ್ನು ತಿರಸ್ಕರಿಸುವವನು ಅತ್ಯಂತ ಕೆಟ್ಟವನು.

8. ಕೇಳದೆಯೇ ಏನಾದರೂ ನಿಮಗೆ ಲಭಿಸಿದರೆ ಅದರಲ್ಲಿ ಒಂದು ಭಾಗವನ್ನು ತಿಂದು ಒಂದು ಭಾಗವನ್ನು ದಾನವಾಗಿ ನೀಡಿರಿ.

9. ನೀವು ನೀಡುವ ರೀತಿಯಲ್ಲೇ ನಿಮಗೆ ಲಭಿಸುವುದು.

10. ಬಡವರೊಂದಿಗೆ ಬೆರೆತು ಅವರೊಂದಿಗೆ ಸ್ನೇಹದಿಂದ ವರ್ತಿಸಿರಿ.

**(ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ ಬರೆದ Wisdom of the Holy Prophet ಎಂಬ ಪುಸ್ತಕದಿಂದ ಆಯ್ದುದು)**

---

# ★ ದೈವಾಸ್ತಿತ್ವದ ಅನ್ವೇಷಣೆ ★

ಮನುಷ್ಯಪ್ರಕೃತಿಯಲ್ಲಿ ಅಂತರ್ಲೀನವಾಗಿರುವ ಗುಣಗಳ ಪೈಕಿ ಒಂದು, ಸರ್ವಶಕ್ತವಾದೊಂದು ಸತ್ತೆಯ ಕುರಿತಾದ ಅನ್ವೇಷಣೆಯಾಗಿದೆ. ಆ ಪರಮಾರ್ಥ ಶಕ್ತಿಯ ಕಡೆಗೆ ಮನುಷ್ಯನನ್ನು ಪ್ರೇರೇಪಿಸುವ ಆಕರ್ಷಣ ಶಕ್ತಿಯೊಂದು ಹೃದಯಾಂತರಾಳದಲ್ಲಿ ನಿಕ್ಷಿಪ್ತವಾಗಿರುತ್ತದೆ. ಈ ಆಕರ್ಷಣೆ ಅಥವಾ ಅನ್ವೇಷಣ ಬುದ್ಧಿಯ ಕುರುಹು ಶಿಶುವಿನಲ್ಲಿ ಅದರ ಜನನದೊಂದಿಗೆಯೇ ತೋರಿ ಬರುತ್ತದೆ. ಜನಿಸಿದ ಕೂಡಲೇ ಮಗು ಅದರ ಜನ್ಮಸಿದ್ಧ ಗುಣದಿಂದ ಪ್ರೇರಿತವಾಗಿ ತಾಯಿಯ ಕಡೆಗೆ ತಿರುಗುತ್ತದೆ. ನೈಸರ್ಗಿಕವಾಗಿ ಅದಕ್ಕೆ ತಾಯಿಯೊಡನೆ ವಿಶಿಷ್ಟ ರೀತಿಯ ಪ್ರೀತಿ ಇರುವುದಾಗಿ ಕಾಣಬಹುದು. ಅದರ ಜ್ಞಾನೇಂದ್ರಿಯಗಳು ವಿಕಾಸಗೊಂಡಂತೆಯೇ ಈ ಸಹಜ ಗುಣ ಪೂರ್ವಾಧಿಕ ಪ್ರಕಾಶಗೊಳ್ಳುತ್ತದೆ. ಕೊನೆಗೆ, ಅಂತರ್ಲೀನವಾಗಿರುವ ಈ ಸ್ನೇಹಶಕ್ತಿ ಸ್ಪಷ್ಟವಾಗಿ ಪ್ರಕಟಗೊಳ್ಳುತ್ತದೆ. ಆಗ ತನ್ನ ತಾಯಿಯ ಮಡಿಲಲ್ಲಿ ಹೊರತು ಬೇರೆಲ್ಲೂ ಶಿಶು ಸ್ವಸ್ಥವಾಗಿರುವುದಿಲ್ಲ. ಮಾತೆಯ ಸ್ನೇಹಭರಿತ ಲಾಲನೆ ಪಾಲನೆಯಲ್ಲಿ ಅದು ಪೂರ್ಣ ಸುಖವನ್ನು ಪಡೆಯುತ್ತದೆ. ತಾಯಿಯಿಂದ ಬೇರ್ಪಡುವುದಾದರೆ ಅದರ ಸುಖ ಸಂತೋಷಗಳೆಲ್ಲಾ ಸಂತಾಪಗಳಾಗಿ ಮಾರ್ಪಡುತ್ತವೆ. ಯಾವ ರೀತಿಯಲ್ಲಿ ಸಾಂತ್ವನಪಡಿಸಿದರೂ ಮಗುವಿನ ದುಃಖ ನಿವಾರಿಸಲ್ಪಡುವುದಿಲ್ಲ. ತಾಯಿಯ ಮಡಿಲಲ್ಲಿ ವಿನಾ ಅದಕ್ಕೆ ನಿಜವಾದ ನೆಮ್ಮದಿ ಸಿಗುವುದಿಲ್ಲ. ಈ ರೀತಿಯಲ್ಲಿ ಶಿಶುವನ್ನು ತಾಯಿಯ ಸಮೀಪಕ್ಕೆ ಎಳೆಯುವ ಆಕರ್ಷಣ ಶಕ್ತಿ ಏನಾಗಿರಬಹುದು ? ಅದು ಯಥಾರ್ಥ ಭಕ್ತಿ ಮತ್ತು ಆರಾಧನೆಗೆ ಅರ್ಹನಾದ ಸೃಷ್ಟಿಕರ್ತನ ಕಡೆಗೆ ಮನುಷ್ಯನನ್ನು ತಿರುಗಿಸಲಿಕ್ಕಾಗಿ ಶಿಶು ಪ್ರಕೃತಿಯಲ್ಲಿ ನಿಕ್ಷಿಪ್ತವಾಗಿರುವ ಸ್ನೇಹ ಶಕ್ತಿಯಲ್ಲದೆ ಬೇರೇನೂ ಅಲ್ಲ. (ಇಸ್ಲಾಂ ಮತ ತತ್ವಜ್ಞಾನ)

—ಹಝ್ರತ್ ಅಹ್ಮದ್ (ಅಹ್ಮದಿಯಾ ಸಂಘಟನೆಯ ಸ್ಥಾಪಕರು).

# "ವೇದಪ್ರಕಾಶ" ಮತ್ತು ಇಸ್ಲಾಂ

★ ಎಂ. ಪಿ. ಇಬ್ರಾಹಿಂ

ಲೋಕಾನುಗ್ರಹಿಯಾದ ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರನ್ನೂ ಲೋಕಕ್ಕೆ ಮಾರ್ಗದರ್ಶನ ನೀಡುವ ದೈವಿಕ ಗ್ರಂಥವಾದ ಪವಿತ್ರ ಖುರ್‌ಆನನ್ನೂ ಅತಿ ನೀಚವಾದ ಶೈಲಿಯಲ್ಲಿ ವಿಮರ್ಶಿಸಿ ನಿಷ್ಠುರವಾಗಿ ಆಕ್ಷೇಪಿಸಿದ ಒಂದು ಲೇಖನವು ಉಡುಪಿಯಿಂದ ಪ್ರಕಟವಾಗುವ "ವೇದ ಪ್ರಕಾಶ" ಮಾಸಿಕದ ಈ ಕಳೆದ ಜನವರಿ ಮತ್ತು ಫೆಬ್ರವರಿ ತಿಂಗಳ ಸಂಚಿಕೆಗಳಲ್ಲಿ ಪ್ರಕಟವಾಗಿದೆ. ಪ್ರೊ॥ ಜೇಷ್ಠ ವರ್ಮನ್ ಎಂಬವರು ಬರೆದ "ಇಸ್ಲಾಂ ಮತದ ಮೇಲೆ ಒಂದು ವಿಹಂಗಮ ದೃಷ್ಟಿ" ಎಂಬ ಈ ಲೇಖನವು ದಕ್ಷಿಣ ಕನ್ನಡದಲ್ಲಿ ಮಾತ್ರವಲ್ಲ ಕರ್ನಾಟಕ ರಾಜ್ಯದಲ್ಲೇ ಮತ ಮಂಡಲದಲ್ಲಿ ಬಹು ದೊಡ್ಡ ಕೋಲಾಹಲಕ್ಕೆ ಕಾರಣವಾಯಿತು.

ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆಯ ಕುರಿತಾಗಲೀ ಪವಿತ್ರ ಖುರ್‌ಆನಿನ ಬಗ್ಗೆಯಾಗಲೀ ಪ್ರಾಥಮಿಕ ಜ್ಞಾನವೂ ಸಹ ಇಲ್ಲದ ಈ ಪ್ರೊಫೆಸರ್, ಇಸ್ಲಾಂ ಧರ್ಮದ ಬಗ್ಗೆ ಹದಿನೆಂಟನೆಯ ಶತಮಾನದ ಕ್ರೈಸ್ತ ಪಾದ್ರಿಗಳೂ ಆರ್ಯ ಸಮಾಜಿಗಳೂ ಬರೆದಿಟ್ಟ ಕೆಲವು ಕ್ಷುದ್ರ ಕೃತಿಗಳಲ್ಲಿ ಆಕ್ಷೇಪಿಸಲಾದ ಅದೇ ಪಲ್ಲವಿಯನ್ನು ಕೋಲ ಬಸವಣ್ಣನಂತೆ ಪುನರಾವರ್ತಿಸಿದ್ದಾರೆ. ಜೊತೆಯಲ್ಲಿ ಇಸ್ಲಾಂ ಧರ್ಮದ 14 ಶತಮಾನಗಳ ಇತಿಹಾಸದಲ್ಲೇ ಯಾರೂ ಸಹ ಕಂಡೂ ಕೇಳಿಯೂ ಅರಿಯದ ಕೆಲವು ವಿನೂತನ ವಿಷಯಗಳನ್ನೂ ಕೂಡಾ ತನ್ನ ಲೇಖನದಲ್ಲಿ ಅಳವಡಿಸಿಕೊಂಡು ನಗೆ ಪಾಟಲಿಗೆ ಗುರಿಯಾಗಿದ್ದಾರೆ. ಅವರ ಲೇಖನವು ಈ ರೀತಿ ಆರಂಭಗೊಳ್ಳುತ್ತದೆ:

"ರಾಗ, ದ್ವೇಷ, ಪಕ್ಷ ಪಾತಾದಿಗಳನ್ನು ಬದಿಗಿಟ್ಟು ಉದಾರ ಹೃದಯದಿಂದ ಇಸ್ಲಾಂ ಮತವನ್ನು ನಾವು ಅವಲೋಕಿಸಿದರೆ, ಇದೊಂದು ತರ್ಕಶೂನ್ಯ, ಅವೈಜ್ಞಾನಿಕ, ಭ್ರಾಂತಿ ಮತ್ತು ಕಾಳು ರೂಢಿಗಳಿಂದ ತುಂಬಿದ ಮತ ಅಥವಾ ಸಂಪ್ರದಾಯವೆಂದು ಸ್ಪಷ್ಟವಾಗಿ ಕಾಣುತ್ತದೆ. ಯಾಕೆಂದರೆ, ಇಸ್ಲಾಮಿನ ಆಧಾರವಾದ ಕುರ್‌ಆನ್ ಈ ವಾಕ್ಯದೊಂದಿಗೆ ಪ್ರಾರಂಭವಾಗುತ್ತದೆ: 'ಲಾ ಇಲ್ಲಾಹ್ ಇಲ್ಲಿಲ್ಲಾಹ್, ಮುಹಮ್ಮದ್-ಉಲ್-ರಸೂಲ್‌ಇಲ್ಲಾಹ್' ಇದರ ಅರ್ಥ – ದೇವರು ದೊಡ್ಡವನು, ಮುಹಮ್ಮದನು ಅವನ ಪೈಗಂಬರನು. ಈ ವಾಕ್ಯದ ಪೂರ್ವಾರ್ಧಂಶವು ದೇವರ ಸ್ತುತಿಯಾಗಿದೆ, ಮತ್ತು ಉತ್ತರಾಂಶವು ಪೈಗಂಬರನ ಮಹತ್ವವನ್ನು ಹೇಳುತ್ತದೆ.................... ಈ ರೀತಿ ದೇವರ ಮಹತ್ವವು ಪೈಗಂಬರನನ್ನು ಅವಲಂಬಿಸಿಕೊಂಡಿರುವುದರಿಂದ ಅದು ಸ್ವಾಭಾವಿಕವಾಗಿ ಕಡಿಮೆಯಾಗುತ್ತದೆ. ಇದರಿಂದ ಪೈಗಂಬರನ ಸ್ಥಾನವು ದೇವರ ಸ್ಥಾನಕ್ಕಿಂತ ಹೆಚ್ಚಾಗಿ, ದೇವರನ್ನು ಕಡೆಗಣಿಸಿದಂತಾಗುತ್ತದೆ."

ರಾಗ, ದ್ವೇಷ, ಪಕ್ಷಪಾತಾದಿಗಳನ್ನು ಬದಿಗಿಟ್ಟು ಉದಾರ ಹೃದಯದಿಂದ, ಜಗತ್ತಿನ ಅತಿ ದೊಡ್ಡ ಧರ್ಮಗಳಲ್ಲೊಂದಾದ ಇಸ್ಲಾಂ ಧರ್ಮವನ್ನು ವಿಮರ್ಶಿಸಲು ಪ್ರೊ॥ ಜೇಷ್ಠವರ್ಮನ್ ಮುಂದಾದಾಗ, ಅವರ ಲೇಖನದ ಮೂಲಕ ವಾಚಕ ಮಹಾಶಯರು ಇಸ್ಲಾಂ ಧರ್ಮದ ಕುರಿತು ಸ್ವಲ್ಪವಾದರೂ ಮಾಹಿತಿಯನ್ನು ಪಡೆದುಕೊಳ್ಳಬಹುದೆಂದು ಸ್ವಾಭಾವಿಕವಾಗಿಯೂ ಬಯಸಿದ್ದರೆ, ವಾಚಕರ ಪಾಲಿಗೆ ಲೇಖಕರ ವಿಮರ್ಶೆಯು ಅತ್ಯಂತ ನಿರಾಶಾದಾಯಕವಾಗಿದೆ ಎಂದು ಹೇಳದೆ ನಿರ್ವಾಹವಿಲ್ಲ. ಇಸ್ಲಾಂ ಧರ್ಮವನ್ನು ಅತ್ಯಂತ ಗಹ್ವರವಾಗಿ ಅಧ್ಯಯನ ನಡೆಸಿ ಪವಿತ್ರ ಖುರ್‌ಆನನ್ನೂ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆಯನ್ನೂ ಆಳವಾಗಿ ವ್ಯಾಸಂಗ ಮಾಡಿದ ನಂತರ ಜಗತ್ತಿನ ಮಹಾ ಮಹಾ ತತ್ವಜ್ಞಾನಿಗಳೂ ಚರಿತ್ರೆಕಾರರೂ ಮೆಚ್ಚುಗೆ ಸೂಚಿಸಿರುವರು. ಅಂತಹ ಒಂದು ಬೃಹತ್ ಧರ್ಮದ ಬಗ್ಗೆ ಮತ್ತು ಅದರ ಸ್ಥಾಪಕರಾದ ಲೋಕಾನುಗ್ರಹಿ ಹಝ್ರತ್ ಮುಹಮ್ಮದ್ ಪೈಗಂಬರ್

ರವರ ಕುರಿತು ಅತ್ಯಂತ ನೀಚವಾದ, ಅವಾಚ್ಯ ಶಬ್ದಗಳನ್ನುಪಯೋಗಿಸಿ ಹುಚ್ಚಾಪಟ್ಟೆ ನಿಂದಿಸಿ ಬರೆದ ಜೇಪ್ಪ ವರ್ಮನ್‌ಗೆ ಇಸ್ಲಾಂ ಧರ್ಮದ ಬಗ್ಗೆ ಎಷ್ಟು ತಿಳಿದಿದೆ ಎಂದರೆ, ಅವರು ಹೇಳುತ್ತಾರೆ: "ಇಸ್ಲಾಮಿನ ಆಧಾರವಾದ ಕುರ್‌ಆನ್ ಈ ವಾಕ್ಯದೊಂದಿಗೆ ಪ್ರಾರಂಭವಾಗುತ್ತದೆ–ಲಾ ಇಲ್ಲಾಹ್ ಇಲ್ಲಿಲ್ಲಾಹ್, ಮುಹಮ್ಮದ್–ಉಲ್–ರಸೂಲ್ ಇಲ್ಲಾಹ್"!

ಯಾವುದೇ ಧರ್ಮವನ್ನು ಸಹ ವಸ್ತುನಿಷ್ಠವಾಗಿ ವಿಮರ್ಶಿಸುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ತಾನು ವಿಶ್ವಾಸಹೊಂದಿರುವ ಧರ್ಮದೊಂದಿಗೆ ಇತರ ಧರ್ಮಗಳ ತತ್ವಗಳನ್ನು ಹೋಲಿಸಿ ತನ್ನ ಧರ್ಮದ ಶ್ರೇಷ್ಠತೆಯನ್ನು ಎತ್ತಿತೋರಿಸಲು ಸಹ ಪ್ರತಿಯೊಬ್ಬರೂ ಸ್ವತಂತ್ರರಿದ್ದಾರೆ. ಆದರೆ, ಇತರ ಧರ್ಮಗಳ ಕುರಿತು ವಿಮರ್ಶೆ ನಡೆಸಿ ಅದರಲ್ಲಿ ಕುಂದು ಕೊರತೆಗಳಿವೆಯೆಂದೂ ವಿಚಾರಶೂನ್ಯ ಸಿದ್ಧಾಂತಗಳಿವೆಯೆಂದೂ ಬಹಿರಂಗಪಡಿಸಬೇಕಾದರೆ, ಈ ಕಾರ್ಯವನ್ನು ಅತ್ಯಂತ ಸೂಕ್ಷ್ಮತೆಯಿಂದ ಕೈಗೊಳ್ಳಬೇಕಾಗಿದೆ. ವಿಮರ್ಶೆಗೆ ಗುರಿಪಡಿಸುವ ಧರ್ಮದ ಆಧಾರ ಗ್ರಂಥದ ಬಗ್ಗೆ ಕೂಲಂಕುಶವಾಗಿ ಅಧ್ಯಯನ ನಡೆಸಬೇಕಾದುದು ಅನಿವಾರ್ಯವಾದ ಒಂದು ಆವಶ್ಯಕತೆಯಾಗಿದೆ. ಈ ರೀತಿ ಒಂದು ಧರ್ಮದ ಕುರಿತು ಆಳವಾಗಿ ವ್ಯಾಸಂಗ ಮಾಡಿ ಅದರ ಧರ್ಮಗ್ರಂಥ ಮತ್ತು ಧರ್ಮಸ್ಥಾಪಕರ ಜೀವನ ಚರಿತ್ರೆಯನ್ನು ಚೆನ್ನಾಗಿ ಅಭ್ಯಸಿಸಿದ ನಂತರ ಮಾತ್ರವೇ ಆ ಧರ್ಮದಲ್ಲಿ ಕಂಡು ಬರುವ ನ್ಯೂನತೆಗಳನ್ನು ಪ್ರಕಟಿಸುವ ಹಕ್ಕು ಓರ್ವನಿಗೆ ಇರುವುದು. ಅಂತಹ ವಿಮರ್ಶಕರು ಪೂರ್ವಗ್ರಹ ಪೀಡಿತರಾಗಿರಬಾರದು ಎಂಬುದು ಸಹ ಒಂದು ಅಗತ್ಯವಾಗಿದೆ.

ಸರ್ವಸಮ್ಮತವಾದ ಈ ತತ್ವದ ಆಧಾರದಲ್ಲಿ ನೋಡಿದರೆ, ಇಸ್ಲಾಂ ಧರ್ಮದ ಆಧಾರ ಗ್ರಂಥವಾದ ಪವಿತ್ರ ಖುರ್‌ಆನ್ "ಲಾ ಇಲ್ಲಾಹ್ ಇಲ್ಲಿಲ್ಲಾಹ್, ಮುಹಮ್ಮದ್–ಉಲ್–ರಸೂಲ್ ಇಲ್ಲಾಹ್" ಎಂಬ ವಾಕ್ಯದಿಂದ ಆರಂಭಗೊಳ್ಳುತ್ತದೆ ಎಂದು ಬರೆದಿರುವ ಜೇಪ್ಪ ವರ್ಮನ್‌ಗೆ ಇಸ್ಲಾಂ ಧರ್ಮವನ್ನು ಹೀಯಾಳಿಸಿ ಅದರ ಸ್ಥಾಪಕರನ್ನು ಅಪರಿಷ್ಕೃತ ರೀತಿಯಲ್ಲಿ ಬೈದು ನಿಂದಿಸುವುದನ್ನು ಬಿಟ್ಟು ಇಸ್ಲಾಂ ಧರ್ಮದ ಬಗ್ಗೆ ಚಕಾರವೆತ್ತಲೂ ಸಹ ಯೋಗ್ಯತೆಯಿರುವುದಿಲ್ಲ. ಬೀದಿ ಹುಡುಗರ ಮಾತುಗಳನ್ನೂ ದುಷ್ಕರ್ಮಿಗಳ ನೀಚ ಕೃತ್ಯಗಳನ್ನೂ ಆಧಾರವಾಗಿರಿಸಿಕೊಂಡು ಲೇಖಕರು ಇಸ್ಲಾಂ ಧರ್ಮವನ್ನು ವಿಮರ್ಶಿಸುವ ಸಾಹಸಕ್ಕಿಳಿದುದು ಅತ್ಯಂತ ಶೋಚನೀಯ. ಇಂತಹ ಕ್ಷುದ್ರ ಲೇಖನಗಳನ್ನು ಪ್ರಕಟಿಸಿಕೊಂಡು "ವೇದ ಪ್ರಕಾಶ"ದ ಸಂಪಾದಕ ವೃಂದದವರೂ ಸಹ ಪತ್ರಿಕಾ ಧರ್ಮಕ್ಕೆ ಕಳಂಕವೆಸಗಿದ್ದಾರೆ.

ಇಸ್ಲಾಂ ಧರ್ಮದ ಮೂಲಮಂತ್ರ (ಅದು ಖುರ್‌ಆನಿನ ಸೂಕ್ತವಲ್ಲ) 'ಲಾ ಇಲಾಹ ಇಲ್ಲಲ್ಲಾಹ್, ಮುಹಮ್ಮದುರ್ರಸೂಲುಲ್ಲಾಹ್' ಎಂಬ ಅರಬಿ ವಚನವನ್ನು ಜೇಪ್ಪ ವರ್ಮನ್ ತಪ್ಪಾಗಿ ಬರೆದು ಭಾಷಾಂತರಿಸಿದ್ದಾರೆ. ಲೇಖಕನ ಅರ್ಥ ಮತ್ತು ವ್ಯಾಖ್ಯಾನ ಈ ರೀತಿ ಇದೆ: "ಇದರ ಅರ್ಥ–ದೇವರು ದೊಡ್ಡವನು, ಮುಹಮ್ಮದನು ಅವನ ಪೈಗಂಬರನು...... ಈ ರೀತಿ ದೇವರ ಮಹತ್ವವು ಪೈಗಂಬರನನ್ನು ಅವಲಂಬಿಸಿಕೊಂಡಿರುವುದರಿಂದ ಅದು ಸ್ವಾಭಾವಿಕವಾಗಿ ಕಡಿಮೆಯಾಗುತ್ತದೆ. ಇದರಿಂದ ಪೈಗಂಬರನ ಸ್ಥಾನವು ದೇವರ ಸ್ಥಾನಕ್ಕಿಂತ ಹೆಚ್ಚಾಗಿ, ದೇವರನ್ನು ಕಡೆಗಣಿಸಿದಂತಾಗುತ್ತದೆ."

ಮೇಲಿನ ಅರಬಿ ವಾಕ್ಯಕ್ಕೆ ಲೇಖಕರು ನೀಡಿದ ಅರ್ಥವೂ ವ್ಯಾಖ್ಯಾನವೂ ತಪ್ಪು. ಅದರ ನಿಜವಾದ ಅರ್ಥ ಈ ರೀತಿ ಇದೆ: "ಅಲ್ಲಾಹನ ಹೊರತು ಆರಾಧಿಸಲ್ಪಡಲು ಯೋಗ್ಯನಾಗಿ ಇನ್ನಾರೂ ಇಲ್ಲ; ಮುಹಮ್ಮದ್ ಅಲ್ಲಾಹನ ಸಂದೇಶವಾಹಕ." ಈ ವಾಕ್ಯದಿಂದ ಲೇಖಕರು ಆರೋಪಿಸುವಂತೆ ಮುಹಮ್ಮದ್ ಪೈಗಂಬರರು ದೇವರಿಗಿಂತಲೂ ದೊಡ್ಡವರು ಎಂಬ ತಾತ್ಪರ್ಯವೇ ಉದ್ಭವಿಸುವುದಿಲ್ಲ. ಮುಹಮ್ಮದ್ ಪೈಗಂಬರರಿಗೆ ಎಷ್ಟು ಮಹತ್ತಾದ ಸ್ಥಾನ ಗಳಿದ್ದರೂ ಅವರು ಆಧ್ಯಾತ್ಮಿಕವಾಗಿ ಎಷ್ಟು ಉನ್ನತ ಪದವಿಗೆ ತಲಪಿದ್ದರೂ ಸಹ ಅವರು ಕೇವಲ ಅಲ್ಲಾಹನ ಸಂದೇಶವಾಹಕರೇ ಹೊರತು ಆರಾಧನೆಗೆ ಅರ್ಹರಲ್ಲವೆಂದೂ, ಆರಾಧಿಸಲ್ಪಡಬೇಕಾದವನು ದೇವರು ಮಾತ್ರವೇ ಎಂದೂ ಈ ವಾಕ್ಯದ ತಾತ್ಪರ್ಯವಾಗಿದೆ. ಅತಿ ಸರಳವಾದ ಈ ವಿಚಾರವನ್ನು ಗ್ರಹಿಸಲು ವಿಫಲರಾದ ಲೇಖಕರ ಕುರಿತು ಕನಿಕರ ತೋರುತ್ತದೆ.

ಮುಂದುವರಿಸಿ ಜೇಪ್ಪ ವರ್ಮನ್ ಈ ರೀತಿ ಬರೆದಿದ್ದಾರೆ: "ಇಸ್ಲಾಮಿನಲ್ಲಿ ಪೈಗಂಬರರ ಪೂಜೆಯ ರೂಪದಲ್ಲಿ ವ್ಯಕ್ತಿ ಪೂಜೆ, ಕುದುರೆಯ ಪೂಜೆಯ ರೂಪದಲ್ಲಿ ಪ್ರಾಣಿ ಪೂಜೆ, ಮದೀನೆಯ ಗೋರಿ ಮತ್ತು ಕಾಬಾದ ಕಪ್ಪು ಕಲ್ಲು ಇವುಗಳ ಪೂಜೆಯ ರೂಪದಲ್ಲಿ ಮೂರ್ತಿ ಪೂಜೆ,

ಗೋರಿ ಪೂಜೆ, ಕಲ್ಲಿನ ಪೂಜೆ, ಮತ್ತು ಬಿದಿರಿನ ಕಾಗದ ಗಳ ತಾಜಿಯಾಗಳ ಮೂಲಕ ಪ್ರತೀಕ ಪೂಜೆ, ಇವೆಲ್ಲಾ ಬಳಕೆಯಲ್ಲಿವೆ. ಇವು ಅಂಧವಿಶ್ವಾಸಗಳ ಲಕ್ಷಣಗಳಾಗಿವೆ.

ಸೃಷ್ಟಿಕರ್ತನಾದ ಏಕ ಪರಮಾತ್ಮನ ಹೊರತು ಅವನ ಸೃಷ್ಟಿಗಳನ್ನು ಪೂಜಿಸುವ ಈ ಎಲ್ಲಾ ವಿಧಾನಗಳೂ "ಅಂಧವಿಶ್ವಾಸದ ಲಕ್ಷಣಗಳಾಗಿವೆ" ಎಂದು ಲೇಖಕರು ಹೇಳುತ್ತಾರೆ. ನಾನು ಸಹ ಅದನ್ನು ಅಕ್ಷರಶಃ ಒಪ್ಪಿ ಕೊಳ್ಳುತ್ತೇನೆ. ಆದರೆ, ಇಸ್ಲಾಂ ಧರ್ಮವು ಇವುಗಳಿಗೆ ಪ್ರೇರೇಪಣೆ ನೀಡುತ್ತದೆ ಎಂಬ ವಿಚಾರವನ್ನು ಮಾತ್ರ ನಾನು ಒಪ್ಪಲಾರೆ. ಲೇಖಕರು ಮೊದಲು ಉದಾಹರಿಸಿದ ಅರಬಿ ವಚನವನ್ನೇ ನೋಡಿರಿ. ಅಲ್ಲಾಹನ ಹೊರತು ಇನ್ನಾರನ್ನೂ ಪೂಜಿಸಬಾರದೆಂಬುದೂ ಏಕ ಪರಮಾತ್ಮನ ಹೊರತು ಇತರ ಎಲ್ಲವೂ ಅವನ ಸೃಷ್ಟಿಗಳಾಗಿರುವುದರಿಂದ ಆರಾಧಿಸಲ್ಪಡುವ ಹಕ್ಕು ಅವನಿಗಲ್ಲದೆ ಇತರ ಯಾರಿಗೂ ಇರುವುದಿಲ್ಲವೆಂಬುದೂ ಅದರ ಸಾರವಾಗಿದೆ. ಇದು ಇಸ್ಲಾಂ ಧರ್ಮದ ಮೂಲಭೂತ ಸಿದ್ಧಾಂತ. "ಲಾ ಇಲಾಹ ಇಲ್ಲಲ್ಲಾಹ್"-ಆರಾಧಿಸಲ್ಪಡಬೇಕಾದವನು ದೇವ ನೊಬ್ಬನೇ ಹೊರತು ಮತ್ತಾರೂ ಅಲ್ಲ ಎಂಬುದು ಇಸ್ಲಾಂ ಧರ್ಮದ ಬುನಾದಿಯಾಗಿದೆ. ಇದು ಇಸ್ಲಾಮಿನ ಕುರಿತು ಸ್ವಲ್ಪವಾದರೂ ಪರಿಜ್ಞಾನವಿರುವ ಯಾರಿಗೂ ತಿಳಿದಿರುವ ಒಂದು ವಿಚಾರ. ಹೀಗಿರುವಾಗ ಇಸ್ಲಾಂ ಧರ್ಮದಲ್ಲಿ ಪೈಗಂಬರರ ಪೂಜೆ, ಕುದುರೆಯ ಪೂಜೆ, ಗೋರಿ ಮತ್ತು ಕಲ್ಲುಗಳ ಪೂಜೆ ಮೊದಲಾದವುಗಳು ಇವೆ ಎಂದು ಲೇಖ ಕರು ಹೇಳಿರುವುದು ಇಸ್ಲಾಂ ಧರ್ಮ ತತ್ವಗಳ ಬಗ್ಗೆ ಅವರಿಗಿರುವ ಅಜ್ಞತೆಯನ್ನು ತೋರಿಸಿಕೊಡುತ್ತದೆ.

ಸೃಷ್ಟಿ ಪೂಜೆಯೆಂಬ ಈ ಅನಾಚಾರಗಳನ್ನು ತೊಡೆದು ಹಾಕಲೆಂದೇ ಪರಮಾತ್ಮನು ಎಲ್ಲಾ ಕಾಲದಲ್ಲೂ ಎಲ್ಲಾ ಜನಸಮುದಾಯದೆಡೆಯಲ್ಲೂ ಪ್ರವಾದಿಗಳನ್ನೂ ಸಂದೇಶವಾಹಕರನ್ನೂ ನಿಯೋಗಿಸಿರುವುದು. ಪವಿತ್ರ ಖುರ್‌ಆನ್ ಹೇಳುತ್ತದೆ:

ವಲಖದ್ ಬಅಸ್‌ನಾ ಫೀ ಕುಲ್ಲಿ ಉಮ್ಮತಿನ್
ಅನಿಅಬುದಲ್ಲಾಹ ವಜ್‌ತನಿಬಿತಾಗೂತ್

"ಸೃಷ್ಟಿ ಪೂಜೆಯಾದ ಪೈಶಾಚಿಕವನ್ನು ದೂರೀಕರಿ ಸುವ ಹಾಗೂ ಏಕ ದೇವನ ಆರಾಧನೆ ಮಾಡುವ ಉಪ ದೇಶಗಳೊಂದಿಗೆ ನಾವು ಪ್ರತಿಯೊಂದು ಜನರೆಡೆಯಲ್ಲೂ ಪ್ರವಾದಿಗಳನ್ನು ಎಬ್ಬಿಸಿರುವೆವು." ಹಝ್ರತ್ ಮುಹ ಮ್ಮದ್ ಪೈಗಂಬರರು ಇನ್ನಾರಿಗಿಂತಲೂ ಈ ಅನಾಚಾರ ಗಳನ್ನು ಅತ್ಯಂತ ಶಕ್ತಿಯುತವಾಗಿ ವಿರೋಧಿಸಿ ಪರಮಾತ್ಮನ ಏಕತೆಯನ್ನೂ ಅವನ ಪವಿತ್ರತೆಯನ್ನೂ ಉದ್ಘೋಷಿಸಿದ ಪ್ರವಾದಿಯಾಗಿದ್ದಾರೆ. "Of all the prophets and religious personalities of the world Muhammad was the most successful" (Encyclopaedia Britannica, 13th Edition, under the article KORAN.)—"ಎಲ್ಲಾ ಪ್ರವಾ ದಿಗಳಿಗಿಂತಲೂ ಧಾರ್ಮಿಕ ಮಹಾಪುರುಷರಿಗಿಂತಲೂ ಅತ್ಯಂತ ವಿಜಯ ಶಾಲಿಯಾದವರು ಮುಹಮ್ಮದ್ ಆಗಿ ದ್ದಾರೆ" ಎಂಬುದಾಗಿ ಇಸ್ಲಾಮಿನ ಪ್ರವಾದಿಯ ಕುರಿತು ಬ್ರಿಟಾನಿಕಾ ವಿಶ್ವಕೋಶವು ಉಲ್ಲೇಖಿಸಿದೆ. ಧರ್ಮತತ್ವ ಗಳ ಮರ್ಮಬಿಂದುವಾದ ಏಕ ದೇವ ಸಿದ್ಧಾಂತವನ್ನು ಮುಹಮ್ಮದ್ ಪೈಗಂಬರರು ಪ್ರಬೋಧಿಸಿದಂತೆ ಅಷ್ಟೊಂದು ಶಕ್ತಿಯುತವಾಗಿಯೂ ಪರಿಣಾಮಕಾರಿ ಯಾಗಿಯೂ ಈ ಪ್ರಪಂಚದಲ್ಲಿ ಯಾವ ಋಷಿ, ಮುನಿ, ಪ್ರವಾದಿಗಳೂ ಸಹ ಬೋಧಿಸಿರಲಿಲ್ಲವೆಂಬುದು ಒಂದು ಐತಿಹಾಸಿಕ ಸತ್ಯ. ಬಹುದೇವಾರಾಧನೆಯ ಮತ್ತು ಸೃಷ್ಟಿ ಪೂಜೆಯ ಬೇರನ್ನೇ ಕತ್ತರಿಸಿದ ಮಹಾನ್ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರ್ ಆಗಿದ್ದಾರೆ. ಅವರು ತನ್ನ ಜೀವನದ ಕೊನೆಯ ಗಳಿಗೆಯಲ್ಲಿ ತನ್ನ ಕೊನೆಯ ಅಭಿಲಾಷೆಯೆಂಬಂತೆ ಪರಮಾತ್ಮನೊಡನೆ ಒಂದು ಬೇಡಿಕೆಯನ್ನು ಉಚ್ಚರಿಸುತ್ತಾ ಇದ್ದರು. ಅದೇನೆಂಬು ದಾಗಿ ಪತ್ನಿ ಆಯಿಷಾ ಗಮನಿಸಿ ಕೇಳಿದಾಗ "ಹಿಂದಿನ ಜನಸಮುದಾಯಗಳು ಅವರ ಪ್ರವಾದಿಗಳ ಗೋರಿ ಗಳನ್ನು ಪೂಜಾ ಸ್ಥಳಗಳನ್ನಾಗಿ ಮಾರ್ಪಡಿಸಿದ ಕಾರಣ ಅಲ್ಲಾಹನ ಶಾಪಾಗ್ನಿಯು ಅವರ ಮೇಲೆ ಬಿತ್ತು" ಎಂದೂ "ಪರಮಾತ್ಮನೇ ನನ್ನ ಗೋರಿಯನ್ನು ಪೂಜಾ ಸ್ಥಳವಾಗಿ ಮಾರ್ಪಡಿಸದಿರು" ಎಂದೂ ಪೈಗಂ ಬರರು ದೀನ ಸ್ವರದಲ್ಲಿ ಮತ್ತೆ ಮತ್ತೆ ಹೇಳುತ್ತಿರು ವುದು ಅವರಿಗೆ ಕೇಳಿ ಬಂತು. ಅವರ ಈ ಕೋರಿಕೆ ಯನ್ನು ಅಲ್ಲಾಹನು ಸ್ವೀಕರಿಸಿರುವುದಾಗಿ ಇಸ್ಲಾಮಿನ 14 ಶತಮಾನಗಳ ಇತಿಹಾಸವು ಸಾಕ್ಷಿ ಹೇಳುತ್ತದೆ. ಪೈಗಂಬರರ ಬಳಿಕ ಶತಮಾನಗಳು ಕಳೆದ ನಂತರ ಮುಸ್ಲಿಮರಲ್ಲಿ ಅನೇಕ ಅನಾಚಾರಗಳೂ ಅಂಧವಿಶ್ವಾಸ

ಗಳೂ ಬಂದು ಸೇರಿದ ಪೈಕಿ ಕೆಲವರು ಪೈಗಂಬರರ ಅನು ಯಾಯಿಗಳಾದ ಅನೇಕ ಮಹಾಪುರುಷರ ಗೋರಿಗಳನ್ನು ಅಲಂಕರಿಸಿ ಪೂಜಿಸುವ ದುರಾಚಾರಕ್ಕೆ ಬಲಿಯಾದರೂ ಈ ಎಲ್ಲಾ ಸಂತ ಸಾಧುಗಳಿಗಿಂತಲೂ ಅತ್ಯಂತ ಶ್ರೇಷ್ಠ ರಾದ ಮುಹಮ್ಮದ್ ಪೈಗಂಬರರ ಸಮಾಧಿಯು ಇಂದು ಸಹ ಈ ರೀತಿಯ ಅನಾಚಾರಗಳಿಂದ ವಿಮುಕ್ತವಾಗಿದೆ. ಮದೀನದಲ್ಲಿರುವ ಮುಹಮ್ಮದ್ ಪೈಗಂಬರರ ಗೋರಿಯು ಯಾರಿಂದಲೂ ಪೂಜಿಸಲ್ಪಡುವುದಿಲ್ಲ. ಲೇಖಕರು ತನ್ನ ಅಜ್ಞತೆಯನ್ನು ಬಹಿರಂಗಪಡಿಸಿದ್ದಾರೆ—ಅಷ್ಟೆ. ಇಸ್ಲಾಂ ಧರ್ಮದಲ್ಲಿ ಗೋರಿ ಪೂಜೆಯಾಗಲೀ ಮೂರ್ತಿ ಪೂಜೆ ಯಾಗಲೀ ಇಲ್ಲ. ಬಹುಶಃ ಲೇಖಕರು ಯಾರಾದರೂ ನಾಮಧಾರೀ ಮುಸಲ್ಮಾನರ ಮೂಢಾಚಾರಗಳನ್ನು ತನ್ನ ಲೇಖನಕ್ಕೆ ಆಧಾರ ಪಡಿಸಿದ್ದರೆ, ಅದಕ್ಕೆ ಪವಿತ್ರ ಇಸ್ಲಾಂ ಧರ್ಮವು ಹೊಣೆಯಾಗಲಾರದು.

"ಕುರ್‌ಆನಿನಲ್ಲಿ ನಿಜವಾಗಿಯೂ ಕೆಲವು ಉತ್ತಮ ಉಪದೇಶಗಳಿವೆ." ಎಂದು ಹೇಳುತ್ತಾ ಲೇಖಕರು ಈ ರೀತಿ ಬರೆದಿದ್ದಾರೆ: "ಕುರ್‌ಆನಿನಲ್ಲೇ ಅಲ್ ಕಿತಾಬ್ (ಆ ಪುಸ್ತಕ) ಎಂಬ ಉಲ್ಲೇಖ ಬರುತ್ತದೆ. ಆ ಪುಸ್ತಕ ವೆಂದರೆ ಯಾವ ಪುಸ್ತಕ? ಮುಸಲ್ಮಾನರ ಬಳಿಯಲ್ಲಿ ಇದಕ್ಕೆ ಉತ್ತರವಿಲ್ಲ. 'ಆ ಪುಸ್ತಕ'ವೆಂದರೆ 'ವೇದ' ವೆಂದು ನಮ್ಮ ಉತ್ತರ. ವೇದದಲ್ಲಿಯೇ ಸಂಪೂರ್ಣ ಸತ್ಯ ಜ್ಞಾನವು ಅಡಕವಾಗಿದೆ."

ಪವಿತ್ರ ಖುರ್‌ಆನಿನಲ್ಲಿ ಉಲ್ಲೇಖಿತವಾಗಿರುವ 'ಅಲ್‌ಕಿತಾಬ್' ಎಂಬ ಪದಕ್ಕೆ ಯಾವುದೋ ಒಂದು ಗ್ರಂಥವೆಂಬ ಅರ್ಥವಿಲ್ಲ. ಅರಬಿ ಭಾಷೆಯಲ್ಲಿ 'ಅಲ್' ಎಂಬ ಪ್ರತ್ಯಯವು ಒಂದು ಪ್ರತ್ಯೇಕ ವಸ್ತುವಿನ ವಿಶೇಷತೆ ಗಳನ್ನು ಸೂಚಿಸಲು ಉಪಯೋಗಿಸಲ್ಪಡುತ್ತದೆ. "ಅಲ್-ಕಿತಾಬ್" ಎಂದರೆ— ಪ್ರತಿಪಾದಿಸಲ್ಪಟ್ಟ ಆ ಪ್ರತ್ಯೇಕ ಗುಣ ವಿಶೇಷತೆಗಳಿರುವ ಗ್ರಂಥ (The Book)— ಎಂದು ಅರ್ಥ. ಅದು ಯಾವ ಗ್ರಂಥವೆಂಬುದಕ್ಕೆ ಪ್ರತಿಯೊಬ್ಬ ಮುಸಲ್ಮಾನನ ಬಳಿಯೂ ಉತ್ತರವಿದೆ. "ದೇವ ಭಕ್ತಿಯಿರುವ ಸಜ್ಜನರಿಗೆ ಮಾರ್ಗದರ್ಶನ ನೀಡು ವಂತಹ ಪ್ರತ್ಯೇಕ ವಿಶೇಷತೆಗಳಿಂದ ಕೂಡಿದ ಆ ಗ್ರಂಥವೇ ಇದು" ಎಂಬುದಾಗಿ ಖುರ್‌ಆನಿನಲ್ಲಿ ಹೇಳಿರುವುದನ್ನು, ಅದರಿಂದ 'ಅಲ್‌ಕಿತಾಬ್' ಎಂಬ ಪದವನ್ನು ಮಾತ್ರ ಆಯ್ದು ತೆಗೆದು ನಮ್ಮ ಲೇಖಕರು ಅವರ ಆಶಯಕ್ಕೆ ವಿರುದ್ಧವಾದ ರೀತಿಯಲ್ಲಿ ಅದನ್ನು ಅನ್ಯಥಾ ವ್ಯಾಖ್ಯಾನಿಸಿ ದ್ದಾರೆ. 'ಅಲ್‌ಕಿತಾಬ್' ಎಂಬುದು ಪವಿತ್ರ ಖುರ್‌ ಆನಿನ ಕುರಿತಾಗಿಯೇ ಪ್ರಯೋಗಿಸಲ್ಪಟ್ಟ ಪದವೆಂದು ಮುಸಲ್ಮಾನರಿಗೆ ತಿಳಿದಿದೆ. ವೇದ ಪ್ರಕಾಶದವರು ಇಸ್ಲಾಂ ಧರ್ಮವನ್ನು ಅಧ್ಯಯನ ಮಾಡಿದರೆ ಅವರಿಗೂ ಅದು ತಿಳಿಯಬಹುದು.

ಇನ್ನು, ಅಲ್ ಕಿತಾಬ್ ಎಂಬುದರ ತಾತ್ಪರ್ಯ, ಲೇಖಕರು ಹೇಳುತ್ತಿರುವಂತೆಯೇ ಅದು ಪವಿತ್ರ ಖುರ್‌ ಆನಿನಲ್ಲಿ ವೇದಗಳ ಕುರಿತು ಹೇಳಿರುವ ಮಾತು ಎಂಬು ದಾಗಿ ತಿಳಿಯುವುದಾದರೂ ಕೂಡಾ, ಜೇಷ್ಠವರ್ಮನ್ ಸೇರಿದಂತೆ ವೈದಿಕ ಸಾಹಿತ್ಯ ಪ್ರಕಾಶನದ ಎಲ್ಲ ಸದಸ್ಯರೂ ಭಾರತ ಬಹು ಕೋಟಿ ಜನರೂ ಪರಮ ಪವಿತ್ರವೆಂದು ಭಾವಿಸುವ ವೇದಗಳ ಕುರಿತು ಇಸ್ಲಾಂ ಧರ್ಮದ ಪವಿತ್ರ ಗ್ರಂಥವಾದ ಖುರ್‌ಆನಿನಲ್ಲಿ ಉಲ್ಲೇಖವಿರುವ ಕಾರಣ ಪವಿತ್ರ ಖುರ್‌ಆನಿಗೆ ಶ್ರೀಮಾನ್ ಜೇಷ್ಠ ವರ್ಮನ್ ಚಿರ ಋಣಿಯಾಗಬೇಕಾಗಿತ್ತು. ಯಾಕೆಂದರೆ, ಅವರು ತಿಳಿ ದಂತೆ ಅವರ ವೇದ ಗ್ರಂಥದ ಮಹಿಮೆಯನ್ನು ಖುರ್‌ಆನ್ ಎತ್ತಿ ಹಿಡಿದಿದೆ. ಲೇಖಕರಿಗೆ ನೀತಿಪ್ರಜ್ಞೆಯೂ ಸಾಮಾ ನ್ಯ ಜ್ಞಾನವೂ ಇರುತ್ತಿದ್ದರೆ, ಅವರು ಪವಿತ್ರ ಖುರ್‌ಆನ ನ್ನು ಮರ್ಯಾದೆಗೆಟ್ಟ ಮಾತುಗಳಲ್ಲಿ ನಿಂದಿಸುವುದರ ಬದಲು ಇದೊಂದು ಕಾರಣಕ್ಕಾಗಿಯಾದರೂ ಅದನ್ನು ಕೀರ್ತಿಸಬೇಕಿತ್ತು. ಆದರೆ ಅವರು ವಿಪರೀತ ಧೋರಣೆ ಯನ್ನು ಅಂಗೀಕರಿಸಿದ್ದಾರೆ.

ನಿಜವಾಗಿಯೂ ನೋಡಿದರೆ, ದೇವರು ಅವತೀರ್ಣ ಗೊಳಿಸಿದ ಪ್ರತಿಯೊಂದು ದೈವಿಕ ಗ್ರಂಥಗಳನ್ನೂ ಅವುಗಳ ದಿವ್ಯತ್ವದಲ್ಲಿ ನಂಬಿಕೆಯಿಡುವಂತೆ ಪ್ರಬೋಧಿಸುವ ಧರ್ಮ ಗ್ರಂಥವೊಂದು ಈ ಪ್ರಪಂಚದಲ್ಲಿದ್ದರೆ ಅದು ಪವಿತ್ರ ಖುರ್‌ಆನ್ ಮಾತ್ರವೆಂದು ಕಾಣಬಹುದು. ಈ ಲೋಕ ದಲ್ಲಿ ಮಾನವ ಮಾರ್ಗದರ್ಶನಕ್ಕಾಗಿ ವಿವಿಧ ಕಾಲದಲ್ಲೂ ವಿವಿಧ ದೇಶಗಳಲ್ಲೂ ನಿಯೋಗಿತರಾದ ಎಲ್ಲಾ ಪ್ರವಾದಿ ಗಳೂ ಸಹ ಸತ್ಯವಂತರೆಂಬುದಾಗಿ ಘೋಷಿಸಿದ ಏಕಮಾತ್ರ ಧರ್ಮಗ್ರಂಥ ಪ. ಖುರ್‌ಆನ್ ಆಗಿದೆ. ದೇವರಿಂದ ನಿಯೋಗಿತರಾದ ಪ್ರತಿಯೊಬ್ಬ ಪ್ರವಾದಿಯೂ ಸಹ ಸತ್ಯ ವಂತರಾದ ದೇವದೂತರೆಂದೂ ಅದೇ ರೀತಿ ದೇವರಿಂದ ಅವತೀರ್ಣಗೊಂಡ (ಅದು ಮಾನವ ಕಲ್ಯಾಣಕ್ಕಾಗಿ ಪರ ಮಾತ್ಮನಿಂದ ನೀಡಲ್ಪಟ್ಟವುಗಳೆಂದು ರುಜುವಾತಾದಲ್ಲಿ)

ಅಂತಹ ಸಕಲ ವೇದ ಪ್ರಮಾಣಗಳೂ ಸಹ ಪರಮಾತ್ಮನ ಕಡೆಯಿಂದ ಅವತೀರ್ಣಗೊಂಡವುಗಳು ಎಂಬುದಾಗಿ ವಿಶ್ವಾಸ ಹೊಂದದೆ ಇರುವ ಓರ್ವನಿಗೆ ಮುಸಲ್ಮಾನನಾಗಲು ಸಾಧ್ಯವಿಲ್ಲ. ದೇವರಿಂದ ಅವತೀರ್ಣಗೊಂಡ ಸಕಲ ಧಾರ್ಮಿಕ ಗ್ರಂಥಗಳನ್ನೂ ಪವಿತ್ರ ಖುರ್‌ಆನ್ ದಿವ್ಯ ಗ್ರಂಥಗಳೆಂದು ಸಾರಿದೆ. ಇದು ಪವಿತ್ರ ಖುರ್‌ಆನ್ ಕಲಿಸುವ ಇಸ್ಲಾಂ ಧರ್ಮದ ಆಧಾರಭೂತ ಸಿದ್ಧಾಂತಗಳಲ್ಲೊಂದಾಗಿದೆ. ಮತ ಸೌಹಾರ್ದಕ್ಕೆ ಅನಿವಾರ್ಯವಾದಂತಹ ಈ ತತ್ವಬೋಧೆಯು ಪವಿತ್ರ ಖುರ್‌ಆನಿನ ಹೊರತು ಜಗತ್ತಿನ ಇತರ ಯಾವುದೇ ಧರ್ಮಗ್ರಂಥಗಳಲ್ಲೂ ಕಾಣಲು ಸಾಧ್ಯವಿಲ್ಲ. ಈ ಒಂದು ಕಾರಣಕ್ಕಾಗಿಯೇ ಜಗತ್ತಿನ ಎಲ್ಲಾ ಧರ್ಮೀಯರೂ ಪವಿತ್ರ ಖುರ್‌ಆನಿಗೆ ಕೃತಜ್ಞತೆ ಸಲ್ಲಿಸಬೇಕು. ಆದರೆ, ನಮ್ಮ ಲೇಖಕರು ಕೃತಗೇಡಿಯಾಗಿ ಖುರ್‌ಆನನ್ನು ನಿಂದಿಸಿ ಬರೆದಿದ್ದಾರೆ.

ಖುರ್‌ಆನಿನ ಕುರಿತು ಲೇಖಕರ ಇನ್ನೊಂದು ಆರೋಪ ಈ ರೀತಿಯಿದೆ: "ಜೀವಾತ್ಮನಿಗೆ ಕುರ್‌ಆನಿನಲ್ಲಿ ಯಾವ ಮಹತ್ವವೂ ಇಲ್ಲ. ಸ್ವತಂತ್ರ ಅಸ್ತಿತ್ವವೂ ಇಲ್ಲ. ಯಾಕೆಂದರೆ, ಕುರ್‌ಆನಿಗನುಸಾರವಾಗಿ ದೇವರು ಅಭಾವ ಅಥವಾ ಶೂನ್ಯದಿಂದ ಜೀವಾತ್ಮನನ್ನು ಉತ್ಪನ್ನ ಮಾಡಿದ್ದಾನೆ. ಯಾಕೆ? ಅದು ದೇವರಿಗೇ ಗೊತ್ತು. ಹೇಗೆ? ಅವನೇ ಬಲ್ಲ, ಇದರ ಉದ್ದೇಶವೇನು? ಅದೂ ಅವನಿಗೇ ಗೊತ್ತು. ಇಸ್ಲಾಮಿನ ನಂಬಿಕೆಯ ಪ್ರಕಾರ ಜೀವಾತ್ಮನು ಅಕಸ್ಮಾತ್ತಾಗಿ ಉತ್ಪನ್ನನಾಗುತ್ತಾನೆ. ಅವನ ಇತಿಹಾಸವೇನೂ ಇಲ್ಲ. ಈ ರೀತಿಯ ತರ್ಕಶೂನ್ಯ ಮಾತುಗಳು ಇಸ್ಲಾಂ ಸಂಪ್ರದಾಯದಲ್ಲಿ ತುಂಬಾ ಇವೆ....... ಅಭಾವ ಅಥವಾ ಶೂನ್ಯದಿಂದ ಯಾವ ಪದಾರ್ಥವೂ ಉತ್ಪನ್ನವಾಗುವುದಿಲ್ಲವೆಂಬುದು ವೈಜ್ಞಾನಿಕ ಸಿದ್ಧಾಂತ. ಆದರೂ ಇಸ್ಲಾಮಿನ ದೇವರು ಅಭಾವದಿಂದ ಪೃಥ್ವಿಯನ್ನು ಉತ್ಪನ್ನ ಮಾಡಿದ್ದಾನೆ."

ಖುರ್‌ಆನಿನಲ್ಲಿ ಜೀವಾತ್ಮನಿಗೆ ಯಾವುದೇ ಮಹತ್ವವೂ ಇತಿಹಾಸವೂ ಇಲ್ಲವೆಂಬುದಾಗಿ ಬರೆದ ಲೇಖಕರು ಜೀವಾತ್ಮನಿಗೆ ಇಂತಿಂತಹ ಮಹತ್ವವೂ ಇತಿಹಾಸವೂ ವೈದಿಕ ಸಾಹಿತ್ಯಗಳಲ್ಲಿವೆ ಎಂಬುದಾಗಿ ತಿಳಿಸಿದ್ದರೆ, ಅದರ ಮಹತ್ವವನ್ನೂ ಇತಿಹಾಸವನ್ನೂ ನಮಗೆ ತಿಳಿದುಕೊಳ್ಳಬಹುದಿತ್ತು. ಪ್ರಾಯಶಃ ಪವಿತ್ರ ಖುರ್‌ಆನಿನ ಹೊರಕವಚವನ್ನೂ ಸಹ ಕಂಡಿಲ್ಲದ ಲೇಖಕರು ಖುರ್‌ಆನಿನಲ್ಲಿ ಜೀವಾತ್ಮದ ಉಲ್ಲೇಖವಿಲ್ಲವೆಂದು ಹೇಳಿರುವುದು ಆಶ್ಚರ್ಯಕರ. ಜೀವಾತ್ಮದ ಬಗ್ಗೆ, ಅದರ ಸೃಷ್ಟಿಯ ಬಗ್ಗೆ, ಅದರ ಸೃಷ್ಟಿಯ ಉದ್ದೇಶದ ಬಗ್ಗೆ, ಅದರ ಮಹತ್ವದ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಧಾರಾಳ ಉಲ್ಲೇಖಗಳಿವೆ. ವೈದಿಕ ಸಾಹಿತ್ಯಗಳಲ್ಲಿ ಕಾಣಲ್ಪಡುವಂತೆ ಜೀವಾತ್ಮ ಎಂಬುದು ಪ್ರತ್ಯೇಕವಾಗಿ ಆಕಾಶದಿಂದ ಅಥವಾ ಅಂತರಿಕ್ಷದ ಎಲ್ಲಿಂದಲೋ ಭೂಮಿಗೆ ಇಳಿದು ಬಂದು ಅಕಸ್ಮಾತ್ತಾಗಿ ಬೀಜಾಣುವಿನೊಂದಿಗೆ ಕೂಡಿಕೊಂಡು ಗರ್ಭಿಣಿಯ ಉದರದಲ್ಲಿ ಪ್ರವೇಶಿಸುವ ಒಂದಾಗಿದೆ ಎಂಬ ಅಸ್ಪಷ್ಟ ನಿರೂಪಣೆಯನ್ನು ದೈವಿಕ ಗ್ರಂಥವಾದ ಪವಿತ್ರ ಖುರ್‌ಆನ್ ಅಲ್ಲಗಳೆಯುತ್ತದೆ. ಪರಮಾತ್ಮನಂತೆಯೇ ಜೀವಾತ್ಮವೂ ಸಹ ಸ್ವಯಂಭೂ ಆಗಿದೆಯೆಂಬ ತತ್ವವನ್ನು ಸಹ ಇಸ್ಲಾಂ ಧರ್ಮವು ಅಂಗೀಕರಿಸುವುದಿಲ್ಲ. ಅದು ಬೀಜಾಣುವಿನೊಂದಿಗೆ ನಿಗೂಢವಾಗಿದ್ದು, ಗರ್ಭಾಶಯದಲ್ಲಿ ಮಾಂಸ ಪಿಂಡದ ಬೆಳವಣಿಗೆಯೊಂದಿಗೆ ಸ್ಪಷ್ಟಗೊಳ್ಳುವ ಒಂದು ತೇಜಸ್ಸಾಗಿದೆ. ಜೀವಾತ್ಮವು ಜೀವನ ಸೃಷ್ಟಿ ಎಂಬುದಾಗಿ ಪ. ಖುರ್‌ಆನ್ ಬೋಧಿಸುತ್ತದೆ.

ದೇವರು ಅಭಾವ ಅಥವಾ ಶೂನ್ಯದಿಂದ ಅಥವಾ ಏನೂ ಇಲ್ಲವಾಗಿದ್ದ ಒಂದು ಅವಸ್ಥೆಯಿಂದ ಜೀವಾತ್ಮನನ್ನು ಮಾತ್ರವಲ್ಲ, ಈ ಬ್ರಹ್ಮಾಂಡದಲ್ಲಿ ಗೋಚರವೂ ಅಗೋಚರವೂ ಆಗಿರುವ ಸಕಲ ಚರಾಚರ ವಸ್ತುಗಳನ್ನೂ ಸೃಷ್ಟಿಸಿದ್ದಾನೆ ಎಂಬುದಾಗಿ ಪವಿತ್ರ ಖುರ್‌ಆನ್ ಅತ್ಯಂತ ಶಕ್ತಿಯುತವಾಗಿ ಘೋಷಿಸುತ್ತದೆ. ಇದರಲ್ಲಿ ಲೇಖಕರು ಕಂಡ ಅವೈಚಾರಿಕತೆ ಏನು? ಇದು, ಏಕ ಪರಮಾತ್ಮನಾದ ದೇವನು ಮಾತ್ರವೇ ಸಕಲ ವಸ್ತುಗಳ ಸೃಷ್ಟಿ ಕರ್ತನೆಂದೂ ("ಖಾಲಿಖು ಕುಲ್ಲಿಶೈಇನ್" –ಪ. ಖುರ್‌ಆನ್) ಉಳಿದ ಎಲ್ಲವೂ ಅವನ ಸೃಷ್ಟಿಗಳೆಂದೂ ನಂಬುವ ಯಾವನೇ ವಿಚಾರವಂತ ಮನುಷ್ಯನಿಂದಲೂ ನಿರಾಕರಿಸಲು ಸಾಧ್ಯವಿಲ್ಲದ ಒಂದು ಸತ್ಯವಾಗಿದೆ. ವೈದಿಕ ಧರ್ಮದ ಅನುಯಾಯಿಯಾಗಿರುವ ನಮ್ಮ ಲೇಖಕರು "ದೇವರು ಅಭಾವ ಅಥವಾ ಶೂನ್ಯದಿಂದ ಜೀವಾತ್ಮನನ್ನು ಉತ್ಪನ್ನ ಮಾಡಿದ್ದಾನೆ. ಯಾಕೆ?" ಎಂದು ಪರಿಹಾಸ್ಯ ಮಾಡಿದ್ದರ ಉದ್ದೇಶವೇನೆಂದು ತಿಳಿದು ಬರುವುದಿಲ್ಲ. "ಅಭಾವ ಅಥವಾ ಶೂನ್ಯದಿಂದ ಯಾವ ಪದಾರ್ಥವೂ ಉತ್ಪನ್ನವಾಗುವುದಿಲ್ಲವೆಂಬುದು ವೈಜ್ಞಾನಿಕ ಸಿದ್ಧಾಂತ. ಆದರೂ ಇಸ್ಲಾಮಿನ ದೇವರು ಅಭಾವದಿಂದ ಪೃಥ್ವಿಯನ್ನು ಉತ್ಪನ್ನ

ಮಾಡಿದ್ದಾನೆ." ಎಂಬುದಾಗಿ ಲೇಖಕರು ಬರೆದಿರುವುದು ಆಶ್ಚರ್ಯಕರ. ಈ ಪೃಥ್ವಿಯೂ ಪೃಥ್ವಿಯಲ್ಲಿರುವ ಸಕಲ ಪದಾರ್ಥಗಳೂ ಇಂದು ಅಸ್ತಿತ್ವದಲ್ಲಿದೆ ಎಂಬುದು ಅಲ್ಲಗಳೆಯಲಾಗದ ಸತ್ಯವಷ್ಟೆ. ಹಾಗಿರುವಲ್ಲಿ ಇಸ್ಲಾಮಿನ ದೇವರಾಗಲೀ ವೈದಿಕ ಧರ್ಮದ ದೇವರೇ ಆಗಲೀ ನಮಗೆ ಇಂದು ಗೋಚರಿಸುತ್ತಿರುವ ಈ ಬ್ರಹ್ಮಾಂಡವನ್ನು ಯಾವ ಮೂಲಧಾತುವಿನ ಸಹಾಯದಿಂದ ಸೃಷ್ಟಿಸಿದನು? ಎಂಬ ಪ್ರಶ್ನೆಗೆ ಲೇಖಕರು ಉತ್ತರಿಸಬೇಕಾಗಿದೆ. ಯಾಕೆಂದರೆ ಅವರ ವಿಜ್ಞಾನ ಪ್ರಕಾರ ಅಭಾವದಿಂದ ಯಾವ ವಸ್ತುವೂ ಉತ್ಪನ್ನವಾಗಲು ಸಾಧ್ಯವಿಲ್ಲ.

ಖಂಡಿತವಾಗಿಯೂ ಇವೆಲ್ಲವುಗಳನ್ನೂ ಅಲ್ಲಾಹನು ಶೂನ್ಯದಿಂದ ಸೃಷ್ಟಿಸಿದನು ಎಂಬುದಾಗಿ ಪವಿತ್ರ ಖುರ್ಆನ್ ಅಸಂದಿಗ್ಧವಾಗಿ ಘೋಷಿಸುತ್ತದೆ. ಆದುದರಿಂದಲೇ ದೇವರನ್ನು ಸೃಷ್ಟಿಕರ್ತನೆಂದು ಹೇಳುವುದು. ಏನೂ ಇಲ್ಲದ ಅವಸ್ಥೆಯಿಂದ ಏನನ್ನೂ ಸೃಷ್ಟಿಸಲು ಪರಮಾತ್ಮನಿಗೆ ಸಾಧ್ಯವಿಲ್ಲವೆಂದಾದರೆ ನಾವು ಕಾಣುತ್ತಿರುವ ಈ ಭೂತ ವಸ್ತುಗಳ ಸೃಷ್ಟಿ ಹೇಗೆ ಉಂಟಾಯಿತು? ಲೇಖಕರು ತನ್ನ ಅಡಗಿಸಲಾಗದ ಇಸ್ಲಾಂ ಧರ್ಮ ದ್ವೇಷದಿಂದಾಗಿ ನಾಸ್ತಿಕ ವಾದದತ್ತ ತಿರುಗಿದ್ದಾರೆ. ಇಸ್ಲಾಂ ಧರ್ಮವನ್ನು ಅವಹೇಳಿಸುವ ಗೋಜಿನಲ್ಲಿ ಅವರಿಗೆ ತಾನು ಏನು ಬರೆಯುತ್ತಿರುವೆನೆಂಬ ಪ್ರಜ್ಞೆಯೇ ಇಲ್ಲವಾದಂತಿದೆ.

ಜೇಷ್ಮ ವರ್ಮನರ ಲೇಖನ ಮುಂದುವರಿಯುತ್ತಿದೆ: ಪೃಥ್ವಿ ಮತ್ತು ಆಕಾಶವನ್ನು ನಿರ್ಮಿಸಲು ಅವನಿಗೆ ಆರು ದಿನಗಳು ತಾಗಿದವು! ಏಳನೆಯ ದಿನದಲ್ಲಿ ಅವನು ತಾನಾಗಿಯೇ ಸಾರ್ವಭೌಮ ರಾಜನಂತೆ ಸಿಂಹಾಸನವನ್ನೇರಿದನು! ಸೂರ್ಯನೇ ಇಲ್ಲದಾಗ ಆರು ದಿನಗಳ ಲೆಕ್ಕ ಹೇಗೆ ಮಾಡಲಾಯಿತು ಎಂಬುದನ್ನು ಖುರ್ಆನಿನಲ್ಲಿ ವಿವರಿಸಲಿಲ್ಲ... ಈ ರೀತಿಯ ಬುದ್ಧಿ ಅಥವಾ ವಿಜ್ಞಾನಕ್ಕೆ ವಿರುದ್ಧವಾಗಿರುವ ಮಾತುಗಳು ಖುರ್ಆನಿನಲ್ಲಿ ತುಂಬಾ ಇವೆ."

ಭೂಮಿಯೂ ಸೌರವ್ಯೂಹದ ಇತರ ಗೋಳಗಳೂ ನಾವು ಇಂದು ತಿಳಿದಿರುವಂತಹ ಈ ಅವಸ್ಥೆಗೆ ಬರಬೇಕಾದರೆ, ಪ್ರಧಾನವಾದ ಆರು ಪರಿಣಾಮ ಘಟ್ಟಗಳನ್ನು ಹಾದು ಬಂದಿವೆಯೆಂದೂ ಸೃಷ್ಟಿಕರ್ತನೂ ಪರಿಪಾಲಕನೂ ಆದ ದೇವನು ಈ ಪ್ರಪಂಚವನ್ನು ಪರಿವರ್ತನೆಗಳಿಗೆ ಗುರಿಪಡಿಸಿದ ನಂತರ ಈ ರೀತಿಯ ಪರಿಪೂರ್ಣತೆಗೆ ತಂದಿರುವನೆಂಬುದಾಗಿಯೂ ಪವಿತ್ರ ಖುರ್ಆನ್ ಹೇಳಿರುವುದನ್ನು ನಮ್ಮ ಲೇಖಕರು ಅವರಿಗೆ ಮನಬಂದಂತೆ ಭಾಷಾಂತರಿಸಿ ಅವಹೇಳಿಸಿದ್ದಾರೆ – ಅಷ್ಟೆ. ಅವರು ಬರೆದಿರುವ ಆರು ದಿನಗಳು ಎಂಬುದಕ್ಕೆ "ಆರು ಪರಿಣಾಮ ಘಟ್ಟಗಳು" (Six periods) ಎಂಬುದಾಗಿ ಅರ್ಥವಿರುವಾಗ ನಂತರದ ಅವರ ಪ್ರಶ್ನೆಗಳಿಗೆ ಆಸ್ಪದವೇ ಇರುವುದಿಲ್ಲ. ಪವಿತ್ರ ಖುರ್ಆನಿನಲ್ಲಿ ಉಲ್ಲೇಖವಾಗಿರುವ ಸಾರಸಂಪೂರ್ಣವೂ ಸನ್ಮಾರ್ಗದರ್ಶಕವೂ ಆದ ಜ್ಞಾನ ಸಂಪತ್ತನ್ನು ಗ್ರಹಿಸಿಕೊಳ್ಳಬೇಕಾದರೆ, ಆ ಪವಿತ್ರ ಗ್ರಂಥವನ್ನು ಶುದ್ಧವಾದ ಹೃದಯದಿಂದ ಸಮಗ್ರವಾಗಿ ಪಾರಾಯಣ ಮಾಡಬೇಕು. ಅವೈಚಾರಿಕವೂ ಯಥಾರ್ಥ ವಿಜ್ಞಾನಕ್ಕೆ ವಿರುದ್ಧವೂ ಆದ ಯಾವುದೂ ಪವಿತ್ರ ಖುರ್ಆನಿನಲ್ಲಿಲ್ಲ. ಆದರೆ, ಆ ಪವಿತ್ರ ಗ್ರಂಥದಲ್ಲಿರುವ ಜ್ಞಾನ ಭಂಡಾರವನ್ನು ಕರಗತಮಾಡಿಕೊಳ್ಳಬೇಕಾದ ಸನ್ಮನಸ್ಸು ಹಾಗೂ ವಿಚಾರಶುದ್ಧಿಯು ಓದುವವರಲ್ಲಿ ಇರಬೇಕು. "ಲಾ ಯಮುಸ್ಸಹು ಇಲ್ಲಲ್ ಮುತಹ್ಹರೂನ್"—"ಆತ್ಮ ಶುದ್ಧಿಯಿಲ್ಲದವರಿಗೆ ಇದನ್ನು ಸ್ಪರ್ಶಿಸಲು ಸಾಧ್ಯವಿಲ್ಲ" (56 : 80) ಎಂಬುದಾಗಿ ಪವಿತ್ರ ಖುರ್ಆನ್ ತಾನೇ ಅದರ ಕುರಿತು ಹೇಳುತ್ತದೆ.

ವಿಚಾರ ಶೂನ್ಯವೂ ವಿಜ್ಞಾನಕ್ಕೆ ವಿರುದ್ಧವೂ ಆದ ಮಾತುಗಳು ಖುರ್ಆನಿನಲ್ಲಿ ತುಂಬಾ ಇವೆ ಎಂಬುದಾಗಿ ತನ್ನ ಲೇಖನದಲ್ಲಿ ಹಲವು ಬಾರಿ ಹೇಳಿರುವ ಜೇಷ್ಮ ವರ್ಮನ್ ತಾನು ಈಶ್ವರೀಯ ಗ್ರಂಥವಾಗಿ ನಂಬಿರುವ ವೇದಗಳಲ್ಲಿ "ಸಂಪೂರ್ಣ ಸತ್ಯಜ್ಞಾನವು ಅಡಕವಾಗಿದೆ" ಎಂದು ಬರೆದಿರುವರು. ವೇದಗಳನ್ನು ವಿಮರ್ಶಿಸುವ ಉದ್ದೇಶ ನನಗಿಲ್ಲ. ಆದರೆ, ಲೇಖಕರು ತಿಳಿದಿರಲೆಂಬ ಉದ್ದೇಶದಿಂದ ವೇದಗಳಲ್ಲಿ ಕಂಡು ಬರುವ ಒಂದು ಪ್ರಸಂಗಾವಲೋಕವನ್ನು ಇಲ್ಲಿ ಉಲ್ಲೇಖಿಸುತ್ತೇನೆ.

ವೇದಗಳು ಹೇಳುತ್ತಿರುವಂತೆ ಸೂರ್ಯ ಮೊದಲು ಈ ಭೂಮಿಯಲ್ಲೇ ಇತ್ತು. ನಂತರ ಅದನ್ನು ಆಕಾಶಕ್ಕೆ ಕೊಂಡೊಯ್ದು ಅಲ್ಲಿ ಇಡಲಾಗಿದೆ. ಸೂರ್ಯ ಈ ಭೂಮಿಯಲ್ಲಿತ್ತು ಎಂಬುದಾಗಿ ಹೇಳುವುದು ಖಗೋಳ ಶಾಸ್ತ್ರ ವಿಜ್ಞಾನ ಪ್ರಕಾರ ಎಷ್ಟೊಂದು "ಸಂಪೂರ್ಣ ಸತ್ಯಜ್ಞಾನ"ವಾಗಿದೆ ಎಂದು ಇಲ್ಲಿ ಹೇಳಬೇಕಾಗಿಲ್ಲ. ಆದರೆ, ನಂತರ ಅದನ್ನು ಆಕಾಶಕ್ಕೆ ಕೊಂಡೊಯ್ಯುವ ಕೆಲಸವನ್ನು ಯಾರು ನಿರ್ವಹಿಸಿದರು ಎಂಬುದಕ್ಕೂ ಸಹ ವೇದಗಳಲ್ಲಿ ಪರಸ್ಪರ ವಿರುದ್ಧವಾದ ಹಲವಾರು ಉಲ್ಲೇಖಗಳು ಕಾಣಲ್ಪಡುತ್ತವೆ. ಕೃಷ್ಣ ಯಜುರ್ವೇದ ತೈತ್ತಿರಿಯ ಸಂಹಿತೆ

ಯಲ್ಲಿ (7:1) ಭೂಮಿಯಲ್ಲಿದ್ದ ಸೂರ್ಯನನ್ನು ದೇವತೆಗಳು ಆಕಾಶಕ್ಕೆ ಹೊತ್ತುಕೊಂಡು ಹೋಗಿ ಅಲ್ಲಿ ಇಟ್ಟರು ಎಂದು ಹೇಳಲಾಗಿದೆ. ಋಗ್ವೇದದಲ್ಲಿ (10-156-4) ಸೂರ್ಯನನ್ನು ಭೂಮಿಯಿಂದ ಆಕಾಶಕ್ಕೊಯ್ದುದು ಅಗ್ನಿದೇವ ಎಂಬುದಾಗಿ ಹೇಳಲಾಗಿದೆ. ಇದೇ ಋಗ್ವೇದವು ಇನ್ನೊಂದೆಡೆಯಲ್ಲಿ (8-12-30) ಈ ಕಾರ್ಯವನ್ನು ಮಾಡಿದುದು ಇಂದ್ರನೆಂಬುದಾಗಿ ಹೇಳುತ್ತದೆ. ಋಗ್ವೇದದಲ್ಲೇ ಮತ್ತೊಂದೆಡೆಯಲ್ಲಿ (10-62-3) ಅತ್ರಿಯೆಂಬ ಋಷಿಯು ಸೂರ್ಯನನ್ನು ಭೂಮಿಯಿಂದ ಯಾರ ಸಹಾಯವೂ ಇಲ್ಲದೆ ಆಕಾಶಕ್ಕೆ ಸಾಗಿಸಿದನೆಂಬುದಾಗಿ ಹೇಳಲಾಗಿದೆ. ಈ ವಿವರಣೆಗಳಲ್ಲಿ ಅಡಕವಾಗಿರುವ "ಸಂಪೂರ್ಣ ಸತ್ಯ ಜ್ಞಾನ"ಗಳನ್ನೂ ವಿಚಾರಬದ್ಧತೆಯನ್ನೂ ಜೇಷ್ಠ ವರ್ಮನ್ ಆಗಲೀ ವೇದಪ್ರಕಾಶದ ಸಂಪಾದಕರಾಗಲೀ ತಿಳಿಸಿಕೊಡುವರೆಂದಾದರೆ ತಿಳಿಯಲು ನಮಗೆ ಕುತೂಹಲವಿದೆ.

ಜೇಷ್ಠ ವರ್ಮನ್ ತನ್ನ ಲೇಖನದಲ್ಲಿ "ಇಸ್ಲಾಮಿನ ಸ್ವರ್ಗವು ಆಕಾಶದ ಯಾವುದೋ ಒಂದು ಕಡೆಯಲ್ಲಿದೆ. ಅಲ್ಲಿ ಹಾಲು, ಜೇನು ತುಪ್ಪ, ಸುರಾ ಮತ್ತು ಸುಂದರಿಯರಿದ್ದಾರೆ" ಎಂದು ಹೇಳಿ ನಂತರ ವಿಸ್ತಾರವಾದ ಒಂದು ವಿವರಣೆಯ ಬಳಿಕ "ಸ್ವಲ್ಪವಾದರೂ ವಿವೇಕವಿದ್ದವರು ಇಂತಹ ಮಾತುಗಳನ್ನು ನಂಬಬಹುದೇ" ಎಂದು ಪ್ರಶ್ನಿಸಿದ್ದಾರೆ.

ಮನುಷ್ಯರು ಈ ಲೋಕದಲ್ಲಿ ಕೈಗೊಳ್ಳುವ ಜೀವಿತ ಕ್ರಮಕ್ಕೆ ತಕ್ಕ ಪ್ರತಿಫಲವು ಮರಣಾನಂತರ ಅವರಿಗೆ ಲಭಿಸುವುದು ಎಂಬುದಾಗಿ ಪ್ರತಿಯೊಂದು ಧರ್ಮವೂ ಹೇಳುತ್ತದೆ. ದೇವರ ಆಜ್ಞೆಗಳನ್ನು ಪಾಲಿಸಿ, ಇತರರಿಗೆ ಉಪಕಾರಿಯಾಗಿ ಜೀವಿಸಿದ ಸದ್ಧರ್ಮಿಗಳಿಗೆ ಪರಲೋಕದಲ್ಲಿ ಸ್ವರ್ಗವೆಂಬ ಅನುಗ್ರಹವಿದೆಯೆಂದೂ, ದೇವರ ಆಜ್ಞೆಗಳನ್ನು ಉಲ್ಲಂಘಿಸಿ ಧಿಕ್ಕಾರ ಜೀವನವನ್ನು ನಡೆಸುವ ದುಷ್ಕರ್ಮಿಗಳಿಗೆ ಪರಲೋಕದಲ್ಲಿ ನರಕವೆಂಬ ಶಿಕ್ಷೆಯೂ ಇದೆಯೆಂಬುದಾಗಿ ಸಕಲ ಧರ್ಮಗಳೂ ಬೋಧಿಸುತ್ತವೆ. ಸ್ವರ್ಗ ನರಕಗಳ ಬಗ್ಗೆ ಉಲ್ಲೇಖಗಳಿಲ್ಲದ ಯಾವುದೇ ಧರ್ಮವೂ ಈ ಲೋಕದಲ್ಲಿರಲಾರದು. ಯಾಕೆಂದರೆ, ಪರಲೋಕ ವಿಶ್ವಾಸವು ಪ್ರತಿಯೊಂದು ಧರ್ಮದ ಹಾಗೂ ಧರ್ಮ ತತ್ವಗಳ ಕೇಂದ್ರ ಬಿಂದುವಾಗಿದೆ.

ಸ್ವರ್ಗದಲ್ಲಿ ಲಭ್ಯವಾಗಲಿರುವ ಆರಾಮ, ಐಶ್ವರ್ಯ, ಸುಖ, ಭೋಗಗಳ ಕುರಿತು ಹಾಗೂ ನರಕದಲ್ಲಿ ಅನುಭವಿಸಬೇಕಾದ ಕಷ್ಟ ಕಾರ್ಪಣ್ಯಗಳ ಕುರಿತು ವಿವಿಧ ಧರ್ಮಗ್ರಂಥಗಳಲ್ಲಿ ವಿಭಿನ್ನವಾದ ವಿವರಣೆಗಳು ಕಾಣಲ್ಪಡುತ್ತವೆ. ವೈದಿಕ ಸಾಹಿತ್ಯಗಳಲ್ಲಿ ಸಹ ಸ್ವರ್ಗ ಮತ್ತು ನರಕಗಳ ಪ್ರಸ್ತಾಪವಿದೆ. ನರಕದಲ್ಲಿನ ಕಷ್ಟಗಳ ಬಗ್ಗೆಯೂ ಅದರ ವಿಧಾನಗಳ ಬಗ್ಗೆಯೂ ವೈದಿಕ ಸಾಹಿತ್ಯಗಳಲ್ಲಿ ಉಲ್ಲೇಖಗಳಿವೆ. ಅದೇ ರೀತಿ ಸ್ವರ್ಗದ ಕುರಿತು ಉಲ್ಲೇಖಗಳೂ ಇವೆ. ವೈದಿಕ ಸಾಹಿತ್ಯಗಳಲ್ಲಿ ಕಂಡು ಬರುವ ಈ ವಿವರಣೆಗಳನ್ನು ಅಕ್ಷರಾರ್ಥದಲ್ಲೇ ಪರಿಗಣಿಸಿದರೆ "ಅಂತಹ ಮಾತುಗಳನ್ನು ಸ್ವಲ್ಪವಾದರೂ ವಿವೇಕವಿರುವವರು ನಂಬುವರೇ?" ಖಂಡಿತವಾಗಿಯೂ ಇಲ್ಲ. ಅವುಗಳನ್ನು ಆಧ್ಯಾತ್ಮಿಕವಾಗಿ ವ್ಯಾಖ್ಯಾನಿಸಬೇಕಾಗಿದೆ.

ಪವಿತ್ರ ಖುರ್‌ಆನಿನಲ್ಲಿ ಸಹ ಸ್ವರ್ಗ ಮತ್ತು ನರಕದ ಧಾರಾಳ ವಿವರಣೆಗಳಿವೆ. ಮರಣಾನಂತರ ಅನುಭವಿಸಕ್ಕಿರುವ ಅವಸ್ಥೆಗಳ ಕುರಿತು ಮನುಷ್ಯರಿಗೆ ಗ್ರಹಿಸಲು ಸಾಧ್ಯವಾಗುವ ರೀತಿಯಲ್ಲಿ ಉಪಮಾಲಂಕಾರದ ಉದಾಹರಣೆಗಳನ್ನು ನೀಡುತ್ತಾ ಪವಿತ್ರ ಖುರ್‌ಆನ್ ಸ್ವರ್ಗದ ಕುರಿತು ಪ್ರಸ್ತಾಪಿಸಿದೆ. ಈ ಭೌತಿಕ ಪ್ರಪಂಚಕ್ಕಿಂತ ತೀರಾ ಭಿನ್ನವಾದ ಮತ್ತೊಂದು ಲೋಕದ ಕುರಿತು ಪ್ರತಿಪಾದಿಸುವಾಗ ಕೇವಲ ಸಾಂಕೇತಿಕ (Symbolic) ರೂಪದಲ್ಲಿ ಮಾತ್ರವೇ ಅದನ್ನು ವಿವರಿಸಲು ಸಾಧ್ಯವಿದೆ ಎಂಬುದನ್ನು ಜೇಷ್ಠ ವರ್ಮನ್ ತಿಳಿಯಬೇಕು. ಪವಿತ್ರ ಖುರ್‌ಆನಿನಲ್ಲಿ ಸ್ವರ್ಗದ ಕುರಿತು ವಿವರಿಸಿದ ಒಂದು ವಚನವನ್ನು ನೋಡಿರಿ: "ಸತ್ಕರ್ಮಿಗಳಿಗೆ ವಾಗ್ದಾನ ಮಾಡಲ್ಪಟ್ಟ ಸ್ವರ್ಗದ ಉಪಮೆಯು ಈ ರೀತಿಯಿದೆ – ಅದರ ಕೆಳಬದಿಯಲ್ಲಿ ನದಿಗಳು ಹರಿಯುತ್ತಿರುವುವು. ಅದರ ಫಲಗಳೂ ಅದರ ನೆರಳೂ ಶಾಶ್ವತವಾಗಿರುವುವು." (13:36)

ಸ್ವರ್ಗದ ಕುರಿತು ಪ್ರತಿಪಾದಿಸಿರುವ ಮೇಲಿನ ವಚನದಲ್ಲಿ "ಉಪಮೆಯು (ಮಸಲು)" ಎಂಬ ಪದವನ್ನು ಪ್ರಯೋಗಿಸಲಾಗಿರುವುದು ಅತ್ಯಂತ ಗಮನಾರ್ಹವಾಗಿದೆ. 'ಮಸಲು' ಎಂಬ ಅರಬಿ ಪದಕ್ಕೆ ಆಲಂಕಾರಿಕ (Allegory) ಅಥವಾ ಉಪಮೆ ಎಂದು ಅರ್ಥ. ಒಂದು ವಿಷಯವು ಮನಸ್ಸಿಗೆ ಹಿಡಿಯುವಂತೆ ಅದೇ ರೀತಿಯ ಮತ್ತೊಂದನ್ನು ಉದಾಹರಿಸಿ ಹೇಳುವುದೇ ಉಪಮಾಲಂಕಾರ ಎಂಬುದರ ತಾತ್ಪರ್ಯ. ಆದುದರಿಂದ ಸ್ವರ್ಗದಲ್ಲಿ ಲಭ್ಯವಾಗಲಿರುವ

ಆಧ್ಯಾತ್ಮಿಕ ಅನುಭೂತಿಗಳಿಗೂ ಈ ಪ್ರಾಪಂಚಿಕ ಭೋಗ ವಸ್ತುಗಳಾದ ಹಾಲು, ಜೇನು, ಫಲಗಳು, ಸುಂದರಿಯರು ಎಂಬಿತ್ಯಾದಿಗಳೊಂದಿಗೆ ಕೇವಲ ಸಾಮ್ಯತೆಯಲ್ಲದೆ ಬೇರಾವ ಸಂಬಂಧವೂ ಇಲ್ಲವೆಂಬುದಾಗಿ ಮೇಲಿನ ಖುರ್‌ಆನ್ ವಾಕ್ಯ ದಿಂದ ವ್ಯಕ್ತವಾಗುತ್ತದೆ.

ಇಸ್ಲಾಂ ಧರ್ಮವನ್ನು ಅಧಿಕೃತವಾಗಿ ಈ ಕಾಲದಲ್ಲಿ ವ್ಯಾಖ್ಯಾನಿಸಲು ಅಲ್ಲಾಹನಿಂದ ನಿಯೋಗಿತರಾದ ವಾಗ್ದತ್ತ ಮಸೀಹಾ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ರವರು ಈ ಕುರಿತು ಬರೆದಿರುವ ಕೆಲವು ಪಂಕ್ತಿಗಳನ್ನು ಇಲ್ಲಿ ಸೇರಿಸುವುದು ಸಂದರ್ಭೋಚಿತವೆಂದು ಭಾವಿಸುತ್ತೇನೆ. ಹಝ್ರತ್ ಅಹ್ಮದ್ (ಅ) ಈ ರೀತಿ ಹೇಳಿದ್ದಾರೆ ;

"ಪರಲೋಕದ ಈ ಅನುಭವಗಳ ಕುರಿತು (ಅಂದರೆ ಸ್ವರ್ಗದ ಕುರಿತು—ಲೇ.) ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ :—

ಫಲಾ ತಅ್‌ಲಮು ನಫ್‌ಸುನ್ ಮಾ ಉಖ್ ಫಿಯ ಲಹುಂ ಮಿನ್ ಕುರ್‍ರತಿ ಅಅ್‌ಯುನಿನ್" (32 : 18).

ಸಚ್ಚರಿತರಾದ ಭಕ್ತಜನರಿಗೋಸ್ಕರ ಗೋಪ್ಯ ವಾಗಿರಿಸಿದ ಅನುಗ್ರಹಗಳು ಯಾವ್ಯಾವೆಂದು ಯಾವುದೇ ಆತ್ಮವೂ ತಿಳಿದಿರುವುದಿಲ್ಲ.

ಈ ದೈವ ವಾಕ್ಯ ನಮಗೆ ತಿಳಿಸಿಕೊಡುವುದೇನೆಂದರೆ ಭಕ್ತ ಜನರಿಗೆ ಪರಲೋಕದಲ್ಲಿ ಲಭ್ಯವಾಗುವ ದಿವ್ಯಾನು ಗ್ರಹಗಳು ಯಾರಿಗೂ ಪರಿಚಿತವಲ್ಲ, ಅವು ರಹಸ್ಯವಾ ಗಿವೆ; ಹಾಗೆ ಈ ಲೋಕದ ಭೌತಿಕ ವೈಭವಗಳೊಂದಿಗೆ ಸಾಮ್ಯತೆಯಿಲ್ಲದವೂ ಆಗಿವೆ. ಆದರೆ ಈ ಲೋಕದ ಅನುಗ್ರಹಕರವಾದ ಭೋಗ ವಸ್ತುಗಳಾದರೋ ನಮಗೆ ಅಜ್ಞಾತವಲ್ಲವಷ್ಟೆ. ದಾಳಿಂಬೆ, ದ್ರಾಕ್ಷೆ, ಹಾಲು ಮೊದ ಲಾದ ಭೌತಿಕ ವೈಭವಗಳನ್ನು ನಾವು ಹಲವು ಸಲ ರುಚಿ ಸಿರುತ್ತೇವೆ. ಆದ್ದರಿಂದ ಅವು ಗುಪ್ತವಾಗಿರಿಸಿದ ಸ್ವರ್ಗೀಯ ಅನುಗ್ರಹಗಳಲ್ಲಿ ಒಳಗೊಳ್ಳಲಾರವೆಂಬುದು ಸ್ಪಷ್ಟ. ಅವುಗಳಿಗೆ ಸ್ವರ್ಗೀಯ ವೈಭವಗಳೊಂದಿಗೆ ನಾಮಧೇಯಗಳಲ್ಲಿ ವಿನಾ ಬೇರೆ ಯಾವ ಸಾದೃಶ್ಯವೂ ಇಲ್ಲ. ಹಾಗಿರುವಾಗ, ಸ್ವರ್ಗವು ಭೌತಿಕಾನುಗ್ರಹಗಳ ಭಂಡಾರವೆಂದು ತಿಳಿದುಕೊಂಡಿರುವವರು ಯಾರೂ ಪವಿತ್ರ ಖುರ್‌ಆನನ್ನು ಲವಲೇಶವಾದರೂ ಅರಿತು ಕೊಂಡಿಲ್ಲವೆಂದು ಹೇಳಬಹುದು.

ಮೇಲೆ ಉದ್ಧರಿಸಿದ ಖುರ್‌ಆನ್ ವಾಕ್ಯದ ವ್ಯಾ ಖ್ಯಾನವಾಗಿ ಮುಹಮ್ಮದ್ ಪೈಗಂಬರ್ (ಸ.) ಹೇಳಿರು ವುದೇನೆಂದರೆ, ಸ್ವರ್ಗ ಮತ್ತು ಅದರ ಅನುಗ್ರಹಗಳನ್ನು ಯಾವುದೇ ಕಿವಿ ಕೇಳಿಲ್ಲ, ಯಾವುದೇ ಕಣ್ಣು ಕಂಡಿಲ್ಲ, ಯಾವುದೇ ಹೃದಯ ಸ್ಪರ್ಶಿಸಲಿಲ್ಲ. ಭೌತಿಕಾನುಗ್ರಹಗ ಳಾದರೋ ದೃಷ್ಟಿಗೆ ಗೋಚರವಾಗುತ್ತವೆ, ಕರ್ಣೇಂದ್ರಿ ಯಕ್ಕೆ ಕೇಳಿಸುತ್ತವೆ ಮತ್ತು ಹೃದಯಕ್ಕೆ ಸ್ಪರ್ಶವಾಗುತ್ತ ವೆಯಷ್ಟೆ. ಸರ್ವಜ್ಞನಾದ ದೇವನು ಮತ್ತು ಅವನ ಪ್ರವಾದಿ ಸ್ವರ್ಗದ ವೈಭವಗಳು ಇಂದ್ರಿಯಾತೀತವೆಂದು ಸ್ಪಷ್ಟವಾಗಿ ಹೇಳಿರುವಾಗ, ಹಸುಗಳ ಅಥವಾ ಎಮ್ಮೆಗಳ ಹಾಲು ಸ್ವರ್ಗದಲ್ಲಿ ನದಿಗಳೋಪಾದಿಯಲ್ಲಿ ಹರಿಯುವು ದೆಂದು ನಂಬುವುದಾದರೆ ನಾವು ಪವಿತ್ರ ಖುರ್‌ಆನಿನಿಂದ ದೂರಕ್ಕೆ ಸರಿಯುವೆವು. ಸ್ವರ್ಗದ ಆ ಅನುಗ್ರಹಗಳು ಭೌತಿಕ ವೈಭವಗಳಿಂದ ಕೂಡಿದವು ಆಗಿದ್ದರೆ, ಅಲ್ಲಿ ಅಪಾರ ಹೈನಸಂಪತ್ತು ಮತ್ತು ವೃಕ್ಷಗಳ ಮೇಲೆ ಅಗಣಿತ ಜೇನು ಗೂಡುಗಳು ಇರಬೇಕಾಗಿವೆಯೆಂದೂ ಅನೇಕ ದೇವ ದೂತರು ಹಾಲನ್ನೂ ಜೇನನ್ನೂ ಶೇಖರಿಸಿ ನದಿಗಳಲ್ಲಿ ಹರಿಯಿಸುವ ಕೆಲಸದಲ್ಲಿ ನಿಯುಕ್ತರಾಗಿರಬೇಕಾಗಿದೆಯೆಂದೂ ನಂಬಬೇಕಾದೀತು. ಸ್ವರ್ಗೀಯ ವೈಭವಗಳು ಈ ಲೋಕಕ್ಕೆ ಪರಿಚಿತವಲ್ಲವೆಂದು ಪ್ರಸ್ತಾವಿಸುವ ವಚನಗಳು ಅಡಕವಾದ ಪವಿತ್ರ ಖುರ್‌ಆನಿನ ಅಧ್ಯಾಪನಕ್ಕೆ ಈ ರೀತಿಯ ವಿಶ್ವಾಸವು ಅನುಯೋಜ್ಯವಾಗುವುದೇ? ಆ ಅನುಗ್ರಹಗಳು ಆತ್ಮವನ್ನು ಪ್ರಕಾಶಗೊಳಿಸಿ ದೈವಜ್ಞಾನವನ್ನು ವೃದ್ಧಿ ಗೊಳಿಸುವ ಆತ್ಮಭೋಜನವೆಂದು ಖುರ್‌ಆನ್ ಕಲಿಸುತ್ತದೆ. ಈ ಸ್ವರ್ಗಾನುಗ್ರಹಗಳು ಭೌತಿಕ ವಸ್ತುಗಳಂತೆ ಸಾದೃಶ್ಯ ರೂಪದಲ್ಲಿ ಖುರ್‌ಆನಿನಲ್ಲಿ ವಿವರಿಸಲ್ಪಟ್ಟಿದರೂ ಅವುಗಳ ಉದ್ಭವ ಆಧ್ಯಾತ್ಮಿಕತೆ ಮತ್ತು ನೈತಿಕತೆಯನ್ನು ಆಧರಿಸಿ ಕೊಂಡಿದೆಯೆಂದು ಸಂಗಡವೇ ಹೇಳಲಾಗಿದೆ."*

ಸ್ವರ್ಗೀಯ ಅನುಭೂತಿಗಳು ಈ ಪ್ರಪಂಚದ ಅನು ಭವಕ್ಕಿಂತ ಸಂಪೂರ್ಣಭಿನ್ನವಾಗಿರುವಾಗ, ಅದನ್ನು ಈ ಪ್ರಾಪಂಚಿಕ ವಸ್ತುಗಳೊಂದಿಗೆ ಖುರ್‌ಆನ್ ಯಾಕೆ ಉಪ ಮಿಸುತ್ತದೆ ಎಂಬ ಒಂದು ಸಂಶಯವು ಇಲ್ಲಿ ಉದ್ಭವಿಸ ಬಹುದು. ಅದಕ್ಕೆ ಕಾರಣ, ಪರಲೋಕದಲ್ಲಿ ಅನುಭವ

---

* ಇಸ್ಲಾಂ ಮತ ತತ್ವಜ್ಞಾನ;
ಅನುವಾದ—ಮುಹಮ್ಮದ್ ಯೂಸುಫ್

ಸಿದ್ಧವಾಗಲಿರುವ ಅವಸ್ಥೆಗಳ ಕುರಿತು ಒಂದು ಸಂಕ್ಷಿಪ್ತ ಭಾವನೆಯನ್ನು ಮನುಷ್ಯರಲ್ಲಿ ಪಂಡಿತ–ಪಾಮರ ವ್ಯತ್ಯಾಸ ವಿಲ್ಲದೆ ಸರ್ವರಿಗೂ ತಿಳಿಸಿಕೊಡಬೇಕಾದ ಅಗತ್ಯವಿದೆ. ಪವಿತ್ರ ಖುರ್ಆನ್ ಲೋಕದ ಸಮಸ್ತ ಜನವಿಭಾಗಗಳಿಗೂ ಅನ್ವಯವಾಗುವಂತಹ ಮಾರ್ಗದರ್ಶನವನ್ನು ಒಳಗೊಂಡಿದೆಯೆಂದು ಅದು ಸಾರುತ್ತದೆ. ಆದುದರಿಂದ ಸ್ವರ್ಗದ ಕುರಿತು ಪ್ರತಿಪಾದಿಸುವಾಗಲೆಲ್ಲಾ ಪವಿತ್ರ ಖುರ್ಆನಿನಲ್ಲಿ ದೈನಂದಿನ ಜೀವನದಲ್ಲಿ ನಮಗೆ ಅನುಭವಸಿದ್ಧವಾಗುವ ವಸ್ತುಗಳನ್ನು ಉದಾಹರಿಸಿ ತೋರಿಸಲಾಗಿದೆ. ಆಧ್ಯಾತ್ಮಿಕತೆಯ ಗಂಧಗಾಳಿಯಿಲ್ಲದ ಜೇಷ್ಠವರ್ಮನಂತಹವರು ಹಾಲು, ಜೇನು, ಸುಂದರಿಯರು ಎಂದು ಬಾಯಿ ಚಪ್ಪರಿಸಿದರೆ ಅದು ಖುರ್ಆನಿನ ತಪ್ಪಾಗಲಾರದು. ಪವಿತ್ರ ಖುರ್ಆನ್ ಒಂದು ಆಧ್ಯಾತ್ಮಿಕ ಗ್ರಂಥವಾಗಿದೆ.

ಜೇಷ್ಠವರ್ಮನ್ ತನ್ನ ಲೇಖನದಲ್ಲಿ ಒಂದು ಪೌರಾಣಿಕ ಕಥೆಯನ್ನು ವಿವರಿಸಿದ್ದಾರೆ. ಆ ಕಥೆಯ ಪ್ರಕಾರ ಆರನೆಯ ಶತಮಾನದಲ್ಲಿ ಭೋಜ ದೇವನೆಂಬ ರಾಜನು ತನ್ನ ರಾಜ್ಯವನ್ನು ವಿಸ್ತರಿಸುವ ಉದ್ದೇಶದಿಂದ ಮುಹಮ್ಮದ್ ಪೈಗಂಬರ್ ಮತ್ತು ಅವರ ಅನುಯಾಯಿಗಳೊಂದಿಗೆ ಯುದ್ಧ ಮಾಡಿದನಂತೆ. ಭೋಜದೇವನ ಸೇನಾಧಿಪತಿಯಾದ ಕಾಳಿದಾಸನು ಮುಹಮ್ಮದ್ ಪೈಗಂಬರರನ್ನು ಸದೆಬಡಿದು ಅವರ ಅನುಯಾಯಿಗಳೊಂದಿಗೆ ಸುಟ್ಟು ಹಾಕಿದನಂತೆ. ಹೀಗೆ ಮುಹಮ್ಮದ್ ಪೈಗಂಬರರ ಅನುಯಾಯಿಗಳಿಗೆ ಅವರ ಹೆಣವೂ ಸಹ ಸಿಗಲಿಲ್ಲವಂತೆ. ಅವರ ಬೂದಿಯ ಮೇಲೆಯೇ ಮದೀನದಲ್ಲಿ ಸಮಾಧಿಯನ್ನು ಕಟ್ಟಲಾಯಿತಂತೆ.

"ಪ್ರೊ॥" ಎಂಬ ಬಿರುದು ಹೊಂದಿರುವ ಶ್ರೀ ಜೇಷ್ಠವರ್ಮನರ ಭಾವನಾ ಸಾಮ್ರಾಜ್ಯದಿಂದ ಉದಯಗೊಂಡ ಹಾಗೂ ವೇದಪ್ರಕಾಶ ಮಾಸಿಕವು ಯಾವುದೇ ಸಂಕೋಚವೂ ಇಲ್ಲದೆ ಪ್ರಕಟಿಸಿದ ಮೇಲಿನ ಕಥೆಯ ಕುರಿತು ನಾನು ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲು ಬಯಸುವುದಿಲ್ಲ. ಜಗತ್ತಿನ ಮುಂದೆ ಒಂದು ತೆರೆದ ಪುಸ್ತಕವಂತಿರುವ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆಯೂ ಲೋಕದ ಇತಿಹಾಸ ಗ್ರಂಥಗಳ ತಾಳೆಗಳೂ ವೇದಪ್ರಕಾಶದ ಈ ಕಥೆಯನ್ನು ಕೇಳಿ ನಗೆಯಾಡುತ್ತಿವೆ.

ಇಸ್ಲಾಂ ಧರ್ಮ, ಪವಿತ್ರ ಖುರ್ಆನ್ ಮತ್ತು ಮುಹಮ್ಮದ್ ಪೈಗಂಬರರ ಮೇಲೆ ಲೇಖಕರಿಗಿರುವ ದ್ವೇಷಾಗ್ನಿಯ ಎಲ್ಲಾ ಕೆಂಡಗಳನ್ನು ಕಾರಿದ ಬಳಿಕ ಅವರು ಕೆಲವು ಪಾಶ್ಚಾತ್ಯ ಪಂಡಿತರ ಅಭಿಪ್ರಾಯಗಳನ್ನು ಸಹ ತನ್ನ ಲೇಖನದಲ್ಲಿ ಪೋಣಿಸಿದ್ದಾರೆ. ಅದು, ಜೇಷ್ಠವರ್ಮನ್ ರಂತೆ ಇಸ್ಲಾಂ ಧರ್ಮವನ್ನು ಅಂಧವಾಗಿ ವಿರೋಧಿಸುವ ಯಾರೋ ವಿರೋಧಿಗಳ ಹೇಳಿಕೆಗಳಾಗಿರಬಹುದು. ಆ ಉದ್ಧರಣೆಗಳಲ್ಲಿ ಬರೆದಿರುವುದು, ಇಸ್ಲಾಂ ಧರ್ಮವು ಸಾದ್ಯಂತ ಶರಾಬು, ವ್ಯಭಿಚಾರ, ರಕ್ತಪಾತ ಇತ್ಯಾದಿಗಳಿಂದ ಕೂಡಿದ ಧರ್ಮವಾಗಿದೆ ಎಂದೂ ಯಾರು ಖುರ್ಆನ್ ಪಾಠ ಮಾಡುತ್ತಾರೆಯೋ ಮತ್ತು ಅದಕ್ಕನುಸಾರವಾಗಿ ನಡೆಯುತ್ತಾರೆಯೋ ಅವರು ಕ್ರೂರರೂ ಕಾಮುಕರೂ ಆಗಿ ಬೆಳೆಯುತ್ತಾರೆ ಎಂದೂ ಇನ್ನೂ ಏನೇನೋ ಬರೆದಿರುತ್ತಾರೆ.

ಮಾನವ ಕುಲಕ್ಕೆ ದಾರಿದೀಪವಾಗಿರುವ, ಮನುಷ್ಯರಲ್ಲಿ ಅತ್ಯುತ್ತಮವಾದ ಧಾರ್ಮಿಕ ಗುಣಗಳನ್ನು ಉಂಟು ಮಾಡಲು ಪ್ರೇರಕವಾದ ಅತ್ಯಮೂಲ್ಯ ತತ್ವೋಪದೇಶಗಳನ್ನೊಳಗೊಂಡ ದೈವಿಕ ಗ್ರಂಥವಾದ ಪವಿತ್ರ ಖುರ್ಆನನ್ನು ಒಮ್ಮೆಯಾದರೂ ಓದಿ ನೋಡಿದ್ದರೆ ಈ ರೀತಿ ಬರೆಯಲು ಲೇಖಕರಾಗಲೀ ಪ್ರಕಾಶಕರಾಗಲೀ ಮುಂದಾಗುತ್ತಿರಲಿಲ್ಲ. ಅವರ ತಿಳುವಳಿಕೆಗಾಗಿ, ಪವಿತ್ರ ಖುರ್ಆನಿನಲ್ಲಿ ಉತ್ತಮ ಧಾರ್ಮಿಕ ಗುಣಗಳ ಬಗ್ಗೆ ನೀಡಲಾದ ಉಪದೇಶಗಳಲ್ಲಿ ಕೆಲವನ್ನು ಮಾತ್ರ ಕೆಳಗೆ ಉದ್ಧರಿಸುತ್ತೇನೆ. ಪವಿತ್ರ ಖುರ್ಆನ್ ಹೇಳುತ್ತದೆ:

> ಮದ್ಯಪಾನ, ಜೂಜಾಟ, ಮೂರ್ತಿ ಪೂಜೆ, ಶಕುನ ದರ್ಶನ ಇವೆಲ್ಲಾ ಅಶುದ್ಧವೂ ಪೈಶಾಚಿಕವೂ ಆದ ಕರ್ಮಗಳಾಗಿವೆ. ಆದುದರಿಂದ ನೀವು ವಿಜಯಿಗಳಾಗಲು ಅವುಗಳನ್ನು ವರ್ಜಿಸಿರಿ. (ಪವಿತ್ರ ಖುರ್ಆನ್ 5 : 91)*
>
> ನೀವು ವ್ಯಭಿಚಾರವನ್ನು ಸಮೀಪಿಸದಿರಿ; ಆ ಭಾವನೆಯು ಉಂಟಾಗಲು ಆಸ್ಪದವಿರುವ ಸಂದರ್ಭಗಳಿಂದಲೂ ಆ ಪಾಪವು ಸಂಭವಿಸಬಹುದೆಂಬ ಸಂಶಯವಿರುವ ಮಾರ್ಗಗಳಿಂದಲೂ ದೂರ ಸರಿಯಿರಿ. ವ್ಯಭಿಚಾರವು ಘೋರವಾದೊಂದು ಅಪರಾಧವಾಗಿದೆ. (24 : 31)*
>
> ನೀವು ಪರಸ್ಪರ ಅನ್ಯಾಯದ ಮಾರ್ಗದಲ್ಲಿ ಧನ ಸಂಗ್ರಹ ಮಾಡಿ ಅದನ್ನು ತಿನ್ನದಿರಿ. ಅಂತೆಯೇ ನೀವು ತಿಳಿದೂ ಇತರರ ಸಂಪತ್ತಿನ ಒಂದು ಭಾಗವನ್ನು ಅನ್ಯಾಯವಾಗಿ ಸ್ವಾಯತ್ತ ಮಾಡಿಕೊಳ್ಳಲು

ಅಧಿಕಾರಿಗಳಿಗೆ ರುಷುವತ್ತನ್ನು ನೀಡಬೇಡಿರಿ. (2 : 189)*

ನಿಮ್ಮ ಬಳಿ ಅಮಾನತು ಮಾಡಲ್ಪಟ್ಟ (ವಿಶ್ವಾಸದಿಂದ ನಿಮ್ಮಲ್ಲಿ ತಾತ್ಕಾಲಿಕವಾಗಿ ನೀಡಲಾದ) ಸ್ವತ್ತನ್ನು ಅದರ ಹಕ್ಕುದಾರರಿಗೆ ಹಿಂದಿರುಗಿಸಲು ಅಲ್ಲಾಹು ನಿಮ್ಮೊಡನೆ ಆಜ್ಞಾಪಿಸುತ್ತಾನೆ. (4 : 59)*

ಜನರಿಗೆ ಅವರ ವಸ್ತುಗಳಲ್ಲಿ ಯಾವರೀತಿಯ ಕೊರತೆಯನ್ನೂ ಮಾಡದಿರಿ. ದುರುದ್ದೇಶದಿಂದ ಅಂದರೆ ಮೋಸ, ಕಳ್ಳತನ, ಕಿಸೆಗಳ್ಳತನ ಅಥವಾ ಬೇರಾವ ಮಾರ್ಗದಿಂದಲೂ ಅನ್ಯರ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನೀವು ಭೂಮಿಯಲ್ಲಿ ಸಂಚರಿಸದಿರಿ. (26 : 184)*

ನೀವು ಪರಸ್ಪರ ಶಾಂತಿಯಿಂದಲೂ ಸೌಮ್ಯತೆಯಿಂದಲೂ ವರ್ತಿಸಿರಿ (8 : 2)*

ಎಲೈ ವಿಶ್ವಾಸಿಗಳೇ, ನೀವು ನ್ಯಾಯವಾದ ಮಾರ್ಗದಲ್ಲಿ ಸಂಪಾದಿಸಿದ (ಕಳ್ಳತನ, ಲಂಚ, ವಂಚನೆ, ಅಪಹಾರ ಎಂಬಿತ್ಯಾದಿ ಮಾರ್ಗದಿಂದ ಅಥವಾ ನ್ಯಾಯಬಾಹಿರವಾದ ಇನ್ನಾವುದೇ ರೀತಿಯಲ್ಲಿ ಸಂಪಾದಿಸಿದ ಯಾವುದೂ ಒಳಗೊಂಡಿರದ) ಸಂಪತ್ತಿನಿಂದ ದಾನ ಧರ್ಮವಾಗಿಯೋ ಸಹಾಯ ಧನವಾಗಿಯೋ ಜನರಿಗೆ ನೀಡಿರಿ. ಅನ್ಯಾಯವಾದ ಗಳಿಕೆಯಿಂದ ದಾನ ನೀಡುವ ಭಾವನೆಯು ನಿಮ್ಮ ಹೃದಯದಿಂದ ದೂರವಾಗಲಿ. (2 : 268)*

ವಿಶ್ವಾಸಿಗಳೊಡನೆ, ಅವರ ದೃಷ್ಟಿಗಳನ್ನು ಪರಸ್ತ್ರೀ ದರ್ಶನದಿಂದ ತಡೆಯುವಂತೆಯೂ ಕಾಮವಿಕಾರವು ಕೆರಳಲು ಕಾರಣವಾಗುವ ಸ್ತ್ರೀಯರನ್ನು ನೋಡದಿರುವಂತೆ ತಮ್ಮ ದೃಷ್ಟಿಯನ್ನು ಕೆಳಮುಖವಾಗಿಡುವಂತೆಯೂ ಅವರ ರಹಸ್ಯಾಂಗಗಳನ್ನು ನಿರ್ಬಂಧವಾಗಿಯೂ ಹತೋಟಿಯಲ್ಲಿಡುವಂತೆಯೂ ಅದೇ ರೀತಿ ಅವರ ಕರ್ಣಪಟಲಗಳನ್ನು ಅನ್ಯ ಸ್ತ್ರೀಯರ ಮಧುರಗಾನಗಳನ್ನೂ ಶೃಂಗಾರ ಕಥೆಗಳನ್ನೂ ಕೇಳದಂತೆ ಅಂಕೆಯಲ್ಲಿಡುವಂತೆಯೂ ಹೇಳಿರಿ. ಇದು ದೃಷ್ಟಿಗಳನ್ನೂ ಶ್ರವಣೇಂದ್ರಿಯಗಳನ್ನೂ ಪರಿಶುದ್ಧವಾಗಿರಿಸುವ ಉತ್ತಮ ಮಾರ್ಗವಾಗಿದೆ. (24 : 31)*

* ಇಸ್ಲಾಂ ಮತ ತತ್ವಜ್ಞಾನ—ಹಝ್ರತ್ ಅಹ್ಮದ್

ಈ ರೀತಿಯ ಏಳುನೂರರಷ್ಟು ಆಜ್ಞೆಗಳನ್ನು ಒಳಗೊಂಡಿರುವ ಪವಿತ್ರ ಖುರ್‌ಆನನ್ನು "ಯಾರು ಪಾಠ ಮಾಡುತ್ತಾರೆಯೋ ಅವರು ಕ್ರೂರರೂ ಕಾಮುಕರೂ ಆಗಿ ಬೆಳೆಯುತ್ತಾರೆ" ಎಂದೂ "ಇಸ್ಲಾಂ ಧರ್ಮವು ಸಾದ್ಯಂತ ಶರಾಬು, ವ್ಯಭಿಚಾರ, ರಕ್ತಪಾತ ಇತ್ಯಾದಿಗಳಿಂದ ಕೂಡಿದ ಧರ್ಮವಾಗಿದೆ" ಎಂದೂ ಆರೋಪಿಸುವುದರಲ್ಲಿ ಏನು ಸತ್ಯಾಂಶವಿದೆಯೆಂದು ನಿಷ್ಪಕ್ಷ ವಾಚಕರೇ ತೀರ್ಮಾನಿಸಿಕೊಳ್ಳಲಿ.

ಯಥಾರ್ಥವು ನೇರ ವಿರುದ್ಧವಾಗಿದೆ. ಲೇಖಕರು ಕಾಣಿಸಿದ ಎಲ್ಲಾ ದುರಾಚಾರಗಳನ್ನೂ ಇಸ್ಲಾಂ ಧರ್ಮವು ನಿರೋಧಿಸಿದೆ. ಹಝ್ರತ್ ಮುಹಮ್ಮದ್ ಪೈಗಂಬರರು ಪವಿತ್ರ ಖುರ್‌ಆನಿನ ಉಪದೇಶಗಳನ್ನು ಸಾರುತ್ತಾ ಅರೇಬ್ಯಾದ ಜನರೆಡೆಯಲ್ಲಿ ರೂಢಮೂಲವಾಗಿದ್ದ ಎಲ್ಲಾ ಪೈಶಾಚಿಕ ದುರಾಚಾರಗಳನ್ನೂ ನಿರ್ಮೂಲನ ಮಾಡುವುದರಲ್ಲಿ ವಿಜಯಿಯಾದರು. ಮದ್ಯಪಾನ, ಜೂಜಾಟ, ವ್ಯಭಿಚಾರ ಮೊದಲಾದ ಎಲ್ಲ ತರದ ದುರಾಚಾರಗಳೂ ಅಂದಿನ ಇಡೀ ಅರೇಬ್ಯಾದಲ್ಲಿ ವ್ಯಾಪಿಸಿತ್ತು. ಮುಹಮ್ಮದ್ ಪೈಗಂಬರರಿಗೆ ದೇವರು ಅವತೀರ್ಣಗೊಳಿಸಿದ ಸಂಪೂರ್ಣ ಸತ್ಯಜ್ಞಾನದ ಉಜ್ವಲ ಪ್ರಕಾಶದಿಂದ ಅವರು ತನ್ನ ಜನತೆಯ ಮಧ್ಯೆ ಒಂದು ಅದ್ಭುತಕರವಾದ ಮಾರ್ಪಾಟನ್ನು ಸೃಷ್ಟಿಸಿದರು. ಹಾಗೆ ತನ್ನ ಅನುಯಾಯಿಗಳನ್ನು ಇತಿಹಾಸದಲ್ಲಿ ಉದಾಹರಣೆ ಲಭಿಸಿದಂತಹ ರೀತಿಯಲ್ಲಿ ಸಂಸ್ಕರಿಸಿ ಅವರನ್ನು ಪ್ರಜ್ಞಾವಂತಿಕೆಯ ಮತ್ತು ಧಾರ್ಮಿಕತೆಯ ಅತ್ಯುನ್ನತ ಸ್ಥಾನಕ್ಕೇರಿಸಿದರು. ಮದ್ಯಪಾನ ಮತ್ತು ಜೂಜಾಟದ ಮೇಲೆ ಇಸ್ಲಾಮಿನ ಪ್ರವಾದಿಯು ಪೂರ್ಣವಾದೊಂದು ವೀಟೊ ಪ್ರಯೋಗಿಸಿ ಅತಿ ಮಹತ್ತಾದ ಪರಿವರ್ತನೆಯೊಂದನ್ನು ಜಾರಿಗೆ ತಂದರು. ಇತಿಹಾಸವು ಸಾಕ್ಷಿ ಹೇಳುತ್ತದೆ—ಮದ್ಯಪಾನವನ್ನು ನಿರೋಧಿಸುವ ಆಜ್ಞೆಯು ಅಲ್ಲಾಹನಿಂದ ಪೈಗಂಬರರಿಗೆ ಲಭಿಸಿದಾಗ, ಈ ದೈವಾಜ್ಞೆಯ ಕುರಿತು ಅವರು ತನ್ನ ಅನುಯಾಯಿಗಳಿಗೆ ಭೋಧಿಸಿದರು. ಕ್ಷಣಮಾತ್ರದಲ್ಲೇ ಮದ್ಯದ ಪೀಪಾಯಿಗಳು ಒಡೆಯಲ್ಪಟ್ಟವು. ಮದೀನಾದ ಬೀದಿಗಳಲ್ಲಿ ಮದ್ಯಸಾರವು ಅನಿಯಂತ್ರಿತವಾಗಿ ಹರಿದವು. ಅಂದಿನಿಂದ ಇಸ್ಲಾಮಿನಲ್ಲಿ ಮದ್ಯ ನಿಷೇಧ ಜಾರಿಯಾಯಿತು. ವಿಖ್ಯಾತ ಚಿಂತಕರಾದ ರೆವೆರೆಂಡ್ ಬೋಸ್‌ವರ್ತ್ ಸ್ಮಿತ್ (Rev. Bosworth Smith) ಹೇಳುತ್ತಾರೆ:

"ಮುಹಮ್ಮದ್ ತನ್ನ ನಿಯಂತ್ರಣದಲ್ಲಿದ್ದ ವಿಶಾಲವಾದ ಕಾರ್ಯಕ್ಷೇತ್ರದಲ್ಲಿ ಒಮ್ಮಿಂದೊಮ್ಮೆಲೇ ಜೂಜು ಮತ್ತು ಮಾದಕ ದ್ರವ್ಯಗಳನ್ನು ಸಂಪೂರ್ಣವಾಗಿ ನಿಷೇಧಿಸುತ್ತಾ ಐರೋಪ್ಯ ಸಮಾಜದ ಎರಡು ಮಹಾದೊಡ್ಡ ಕೆಡುಕುಗಳನ್ನು ತನ್ನ ಜನತೆಯಿಂದ ನಿರ್ಮೂಲನ ಮಾಡಿಕೊಂಡು ಅತಿ ಮಹತ್ವದ ಕಾರ್ಯವನ್ನು ಸಾಧಿಸಿದ್ದಾರೆ. ಹತ್ತೊಂಭತ್ತನೆಯ ಶತಮಾನದ ಕ್ರೈಸ್ತ ಸಾಮ್ರಾಜ್ಯಗಳು ಈ ಕೆಟ್ಟ ಚಾಳಿಯ ತೀವ್ರ ಬೆಳವಣಿಗೆಯ ಕುರಿತು ಈಗ ಎಚ್ಚರಗೊಳ್ಳಲು ಪ್ರಾರಂಭಿಸಿದೆಯಷ್ಟೆ."

(Muhammad & Muhammadanism
Page 207)

ಇದು ಇಸ್ಲಾಮಿನ ಪ್ರವಾದಿಯಾದ ಹಝ್ರತ್ ಮುಹಮ್ಮದ್ ಪೈಗಂಬರರ ಪ್ರಬಲವಾದ ನೈತಿಕ ಶಕ್ತಿಯ ಒಂದು ಉದಾಹರಣೆ ಮಾತ್ರ. ಆಧುನಿಕ ಅಮೇರಿಕಾ ಮತ್ತು ಯುರೋಪ್ ಸಾಮ್ರಾಜ್ಯಗಳು ಪರಿಹಾರ ಕಾಣಲು ಸಂಪೂರ್ಣ ವಿಫಲವಾಗಿರುವ ಎರಡು ಮಹಾ ಕೆಡುಕುಗಳನ್ನು ಖುರ್‌ಆನಿನ ಒಂದು ಆಜ್ಞೆಯ ಮೂಲಕ ಪೈಗಂಬರರು ಒಂದೇ ಒಂದು ಸಂಜ್ಞೆಯಲ್ಲಿ ಸಂಪೂರ್ಣ ನಿರೋಧಿಸಿದರು. "ಇಸ್ಲಾಂ ಸಾದ್ಯಂತ ಶರಾಬು, ವ್ಯಭಿಚಾರ, ರಕ್ತಪಾತಗಳಿಂದ ಕೂಡಿದ ಸಂಪ್ರದಾಯವಾಗಿದೆ." ಎಂದು ವೇದ ಪ್ರಕಾಶ ಹೇಳುತ್ತದೆ. ಅದರ ಕಾಮಾಲೆ ಕಣ್ಣಿಗೆ ತಕ್ಷಣವೇ ಚಿಕಿತ್ಸೆ ಪಡೆದುಕೊಳ್ಳಬೇಕಾದುದು ಅತ್ಯಗತ್ಯ.

ವೇದಪ್ರಕಾಶದ ಲೇಖನದಲ್ಲಿ ಲೇಖಕ ಜೇಪ್ಪವರ್ಮನ್ ತನ್ನಂತಹ ಕೆಲವು ಇಸ್ಲಾಂ ಧರ್ಮ ವಿರೋಧಿಗಳು ಉದ್ಧರಿಸಿದ ಮಾತುಗಳನ್ನು ಎತ್ತಿ ಹೇಳಿದ್ದಾರೆ. ಅವರ್ಯಾರೂ ಸಹ ಇಸ್ಲಾಂ ಧರ್ಮದ ಬಗ್ಗೆ, ಪವಿತ್ರ ಖುರ್‌ಆನ್ ಮತ್ತು ಮುಹಮ್ಮದ್ ಪೈಗಂಬರರ ಜೀವಿತ ಕ್ರಮಗಳ ಬಗ್ಗೆ ಏನೂ ಅಧ್ಯಯನ ನಡೆಸಿದವರಲ್ಲವೆಂದು ಅವರ ಹೇಳಿಕೆಗಳೇ ಕರೆದು ಹೇಳುತ್ತವೆ. ಇಸ್ಲಾಂ ಧರ್ಮದ ಕುರಿತು ಸಮಗ್ರವಾಗಿ ಅಧ್ಯಯನ ನಡೆಸಿದ ಬಳಿಕ ವಿಶ್ವ ವಿಖ್ಯಾತ ತತ್ವಜ್ಞಾನಿಗಳೂ ಮಹಾ ಪುರುಷರೂ ವಿದ್ವಾಂಸರೂ ಇಸ್ಲಾಂ ಧರ್ಮದ ಬಗ್ಗೆ ಸೂಚಿಸಿರುವ ತಮ್ಮ ಅಭಿಪ್ರಾಯಗಳಲ್ಲಿ ಕೆಲವನ್ನು ಇಲ್ಲಿ ಉದ್ಧರಿಸುತ್ತೇನೆ. ವೇದಪ್ರಕಾಶದ ಉದ್ಧರಣೆಗಳಿಗೆ ಮರು ಉದ್ಧರಣೆಗಳಲ್ಲದೆ ಇನ್ನೇನು ಉತ್ತರ ನೀಡಲಿ !

ಹಝ್ರತ್ ಮುಹಮ್ಮದ್ ಪೈಗಂಬರರ ಕುರಿತು ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು 'ಹರಿಜನ' ಎಂಬ ಪತ್ರಿಕೆಯಲ್ಲಿ ಈ ರೀತಿ ಬರೆದಿದ್ದಾರೆ :

"ಇಸ್ಲಾಂ ಧರ್ಮದ ಪ್ರವಾದಿಯಾದ ಮುಹಮ್ಮದ್ ಪೈಗಂಬರರ ನಿಷ್ಕಪಟ ಹಾಗೂ ಸರಳವಾದ ಜೀವನ ಕ್ರಮಗಳು ನನ್ನ ಮೇಲೆ ತುಂಬಾ ಪ್ರಭಾವ ಬೀರಿದೆ. ಅವರ ಪ್ರಾಮಾಣಿಕವಾದ ಪವಿತ್ರ ಜೀವನ ಕ್ರಮವು ಮುಸ್ಲಿಮರಿಗೂ ಮುಸ್ಲಿಮೇತರರಿಗೂ ಕೂಡಾ ಆದರ್ಶಪ್ರಾಯವಾಗಿರುತ್ತದೆ. ಈ ಜಗತ್ತು ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದಾಗ ಮುಹಮ್ಮದ್ ಪೈಗಂಬರರು ಪ್ರಬೋಧಿಸಿದ ಇಸ್ಲಾಂ ಧರ್ಮವು ಜಗತ್ತಿಗೆ ಜ್ಞಾನದೀವಿಗೆಯನ್ನು ನೀಡಿತು. ಪ್ರಪಂಚದ ಎಲ್ಲಾ ಜನರಿಗೂ ಮುಹಮ್ಮದ್ ಪೈಗಂಬರರ ಸಂದೇಶದಿಂದ ಹೆಚ್ಚಿನ ಪ್ರಯೋಜನ ಉಂಟಾಗಿದೆ."

ಮಹಾತ್ಮಾ ಗಾಂಧೀಜಿಯವರು ಮತ್ತೂ ಇಸ್ಲಾಂ ಧರ್ಮದ ಕುರಿತು ಈ ರೀತಿ ಬರೆದರು :

"ಇಸ್ಲಾಂ ಒಂದು ಅಸತ್ಯ ಧರ್ಮವಲ್ಲ, ಅದರ ವೈಭವದ ಕಾಲದಲ್ಲೂ ಅದು ಅಸಹಿಷ್ಣುತೆಯನ್ನು ಹೊಂದಿರಲಿಲ್ಲ. ಅದು ಲೋಕದ ಮೆಚ್ಚುಗೆಯನ್ನು ಗಳಿಸಿದ ಒಂದು ಧರ್ಮವಾಗಿದೆ. ಪಾಶ್ಚಿಮಾತ್ಯವು ಅಂಧಕಾರದಲ್ಲಿ ಮುಳುಗಿ ಹೋಗಿದ್ದ ಆ ಅಜ್ಞಾನದ ಯುಗದಲ್ಲಿ, ಪೂರ್ವದ ಮುಗಿಲಿನಿಂದ ಒಂದು ಉಜ್ವಲ ತಾರೆಯು ಉದಯಿಸಿ ಬಂದು ನರಳಾಡುತ್ತಿದ್ದ ಲೋಕಕ್ಕೆ ಜ್ಞಾನ ಪ್ರಕಾಶವನ್ನೂ ಆಶ್ವಾಸನೆಗಳನ್ನೂ ನೀಡಿತು. ಹಿಂದೂಗಳು ಅದರ ಭಾವನೆಯಿಂದ ಇಸ್ಲಾಂ ಧರ್ಮದ ಕುರಿತು ಅಧ್ಯಯನ ಮಾಡಬೇಕು. ಆಗ ನಾನು ಅದನ್ನು ಪ್ರೀತಿಸುವಂತೆ ಅವರೂ ಸಹ ಅದನ್ನು ಪ್ರೀತಿಸುವರು."

ಮಹಾತ್ಮ ಗಾಂಧೀಜಿ ಮತ್ತೂ ಹೇಳುತ್ತಾರೆ :

"ಜಗತ್ತಿನ ಎಲ್ಲಾ ಧರ್ಮಗಳ ಬಗ್ಗೆ ಅಧ್ಯಯನ ನಡೆಸುವುದು ನನ್ನ ಅಭ್ಯಾಸವಾಗಿದೆ. ನಾನು ಇಸ್ಲಾಂ ಧರ್ಮದ ಬಗ್ಗೆಯೂ ಅಧ್ಯಯನ ಮಾಡಿದ್ದೇನೆ. ಖುರ್‌ಆನಿನ ಭಾಷಾಂತರವನ್ನು ನಾನು ಓದಿರುವೆನು. ಇಸ್ಲಾಂ ಧರ್ಮವು ಶಿಸ್ತು, ಉತ್ತಮ ಗುಣ ನಡತೆ, ಇತ್ಯಾದಿಗಳನ್ನು ಬೋಧಿಸಿ ಜನರನ್ನು ಸನ್ಮಾರ್ಗದಲ್ಲಿ ಚರಿಸುವಂತೆ ಮಾಡುತ್ತದೆ. ಇಸ್ಲಾಂ ಧರ್ಮದಲ್ಲಿ ಮಾನವ ಸಮಾನತೆಯ ಪಾಠವು ಕಲಿಸಲಾಗಿದೆ. ಖುರ್‌ಆನಿನಲ್ಲಿ ಕೇವಲ ಮುಸ್ಲಿಮರಿಗೆ ಮಾತ್ರವಲ್ಲ ಇಡೀ ಮನುಷ್ಯ ಕುಲಕ್ಕೆ ಪ್ರಯೋಜನಕಾರಿಯಾದ ಉಪದೇಶಗಳು ಅಡಕವಾಗಿವೆ."

ವಿಶ್ವವಿಖ್ಯಾತ ತತ್ವಜ್ಞಾನಿ ಜಾರ್ಜ್ ಬರ್ನಾಡ್‌ಶಾ (George Bernard Shaw) ಹೇಳುತ್ತಾರೆ:

"I have always held the religion of Muhmmad in highest esteem because of its wonderful vitality. It is the only religion which appears to me to possess that assimilating capability to the changing phases of existence which can make itself appeal to every age. The world most doubtless attach high value to the predictions of great men like me. I have prophecied about the faith of Muhammad, that it would be acceptable to the Europe of tomorrow, as it is beginning to be accept able to the Europe of today. The Medieaval ecclesiastics, either through ignorance or bigotry, painted Muhammadanism in the darkest colours. They were in fact trained to hate both the Muhammad and his religion. To them Muhammed was anti-Christ. I have studied him, the wonderful man, and in my opinion, far from being anti-Christ, he must be called the saviour of humanity. I believe if a man like him were to assume the dictatorship of the modern world, he would succeed in solving its problems in a way that would bring in the much needed peace and happiness.

I believe, the whole of the British Empire will adopt a reformed Mohammadanism before the end of the Century".

(ON GETTING MARRIED - BERNARD SHAW)

(ಅದ್ಭುತಕರವಾದ ಚೇತನಾಶಕ್ತಿಯಿರುವ ಮುಹಮ್ಮದ್ ಪೈಗಂಬರರ ಧರ್ಮವನ್ನು ನಾನು ಯಾವಾಗಲೂ ಅತ್ಯಂತ ಆದರಣಾಪೂರ್ವಕವಾಗಿ ಮಾತ್ರವೇ ಸ್ಮರಿಸುವೆನು. ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಯೋಗ್ಯ ರೀತಿಯಲ್ಲಿ ಹೊಂದಿಕೊಳ್ಳಲು ಸಾಮರ್ಥ್ಯವಿರುವ, ಎಲ್ಲಾ ಕಾಲಕ್ಕೂ ಅನ್ವಯಿಸುವಂತಹ ಒಂದು ಧರ್ಮ ನನ್ನ ಅಭಿಪ್ರಾಯದಲ್ಲಿ ಅದು ಮಾತ್ರವಾಗಿದೆ. ನಿಸ್ಸಂದೇಹವಾಗಿಯೂ ನನ್ನಂತಹವರ ಭವಿಷ್ಯವಾಣಿಗಳಿಗೆ ಲೋಕವು ಹೆಚ್ಚಿನ ಮಹತ್ವವನ್ನು ಕಲ್ಪಿಸುವುದು ಖಂಡಿತ. ನಾನು ಈಗಾಗಲೇ ಭವಿಷ್ಯ ನುಡಿದಿರುವೆನು–ಇಂದಿನ ಐರೋಪ್ಯ ರಾಷ್ಟ್ರಗಳಿಗೆ ಮುಹಮ್ಮದರ ಧರ್ಮವು ಸ್ವೀಕಾರ ಯೋಗ್ಯವೆಂದು ತೋರಲು ತೊಡಗಿರುವಂತೆಯೇ ನಾಳಿನ ಐರೋಪ್ಯ ರಾಷ್ಟ್ರಗಳಿಗೂ, ಸ್ವೀಕಾರ ಯೋಗ್ಯವಾದ ಧರ್ಮವು ಅದೊಂದೇ ಆಗಿರುವುದು. ಮಧ್ಯಕಾಲೀನ ಕ್ರೈಸ್ತ ಧರ್ಮೋಪದೇಶಕರು, ಅಜ್ಞಾನದ ನಿಮಿತ್ತವಾಗಿಯೋ ಅಥವಾ ಮತಾಂಧತೆಯ ಕಾರಣದಿಂದಲೋ ಮುಹಮ್ಮದರ ಧರ್ಮವನ್ನು ಮಸಿಬಳಿದು ತೋರಿಸಿದರು. ಮುಹಮ್ಮದರನ್ನೂ ಅವರ ಧರ್ಮವನ್ನೂ ಅಸಹ್ಯವಾಗಿ ದ್ವೇಷಿಸಲು ಅವರಿಗೆ ತರಬೇತಿ ನೀಡಲಾಗುತ್ತಿತ್ತು. ಅವರು ಮುಹಮ್ಮದರನ್ನು ಕ್ರಿಸ್ತ ವಿರೋಧಿ (Anti-Christ) ಯಾಗಿ ಕಂಡರು. ನಾನಾದರೋ ಅವರ ಬಗ್ಗೆ ಅಧ್ಯಯನ ಮಾಡಿರುವೆನು. ಅವರೊಬ್ಬ ಅದ್ಭುತಕರವಾದ ವ್ಯಕ್ತಿ. ನನ್ನ ಅಭಿಪ್ರಾಯದಲ್ಲಿ, ಏಂಟಿಕ್ರೈಸ್ಟ್ ಎನ್ನುವುದರ ಬದಲು ಅವರನ್ನು "ಮನುಷ್ಯ ಸಮುದಾಯದ ಸಂರಕ್ಷಕ"ನೆಂದು ಕರೆಯಬೇಕಾಗಿದೆ. ಅವರಂತಹ ಒಬ್ಬ ವ್ಯಕ್ತಿ ಈ ಆಧುನಿಕ ಲೋಕದ ಏಕಾಧಿಪತಿಯಾಗಿ ಸ್ಥಾನ ವಹಿಸಿಕೊಂಡರೆ, ಇಂದಿನ ಸಮಸ್ಯೆಗಳನ್ನೆಲ್ಲಾ ಪರಿಹರಿಸಿ ನಮಗೆ ಅತಿ ಅಗತ್ಯವಾಗಿರುವ ಶಾಂತಿ ಮತ್ತು ಸೌಖ್ಯವನ್ನು ತರಲು ಅವರಿಗೆ ಸಾಧ್ಯವಿದೆಯೆಂಬುದು ನನ್ನ ನಂಬಿಕೆಯಾಗಿದೆ.

ಈ ಶತಮಾನವು ಕೊನೆಗೊಳ್ಳುವುದರ ಮೊದಲೇ ಇಡೀ ಬ್ರಿಟಿಷ್ ಸಾಮ್ರಾಜ್ಯವು ಒಂದು ಪರಿಷ್ಕೃತ ಇಸ್ಲಾಂ ಧರ್ಮವನ್ನು ಸ್ವೀಕರಿಸುವುದು ಎಂಬುದು ನನ್ನ ವಿಶ್ವಾಸವಾಗಿದೆ.)

ಭಾರತದ ಒಬ್ಬ ವಿಖ್ಯಾತ ಚರಿತ್ರಕಾರ ಡಾ। ತಾರಾಚಂದ್ ಈ ರೀತಿ ಹೇಳಿದ್ದಾರೆ:

"ಅತಿ ಸರಳವಾದ ವಿಶ್ವಾಸ ಸಿದ್ಧಾಂತ, ಸ್ಪಷ್ಟವಾಗಿ ನಿರೂಪಿಸಲಾದ ಧರ್ಮತತ್ವಗಳು ಮತ್ತು ಅವುಗಳ ಅನುಷ್ಠಾನ ಕ್ರಮ, ಪ್ರಜಾಸತ್ತಾತ್ಮಕ ಸಮಾಜ ವ್ಯವಸ್ಥೆ ಇವುಗಳೊಂದಿಗ ಇಸ್ಲಾಂ ಧರ್ಮದ ಉದಯವಾಯಿತು."

"ಅವರು (ಮುಹಮ್ಮದ್) ಪ್ರಬೋಧಿಸಿದ ಧರ್ಮವು ಅತ್ಯಂತ ಸರಳವಾಗಿತ್ತು. ಅದು ಕನಿಷ್ಠವಾದ ಧರ್ಮ

ತತ್ವಗಳನ್ನೂ ಅನುಷ್ಠಾನ ಕ್ರಮಗಳನ್ನೂ ಒಳಗೊಂಡಿತ್ತು. ಯಾಕೆಂದರೆ, 'ಅಲ್ಲಾಹನು ಮನುಷ್ಯರ ಹೊರೆಯನ್ನು ಲಘೂಕರಿಸಲು ಮತ್ತು ಸುಲಭಗೊಳಿಸಲು ಬಯಸುತ್ತಾನೆ' ಎಂಬುದಾಗಿ ಖುರ್‌ಆನ್ ಸಾರುತ್ತದೆ. ಅದರ ಧರ್ಮ ತತ್ವಗಳ ಕೇಂದ್ರ ಬಿಂದು ಏಕದೈವ ಸಿದ್ಧಾಂತವಾಗಿತ್ತು. ಸಮಾಜ ವ್ಯವಸ್ಥೆಯಲ್ಲಿ ಅದರ ಪ್ರಮುಖ ಧೋರಣೆಯು ಸಮಾನತೆ ಮತ್ತು ಸಾಹೋದರ್ಯವಾಗಿತ್ತು. ಅಂತೆಯೇ ಪೌರೋಹಿತ್ಯವನ್ನು ಅದು ಸ್ವೀಕರಿಸಲಿಲ್ಲ". (Influence of Islam page - 34, 51)

ಪ್ರಸಿದ್ಧ ರಾಷ್ಟ್ರಪ್ರೇಮಿಯೂ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರೂ ಆಗಿದ್ದ ಶ್ರೀ ಲಾಲಾ ರಜಪತ್ ರಾಯ್ ಹೇಳುತ್ತಾರೆ:

"ಇಸ್ಲಾಮಿನ ಪ್ರವಾದಿಯ ಮೇಲೆ ನನಗಿರುವ ಗೌರವಾದರಗಳನ್ನು ಬಹಿರಂಗಪಡಿಸಲು ನಾನು ಏನೂ ಹಿಂಜರಿಯುವುದಿಲ್ಲ. ಮತಾಚಾರ್ಯರ ಮತ್ತು ಮತ ಸುಧಾರಕರ ಪೈಕಿ ಅತ್ಯುನ್ನತವಾದ ಪದವಿಯನ್ನು ಅವರು ಅಲಂಕರಿಸುತ್ತಾರೆಂಬುದೇ ನನ್ನ ಅಭಿಪ್ರಾಯ."

ಇಸ್ಲಾಮಿನ ಮಹಾನ್ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರ ಸಂಭವ ಬಹುಲವಾದ ಜೀವನವನ್ನು ವಸ್ತುನಿಷ್ಠವಾಗಿಯೂ ಸತ್ಯಹೃದಯದಿಂದಲೂ ಕಲಿಯುವ ನಿಷ್ಪಕ್ಷ ಚಿಂತಕರಾದ ಯಾರಿಗೂ ಸಹ ಆ ಪರಿಶುದ್ಧವಾದ ಜೀವನ ಕ್ರಮಗಳು ಮನುಷ್ಯ ಕುಲಕ್ಕೆ ದಾರಿದೀಪವಾಗಿದೆಯೆಂದು ತಿಳಿದುಕೊಳ್ಳಲು ಸಾಧ್ಯವಿದೆ. ಇಂದು ಪಾಶ್ಚಾತ್ಯ ತತ್ವ ಚಿಂತಕರೂ ಚರಿತ್ರಕಾರರೂ ಪಕ್ಷಪಾತ ರಹಿತವಾಗಿ ಆ ಪುಣ್ಯಾತ್ಮರ ಜೀವಿತವನ್ನು ಅಧ್ಯಯನ ಮಾಡಿ ತಿಳಿದುಕೊಳ್ಳಲು ತೊಡಗಿರುತ್ತಾರೆ. ಇಸ್ಲಾಮಿನ ತತ್ವೋಪದೇಶಗಳನ್ನು ಅನುಸರಿಸಲಿಕ್ಕೂ ಪೈಗಂಬರರ ಪಾವನ ಜೀವಿತ ಕ್ರಮಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲಿಕ್ಕೂ ಉತ್ಸುಕರಾದ ಒಂದು ತಲೆಮಾರು ಪಾಶ್ಚಾತ್ಯ ದೇಶಗಳಲ್ಲಿ ಬೆಳೆದು ಬರುತ್ತಿರುವುದು ಬಹುಶಃ "ವೇದಪ್ರಕಾಶ"ಕ್ಕೆ ತಿಳಿಯದೆ ಇರಬಹುದು.

ಮುಹಮ್ಮದ್ ಪೈಗಂಬರರ ಕುರಿತು ಲಾಮಾರ್ಟಿನ್ ಎಂಬ ಫ್ರೆಂಚ್ ಚರಿತ್ರೆಕಾರ ತನ್ನ "ಹಿಸ್ಟರಿ ಓಫ್ ದಿ ಟರ್ಕ್" ಎಂಬ ಗ್ರಂಥದಲ್ಲಿ ಉದ್ಧರಿಸಿದ ಪಂಕ್ತಿಗಳು ಗಮನಾರ್ಹವಾಗಿವೆ.

"Philosopher, orator, apostle, legislator, warrior, conqueror of ideas, the restorer of rational beliefs, of a cult without images; the founder of twenty terrestrial empires and one spiritual empire—that is **MUHAMMAD, with regards all standards,** whereby human greatness may be measured we may well ask, 'Is there any man greater than he?' "No man is greater than he".

—History of the Turk - Lamartine

("ತತ್ವಜ್ಞಾನಿ, ವಾಗ್ಮಿ, ದೇವರ ಸಂದೇಶವಾಹಕ, ಶಾಸಕ, ಸೇನಾನಿ, ವಿಚಾರ ವಿಜೇತ, ವೈಚಾರಿಕ ಜ್ಞಾನ ಪ್ರಮಾಣಗಳ ಸ್ಥಾಪಕ, ಮೂರ್ತಿಗಳಿಲ್ಲದ ಆರಾಧನಾ ಕ್ರಮಗಳ ಅಧಿಪ, ಇಪ್ಪತ್ತು ಭೌಮಿಕ ಸಾಮ್ರಾಜ್ಯಗಳ ಮತ್ತು ಒಂದು ಆಧ್ಯಾತ್ಮಿಕ ಸಾಮ್ರಾಜ್ಯದ ಸ್ಥಾಪಕ—ಅವರೇ **ಮುಹಮ್ಮದ್**. ಮನುಷ್ಯ ಶ್ರೇಷ್ಠತೆಯನ್ನಳೆಯುವ ಎಲ್ಲಾ ಮಾನ ದಂಡಗಳನ್ನುಪಯೋಗಿಸಿ ಅಳೆದು ನೋಡಿದರೆ ನಾವು ಪ್ರಶ್ನಿಸಿ ಬಿಡುತ್ತೇವೆ–'ಅವರಿಗಿಂತಲೂ ಶ್ರೇಷ್ಠನಾಗಿ ಮತ್ತೋರ್ವ ವ್ಯಕ್ತಿ ಇರುವರೇ?' ಲಾಮಾರ್ಟಿನ್ ಸ್ವಯಂ ಉತ್ತರಿಸುತ್ತಾರೆ: "ಇಲ್ಲ, ಅವರಿಗಿಂತಲೂ ಶ್ರೇಷ್ಠರಾಗಿ ಮತ್ತಾರೂ ಇಲ್ಲ")

ಹಝ್ರತ್ ಮುಹಮ್ಮದ್ ಪೈಗಂಬರರ ಶ್ರೇಷ್ಠತೆಯನ್ನು ಪ್ರಕೀರ್ತಿಸುತ್ತಾ ಸನ್ಮಾನ್ಯ ಶ್ರೀ ಸಾಧು ಟಿ. ಎನ್. ವಾಸ್ವಾನಿ ಹೇಳಿರುವ ಮಾತುಗಳು ಗಮನಾರ್ಹವಾಗಿವೆ.

"ಜಗತ್ತಿನ ಶ್ರೇಷ್ಠ ನಾಯಕರಲ್ಲಿ ಒಬ್ಬರಾದ ಮುಹಮ್ಮದ್ ಪೈಗಂಬರರನ್ನು ನಾನು ಅಭಿವಂದಿಸುತ್ತೇನೆ! ಅವರೊಬ್ಬ ಜಗತ್‌ಶಕ್ತಿಯಾಗಿದ್ದಾರೆ–ಅನೇಕ ಜನ ಸಮುದಾಯಗಳ ಪುರೋಗತಿಗೆ ಕಾರಣರಾದ ಒಂದು ಮಹತ್ ಶಕ್ತಿ! ಪುರಾತನ ಬರವಣಿಗೆಗಳನ್ನು ಓದಿ ನೋಡಿದರೆ ನಿಮಗೆ ಅವರ ಜೀವಿತದ ಸೌಂದರ್ಯವನ್ನೂ ಸಾರ ಸಂಪೂರ್ಣತೆಯನ್ನೂ ದರ್ಶಿಸಲು ಸಾಧ್ಯವಿದೆ. ಒಬ್ಬ ಸಾಮ್ರಾಟ, ಅದೇ ವೇಳೆಯಲ್ಲಿ ಒಬ್ಬ ಆಧ್ಯಾತ್ಮಿಕ ಗುರು; ಆದರೂ ಸಹ ಅವರು ತನ್ನ ಹರಿದ ವಸ್ತ್ರವನ್ನು ತಾನೇ ಹೊಲಿದು ಸರಿಪಡಿಸುತ್ತಾರೆ. ಅದೃಶ್ಯನಾದ ಪರಮಾತ್ಮನ 'ಎಲೈ ಹೊದಕೆಯೊಳಗಿರುವವನೇ, ಎಚ್ಚೆತ್ತು ಉಪದೇಶಿಸು,' ಎಂಬ ಕರೆಗೆ ಓಗೊಡುತ್ತಾರೆ. ಜನರು ಅವರನ್ನು ಪೀಡಿಸತೊಡಗಿದರು. ಅವರ

ಜೀವಕ್ಕೆ ಅಪಾಯವುಂಟಾಗುವ ಸಂಧಿಗ್ಧ ಪರಿಸ್ಥಿತಿ ಉದ್ಭವವಾಗಿದೆ. ಆದರೆ, ಅವರು ಅದಾವುದನ್ನೂ ಲೆಕ್ಕಿಸದೆ ಆ ದೈವಿಕ ಸಂದೇಶದೊಂದಿಗೆ ಅತ್ಯಂತ ಪ್ರಾಮಾಣಿಕತೆಯಿಂದಲೂ ಭಕ್ತಿಯಿಂದಲೂ ಮುಂದುವರಿಯುತ್ತಾರೆ. ತನ್ನ ಶಾಂತಿ ಮಾರ್ಗವನ್ನು ಜನರಿಗೆ ಉಪದೇಶಿಸುತ್ತಾ ನಡೆಯುತ್ತಾರೆ.

ಮುಹಮ್ಮದ್ ಪೈಗಂಬರರು ಒಬ್ಬ ಧೀರೋದಾತ್ತ ಪ್ರವಾದಿಯಾಗಿದ್ದರು. ಸ್ವರ್ಗಸ್ಥರಾಗುವ ಹಂತದಲ್ಲಿ ಅವರು ಜಪಿಸಿದ ಪ್ರಾರ್ಥನೆಯ ಕುರಿತು ನಾನು ಯಾವಾಗಲೂ ಸ್ಮರಿಸುವುದಿದೆ. 'ಪರಮಾತ್ಮನೇ ನನಗೆ ಕ್ಷಮಿಸಿಕೊಡು! ಅತ್ಯುನ್ನತನಾದ ನಿನ್ನ ಸಾಮಿಪ್ಯವನ್ನು ನನಗೆ ದಯಪಾಲಿಸು!' ಇಂತಹ ಒಬ್ಬ ಮಹಾ ಮನುಷ್ಯ, ಯಾವ ರೀತಿ ಅವರ ಜೀವನವು ಮನೋಹರವಾಗಿತ್ತೋ ಅದೇ ರೀತಿ ಅವರ ಮರಣವೂ ಮನೋಹರವಾಗಿತ್ತು – ಎಂಬುದನ್ನು ಯಾರು ತಾನೇ ಒಪ್ಪದಿರುವರು.

ಅವರು ಉಪದೇಶಿಸಿದ ಧರ್ಮದ ಒಳಿತುಗಳ ಬಗ್ಗೆ ಒಂದು ಕ್ಷಣ ಯೋಚಿಸಿರಿ. ಪೌರೋಹಿತ್ಯವಿಲ್ಲದ ಒಂದು ಧರ್ಮ ಸಂಪ್ರದಾಯವನ್ನು ಅವರು ಲೋಕಕ್ಕೆ ಸಂಭಾವನೆ ನೀಡಿದರು. ಇಸ್ಲಾಂ ಧರ್ಮವು ಅರೇಬ್ಯಾದಲ್ಲಿ ಶಿಶುಹತ್ಯೆಯನ್ನು ಕೊನೆಗೊಳಿಸಿತು. ಮದ್ಯಪಾನವನ್ನು ಸಂಪೂರ್ಣವಾಗಿ ನಿರೋಧಿಸುವಂತೆ ಅದು ತನ್ನ ಅನುಯಾಯಿಗಳನ್ನು ಪ್ರೇರೇಪಿಸಿತು. ನಂಬಿಕೆ, ಧೈರ್ಯ, ಕ್ಷಮಾಗುಣ, ತ್ಯಾಗ ಮೊದಲಾದ ಶ್ರೇಷ್ಠ ಗುಣಗಳ ಕುರಿತು ಅದು ಉಪದೇಶಿಸಿತು. ನೃತ್ಯ, ಜೂಜಾಟ ಮೊದಲಾದವುಗಳನ್ನು ಸಹ ವರ್ಜಿಸಲು ಪ್ರೇರೇಪಿಸುತ್ತಾ ಇಸ್ಲಾಂ ಧರ್ಮವು ಏಷ್ಯ ಮತ್ತು ಯುರೋಪಿನಲ್ಲಿ ಅನಾಚಾರಗಳ ನಿರ್ಮೂಲನಕ್ಕೆ ಬುನಾದಿಯನ್ನು ಹಾಕಿ ಕೊಟ್ಟಿತು."

ಮುಹಮ್ಮದ್ ಪೈಗಂಬರರ ಜೀವನಚರಿತ್ರೆಯನ್ನು ಪ್ರಾಮಾಣಿಕವಾಗಿ ಅಧ್ಯಯನ ಮಾಡಿದ ನಂತರ ಒಬ್ಬ ಪಾಶ್ಚಾತ್ಯ ವಿದ್ವಾಂಸ ಆರ್ಥರ್ ಲೆನಾರ್ಡ್ (Arthur Leonard) ಎಂಬವರು ಬರೆದ ಅಭಿಪ್ರಾಯವಿದು:

"If ever man on this earth found God, if ever man devoted his life to God's service with a good and great motive, it is certain that the Prophet of Arabia was that man; not only great but the greatest i. e. truest man that humanity has ever produced."

—Islam and her moral and spiritual value.

("ದೇವರನ್ನು ಕಂಡವರಾಗಿ, ಉತ್ತಮ ಹಾಗೂ ಮಹತ್ವದ ಉದ್ದೇಶಗಳಿಗಾಗಿ ತನ್ನ ಜೀವಿತವನ್ನೇ ದೇವರ ಸೇವೆಗಾಗಿ ಅರ್ಪಿಸಿದ ಯಾರಾದರೂ ಈ ಭೂಮಿಯ ಮೇಲಿದ್ದರೆ, ಖಂಡಿತವಾಗಿಯೂ ಅದು ಅರೇಬಿಯಾದ ಪೈಗಂಬರರಾಗಿದ್ದಾರೆ. ಅವರು ಶ್ರೇಷ್ಠರು ಮಾತ್ರವಲ್ಲ ಅತ್ಯಂತ ಶ್ರೇಷ್ಠರು. ಅಂದರೆ ಮನುಷ್ಯ ಕುಲವು ಕಂಡ ಅತ್ಯಂತ ಸಚ್ಚರಿತ ವ್ಯಕ್ತಿ.")

ಇಸ್ಲಾಂ ಧರ್ಮದ ಕುರಿತು ಹಾಗೂ ಮುಹಮ್ಮದ್ ಪೈಗಂಬರರ ಕುರಿತು ನಿಷ್ಪಕ್ಷವಾಗಿಯೂ ಪ್ರಾಮಾಣಿಕವಾಗಿಯೂ ಅಧ್ಯಯನ ನಡೆಸಿದ ಕೆಲವು ಮಹಾ ಪುರುಷರ ಅಭಿಪ್ರಾಯಗಳನ್ನು ನಾನು ಮೇಲೆ ಉದ್ಧರಿಸಿರುವೆನು. ಅವರ್ಯಾರೂ ಸಹ ಇಸ್ಲಾಂ ಧರ್ಮದ ವಿಶ್ವಾಸಿಗಳಲ್ಲ. ಆದುದರಿಂದ, ಶ್ರೀಮಾನ್ ಜೇಷ್ಠವರ್ಮನ್ ಮತ್ತು ಅವರಂತಹವರು ಇಸ್ಲಾಂ ಧರ್ಮದೊಡನೆ ತಮಗಿರುವ ವೈರಾಗ್ಯದಿಂದ ಮನಸ್ಸಿಗೆ ಬಂದುದನ್ನು ಅನಿಯಂತ್ರಿತವಾಗಿ ಬರೆದು ಸೇರಿಸಿದ್ದಾರೆಂದು ಮಾತ್ರ ತಿಳಿಯಬೇಕಾಗಿದೆ.

(ಸಶೇಷ)


## "ಯುಗರಶ್ಮಿ"ಗೆ ಚಂದಾದಾರರಾಗಿರಿ

ವಾರ್ಷಿಕ ಚಂದಾ : ರೂ. 4-00

ಅಂಚೆ ಮೂಲಕ : ರೂ. 5-00

# ಸಮತ್ವವೂ ಸಹೋದರತ್ವವೂ

★ ಎನ್. ಕೆ. ಕೆ.

ಜಾತಿವ್ಯತ್ಯಾಸ ಮತ್ತು ವರ್ಣವೈವಿಧ್ಯ ನಿಮಿತ್ತ ಬಹಳ ಅಸಮತ್ವವನ್ನೂ ಕಷ್ಟನಷ್ಟಗಳನ್ನೂ ಅನುಭವಿಸ ಬೇಕಾಗುವ ಜನರ ಸಂಖ್ಯೆ ನಮ್ಮ ದೇಶದಲ್ಲೂ ಕಮ್ಮಿ ಯಿಲ್ಲ. ಕೆಲವು ಮತಧರ್ಮ ಶಾಸ್ತ್ರಗಳಲ್ಲೇ ಮನುಷ್ಯ ರೊಳಗೆ ಪರಸ್ಪರ ಉಚ್ಚ ನೀಚತ್ವವನ್ನು ಕಲ್ಪಿಸಿ ಅವರನ್ನು ಅನ್ಯೋನ್ಯ ವಿರುದ್ಧವಾದಂತಹ ಹಲವು ವರ್ಗಗಳನ್ನಾಗಿ ವಿಂಗಡಿಸುವ ನಿಯಮಗಳಿರುವುದಾಗಿ ಕಾಣಬಹುದು. ಇದು, ಆ ಧರ್ಮಗಳ ಅನುಯಾಯಿಗಳ ಪೈಕಿ ಸ್ವತಂತ್ರ ಚಿಂತಕರಿಗೆ ಧರ್ಮಗಳ ವಿರುದ್ಧ ಒಂದು ಬಗೆಯ ಅವಜ್ಞೆ ಉಂಟಾಗುವವರೆ ಸಹ ಹೇತುವಾಗುತ್ತದೆ. ಪರಮ ದಯಾ ಳುವೂ ಕರುಣಾ ನಿಧಿಯೂ ಆದ ದೇವನಿಂದ ಪ್ರೇಷಿತವಾದ ಒಂದು ಮತ ಧರ್ಮ ಶಾಸ್ತ್ರದಲ್ಲಿ ಜನನದ ಆಧಾರದಲ್ಲಿ ಮನುಷ್ಯನನ್ನು ಮನುಷ್ಯನಿಂದ ಬೇರ್ಪಡಿಸುವ ಯಾವ ಉಪದೇಶವೂ ಕಾಣಲ್ಪಡಬಾರದು. ಅಥವಾ, ಹಾಗೆ ಒಂದು ಧರ್ಮಶಾಸ್ತ್ರದಲ್ಲಿ ಕಂಡುಬರುವುದಾದರೆ ಅದು ಮನುಷ್ಯ ಕೃತವೆಂದಾಗಲಿ ಅದರಲ್ಲಿ ಮನುಷ್ಯನ ಹಸ್ತಕ್ಷೇಪ ಉಂಟಾ ಗಿದೆಯೆಂದಾಗಲಿ ತಿಳಿಯ ಬೇಕಾಗಿದೆ. ಹಾಗಲ್ಲದೆ, ದಯಾ ಸಾಗರನಾದ ಲೋಕನಾಥನು ತಾನು ಬಹಿರಂಗ ಪಡಿಸಿದ ಧರ್ಮಶಾಸ್ತ್ರದಲ್ಲಿ ತನ್ನ ಸೃಷ್ಟಿಗಳಾದ ಮನುಷ್ಯರನ್ನು ಸವ ರ್ಣರೆಂದೂ ಅವರ್ಣರೆಂದೂ ಬೇರ್ಪಡಿಸುವ ನಿಯಮಾಗ ಳನ್ನು ನಿರ್ಮಿಸಿದ್ದಾನೆಂದು ಎಂದಿಗೂ ಭಾವಿಸಲಾಗದು.

ಇಸ್ಲಾಂ ಧರ್ಮ ಜಾತಿ ವ್ಯತ್ಯಾಸವನ್ನು ತೀರಾ ಪುರ ಸ್ಕರಿಸುವುದಿಲ್ಲ. ತದ್ವಿರುದ್ಧವಾಗಿ, ಅದು ಮನುಷ್ಯರ ಏಕ ಜಾತಿತ್ವವನ್ನು ಶಕ್ತಿಯುತವಾಗಿ ಪ್ರಬೋಧಿಸುತ್ತಾ ಜಾತಿ ಬೇಧವನ್ನು ಖಂಡಿಸುತ್ತದೆ. ಪವಿತ್ರ ಖುರ್‌ಆನ್ ಹೇಳು ವುದನ್ನು ನೋಡಿರಿ: "ಎಲೈ ಮನುಷ್ಯರೇ, ನಾವು ನಿಮ್ಮ ನ್ನು ಒಂದು ಸ್ತ್ರೀ ಪುರುಷ ಯುಗ್ಮದಿಂದ ಉತ್ಪಾದಿಸಿ ನೀವು ಅನ್ಯೋನ್ಯ ಗುರುತಿಸಲಿಕ್ಕಾಗಿ ನಿಮ್ಮನ್ನು ಕುಟುಂಬಗಳಾಗಿ ಯೂ ಗೋತ್ರಗಳಾಗಿಯೂ ವಿಂಗಡಿಸಿದ್ದೇವೆ. ನಿಮ್ಮ ಪೈಕಿ ಅತ್ಯಂತ ಭಕ್ತಿಯುಳ್ಳವನೇ ಅಲ್ಲಾಹನ ದೃಷ್ಟಿಯಲ್ಲಿ ನಿಮ್ಮ ಪೈಕಿ ಅತ್ಯುತ್ತಮನು." (49:14). ನೋಡಿರಿ, ಕೆಲ ವರು ಬ್ರಹ್ಮನ ಮುಖದಿಂದ ಸೃಷ್ಟಿಸಲ್ಪಟ್ಟವರೆಂದಾಗಲಿ. ಇನ್ನು ಕೆಲವರು ಬ್ರಹ್ಮನ ಪಾದಗಳಿಂದ ಸೃಷ್ಟಿಸಲ್ಪಟ್ಟವರೆಂ ದಾಗಲಿ ಹೇಳದೆ, ಮನುಕುಲವಿಡೀ ಒಂದು ಸ್ತ್ರೀ ಪುರುಷ ಯುಗ್ಮದಿಂದ ಉಂಟಾಗಿದೆಯೆಂದು ಪ್ರಸ್ತಾವಿಸುತ್ತಾ ಪವಿತ್ರ ಖುರ್‌ಆನ್ ಮನುಷ್ಯರ ಏಕಜಾತಿತ್ವವನ್ನೂ ಸಾಹೋ ದರ್ಯವನ್ನೂ ಘೋಷಿಸಿ, ಜನನವನ್ನು ಆಧಾರವಾಗಿರಿ ಸಿದ ಉಚ್ಚನೀಚ ಭಾವನೆಯನ್ನು ಸಂಪೂರ್ಣವಾಗಿ ನಿರ್ಮೂ ಲನ ಮಾಡಿದೆ. ಮಾತ್ರವಲ್ಲ, "ಒಬ್ಬ ಅರಬಿಗೆ ಅರಬಿ ಯೇತರನಿಗಿಂತ, ಭಕ್ತಿಯಲ್ಲಿ ಹೊರತು ಯಾವ ಶ್ರೇಷ್ಠತೆ ಯೂ ಇಲ್ಲ" ಎಂದು ಇಸ್ಲಾಂ ಧರ್ಮ ಸ್ಥಾಪಕರಾದ ಮುಹಮ್ಮದ್ ಪೈಗಂಬರರು ನುಡಿದು ದೇಶೀಯ ವಾದ ವನ್ನೂ ಪರಿಪೂರ್ಣ ಅಲ್ಲಗಳೆದಿದ್ದಾರೆ. ಹೀಗೆ ಇಸ್ಲಾಂ ವರ್ಗೀಯ ಮತ್ತು ದೇಶೀಯ ವೈಪರೀತ್ಯಗಳನ್ನೆಲ್ಲಾ ಬೇರುಸಹಿತ ಕಿತ್ತೆಸೆದಿದೆ. ಅದು ವಿವಿಧ ಗೋತ್ರಗಳನ್ನೂ ವರ್ಗಗಳನ್ನೂ ಸಮತ್ವ ಮತ್ತು ಸಹೋದರತ್ವದಿಂದ ಕೂಡಿ ದವರನ್ನಾಗಿಯೂ ಧನಿಕ–ದರಿದ್ರರೊಳಗೆ ಪರಸ್ಪರ, ಪ್ರಬ ಲ–ದುರ್ಬಲರೊಳಗೆ ಪರಸ್ಪರ ಬೇಧಭಾವವನ್ನು ಕಲ್ಪಿ ಸದೆ ಅವರೆಲ್ಲರಿಗೂ ಸಮುದಾಯದಲ್ಲಿ ಸಮಾನ ಹಕ್ಕುಗಳ ನ್ನು ನೀಡಿದೆ. ಅದು ಯಾರಿಗಾದರೂ ಮಹತ್ವವನ್ನು ನೀಡುವುದಾದರೆ, ಭಕ್ತಿಯ ಆಧಾರದಿಂದ ಮಾತ್ರ. ಮೇ ಲಿನ ಉದ್ಧರಣೆಗಳಿಂದ ಇದು ಸ್ಪಷ್ಟವಾಗುತ್ತದೆ.

ಇಸ್ಲಾಮಿನ ಆವಿರ್ಭಾವ ಕಾಲದಲ್ಲಿ ಅರಬಿಗಳು ವರ್ಗಮಹತ್ವದಲ್ಲೂ ಗೋತ್ರಮಹತ್ವದಲ್ಲೂ ಬಹಳ ಹೆಮ್ಮೆಪಟ್ಟು ಕೊಳ್ಳುವವರಾಗಿದ್ದರು. ತೀವ್ರತರದಲ್ಲಿ ಅಂದು ಅರಬಿಗಳೆಡೆಯಲ್ಲಿ ಜಾತ್ಯಾಭಿಮಾನದುರ್ಭೂತ ಉಗ್ರತಾಂಡವವಾಡುತ್ತಿತ್ತು. ಅಲ್ಲಿ ನಿಕೃಷ್ಟವೆಂದು ಭಾವಿಸ ಲ್ಪಟ್ಟ ಕುಟುಂಬದ ಅನೇಕ ವ್ಯಕ್ತಿಗಳಿಗಿರುವಷ್ಟು ಬೆಲೆ ಉತ್ಕೃ ಷ್ಟವೆಂದು ಭಾವಿಸಲ್ಪಟ್ಟ ಕುಟುಂಬದ ಒಬ್ಬ ಸದಸ್ಯನಿಗೆ ನೀಡಲಾಗುತ್ತಿತ್ತು. ಅಂದರೆ, ಒಬ್ಬ ಸಾಮಾನ್ಯನ ಕೈಯಿಂದ

ಒಬ್ಬ ಕುಲೀನನು ಕೊಲ್ಲಲ್ಪಟ್ಟರೆ, ಆ ಕೊಲೆ ಪಾತಕನ ಪೈಕಿಯ ಅನೇಕರನ್ನು ನಿಗ್ರಹಿಸಿ ಅವರು ವೈರವನ್ನು ಸಾಧಿಸುತ್ತಿದ್ದರು. ಆದರೆ ಒಬ್ಬ ಕುಲೀನನು ಒಬ್ಬ ಸಾಮಾನ್ಯನನ್ನು ವಧಿಸಿದರೆ, ಅದು ಒಂದು ಅಪರಾಧವೆಂದು ಪರಿಗಣಿಸಲ್ಪಡುತ್ತಿರಲಿಲ್ಲ. ಆ ಕಾಲದಲ್ಲಿ ಅರೇಬಿಯಾದಲ್ಲಿ ಜಾತಿಭೇದ ಅಷ್ಟು ಕರ್ಕಶವಾಗಿತ್ತು. ಅಂದು ಗೋತ್ರಮಹತ್ವದಲ್ಲಿ ಅರಬಿಗಳಿಗಿದ್ದ ದುರಭಿಮಾನದ ಉಗ್ರತೆ ಎಷ್ಟರಮಟ್ಟಿಗಿತ್ತೆಂದು ಮನವರಿಕೆಯಾಗಲಿಕ್ಕೆ ಒಂದು ಉದಾಹರಣೆಯನ್ನು ಹೇಳಬಹುದು. ಪೈಗಂಬರರೊಂದಿಗುಂಟಾದ ಒಂದು ಯುದ್ಧ ವೇಳೆಯಲ್ಲಿ ಅಹಂಕಾರಿಗಳಾದ ಖುರೈಶಿಗಳು ತಾವು 'ಅನ್ಸಾರಿ' ಗಳಾದ ಮದೀನದವರೊಡನೆ ಹೋರಾಡಲಿಕ್ಕಿಲ್ಲವೆಂದೂ ಅವರ ವಿರುದ್ಧ ತಾವು ಕೈಯೆತ್ತಲಾರವೆಂದೂ ಹಠ ಹಿಡಿದರು. ಖುರೈಶಿ ಮುಖಂಡ ಅಬೂ ಸುಫಿಯಾನ್ ತನ್ನ ಎದುರಾಳಿಯಾಗಿ ಮುಹಮ್ಮದ್ ಪೈಗಂಬರರೇ ಯುದ್ಧರಂಗದಲ್ಲಿ ಇಳಿಯಬೇಕೆಂದು ಛಲ ಹಿಡಿದರು. ಹೀಗೆ ವಂಶ ಮಹಾತ್ಮೆಯಲ್ಲಿ ಗರ್ವಪಡುತ್ತಿರುವ ಅರಬಿಗಳು ಇಸ್ಲಾಮಿನ ಸಮತ್ವಾದರ್ಶಗಳನ್ನು ಸ್ವೀಕರಿಸಿದಾಗ ಅವರಲ್ಲಿ ಎಂತಹ ಪರಿವರ್ತನೆಯುಂಟಾಯಿತೆಂದು ನೋಡಿರಿ! ಅನ್ಸಾರಿಗಳೊಡನೆ ಯುದ್ಧದಲ್ಲಿ ಸೆಣಸುವುದು ಅಪಮಾನವೆಂದು ಭಾವಿಸಿದ ಖುರೈಶಿಗಳು ಮತ್ತು ಅವರ ನೇತಾರ ಅಬೂಸುಫಿಯಾನ್ ನಂತರ ಇಸ್ಲಾಂಧರ್ಮ ಸ್ವೀಕರಿಸಿದಾಗ, ದಾಸ್ಯವಿಮುಕ್ತರಾದ ಬಿಲಾಲ್, ಸುಹೈಬ್, ಮೊದಲಾದವರನ್ನು ಸ್ವಸಹೋದರರಂತೆ ಭಾವಿಸಿ ಆಲಂಗಿಸಿಕೊಂಡರು. ಇದು ಇಸ್ಲಾಂ ಧರ್ಮ ಅವರಲ್ಲುಂಟುಮಾಡಿದ ಸಮತ್ವಭಾವನೆಯ ಫಲ ಮಾತ್ರವಾಗಿದೆ.

ಇಸ್ಲಾಂ ತಂದ ಈ ಸಮತ್ವ ಮತ್ತು ಸಹೋದರತ್ವ ಸದಾ ಮುಸ್ಲಿಮರಲ್ಲಿ ಜೀವಂತವಾಗಿರಲಿಕ್ಕೆ ಈ ಉತ್ಕೃಷ್ಟ ಭಾವನೆಯನ್ನು ನಿತ್ಯವೂ ಕಾರ್ಯರೂಪದಲ್ಲಿ ಪ್ರದರ್ಶಿಸುವ ಒಂದು ಆರಾಧನಾ ಕ್ರಮವನ್ನು ಅದು ನಿರ್ದೇಶಿಸಿದೆ. ಇಸ್ಲಾಮಿನ ಈ ಆರಾಧನಾ ಕರ್ಮ ರಾಜ–ಪ್ರಜೆ, ಧನಿ–ಒಕ್ಕಲು, ಯಜಮಾನ–ಕೆಲಸದಾಳು, ಧನಿಕ–ದರಿದ್ರ ಎಂಬ ವ್ಯತ್ಯಾಸ ತುಸು ಮಾತ್ರವೂ ಇಲ್ಲದೆ ಎಲ್ಲರೂ ತೋಳಿಗೆ ತೋಳು ತಾಗಿಸಿ ನಿಂತುಕೊಂಡು ಏಕ ರೀತಿಯಲ್ಲಿ ಅನುಷ್ಠಿಸುವುದನ್ನು ಕಾಣಬಹುದು. ಮುಸ್ಲಿಮರಲ್ಲಿ ಪ್ರತಿಯೊಬ್ಬನು ಅನ್ಯನೊಡನೆ ಈ ಪ್ರಕಾರ ಸಮತ್ವದಲ್ಲೂ ಸಹೋದರತ್ವದಲ್ಲೂ ವರ್ತಿಸಬೇಕೆಂದು ಈ ಆರಾಧನಾ ಕರ್ಮ ದಿನಾಲೂ ಐದು ಸಲ ಅವರನ್ನು ಎಚ್ಚರಿಸುತ್ತದೆ. ಇಂತಹ ಒಂದು ಸಮಭಾವನೆ ಮತ್ತು ಏಕರೂಪ ಇಸ್ಲಾಂ ಧರ್ಮದಲ್ಲಿ ಹೊರತು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಆದ್ದರಿಂದಲೇ ಅನ್ಯ ಮತಸ್ಥರಾದ ಹಲವು ಪಂಡಿತರು ಇಸ್ಲಾಮಿನ ಈ ಸಮತ್ವಭಾವವನ್ನು ಮುಕ್ತ ಕಂಠವಾಗಿ ಪ್ರಶಂಸಿಸಿದ್ದಾರೆ. ಭಾರತದ ಓರ್ವ ಪ್ರಸಿದ್ಧ ಶಾಸ್ತ್ರಜ್ಞ ಸರ್ ಪಿ. ಸಿ. ರಾಯ್ ಇಸ್ಲಾಮಿನ ಕುರಿತು ಹೇಳಿದ ಅಭಿಪ್ರಾಯ ಇಲ್ಲಿ ಉದ್ಧರಿಸುವುದು ಉಚಿತವೆಂದು ಭಾವಿಸುತ್ತೇನೆ. ಅವರು ಒಂದು ಭಾಷಣದಲ್ಲಿ ಹೀಗೆ ಹೇಳಿದ್ದಾರೆ: "ಎಲ್ಲಾ ಧರ್ಮಗಳ ಪೈಕಿ ಅತಿ ಹೆಚ್ಚು ಸಮತ್ವಭಾವವಿರುವುದು ಇಸ್ಲಾಂ ಧರ್ಮದಲ್ಲಾಗಿದೆ. ಮನುಷ್ಯರನ್ನು ಸಮಾನತೆಯಿಂದ ಕಾಣುವ ಧರ್ಮವಾಗಿದೆ ಇಸ್ಲಾಂ. ನೀವು ಇಸ್ಲಾಂ ಧರ್ಮ ಸ್ವೀಕರಿಸಿದ ಕೂಡಲೇ ಇತರರೊಡನೆ ಸಮಾನರಾಗುವಿರಿ. ಮುಸ್ಲಿಮರ ಮಸೀದಿಗಳಲ್ಲಿ ರಾಜನೂ ಧನಿಕನೂ ದರಿದ್ರನೂ ಕೂಲಿಯಾಳೂ ಒಟ್ಟಿಗೆ ನಿಂತು ಪ್ರಾರ್ಥನೆ ಮಾಡುತ್ತಾರೆ. ಇಸ್ಲಾಮಿನಲ್ಲಿ ವರ್ಣ ವ್ಯತ್ಯಾಸ ಸಹ ಇಲ್ಲ. ಇಸ್ಲಾಂ ಧರ್ಮ ಶಾಂತ ಸಮುದ್ರ ತೀರದಿಂದ ಅಟ್ಲಾಂಟಿಕ್ ಸಮುದ್ರದ ಆಚೆ ತೀರದ ವರೆಗೆ ವ್ಯಾಪಿಸಿದುದು ಅದರ ಸಮತ್ವ ಹಾಗೂ ವಿಶಾಲವಾದ ಧೋರಣೆಯಿಂದಾಗಿದೆ."

ಇಸ್ಲಾಂ ಅದರ ಶಿಕ್ಷಾನಿಯಮದಲ್ಲೂ ವರ್ಗಭೇದವನ್ನಾಗಲಿ ವರ್ಣವ್ಯತ್ಯಾಸವನ್ನಾಗಲಿ ಪರಿಗಣಿಸುವುದಿಲ್ಲ. ಒಮ್ಮೆ ಕಳ್ಳತನ ಮಾಡಿದ ಒಬ್ಬನನ್ನು ಅದರ ಶಿಕ್ಷೆಯಿಂದ ಪಾರು ಮಾಡಲಿಕ್ಕೆ ಪೈಗಂಬರರ ಬಳಿಗೆ ಸಹಚರರ ಪೈಕಿ ಕೆಲವರು ಬಂದು ಶಿಫಾರಸ್ಸು ಮಾಡಿದಾಗ ಪೈಗಂಬರರು ಅವರೊಡನೆ, ನಿಯಮ ಪ್ರಕಾರದ ಶಿಕ್ಷೆಯಿಂದ ವಿಮುಕ್ತಗೊಳಿಸುವ ಶಿಫಾರಸ್ಸು ಸ್ವೀಕಾರ್ಯವಲ್ಲವೆಂದೂ ತನ್ನ ಸ್ವಂತ ಪುತ್ರಿ ಫಾತಿಮ ಆ ಅಪರಾಧ ಮಾಡಿದ್ದರೆ ಆಕೆಗೂ ಶಿಕ್ಷೆಯನ್ನು ಕಡಿಮೆ ಮಾಡುತ್ತಿರಲಿಲ್ಲವೆಂದೂ ಹೇಳಿದರು. ನಿಯಮ ಸ್ಥಾಪಕನಾದ ಪೈಗಂಬರರ ಬಂಧುಗಳಿಗೆ ಬೇರೆ ಶಿಕ್ಷೆ, ಸಾಮಾನ್ಯರಿಗೆ ಮತ್ತೊಂದು ಶಿಕ್ಷೆ ಎಂಬ ಒಂದು ನಿಯಮಭೇದ ಇಸ್ಲಾಮಿನಲ್ಲಿ ಇಲ್ಲ. ಒಂದೇ ಬಗೆಯ ಅಪರಾಧವೆಸಗಿದ ಬ್ರಾಹ್ಮಣನಿಗೂ ಶೂದ್ರನಿಗೂ ಬೇರೆ ಬೇರೆ ಶಿಕ್ಷೆ, ಸ್ವಜಾತಿಯವನಿಗೂ ವಿಜಾತಿಯವನಿಗೂ ಬೇರೆ ಬೇರೆ ಶಿಕ್ಷೆ ಎಂಬ ತಾರತಮ್ಯವನ್ನು ಇಸ್ಲಾಂ ಶೀರಾ ಒಪ್ಪುವುದಿಲ್ಲ. ಬದಲಾಗಿ, ಅಂತಹ ಭೇದಭಾವವನ್ನು ಅದು ಕಠಿಣವಾಗಿ ದ್ವೇಷಿಸುತ್ತದೆ. ಈ ಸಮತ್ವ ಪಾಲನೆಯ ವಿಷಯದಲ್ಲಿ ಏನೇ

ನಷ್ಟ ಸಹಿಸಬೇಕಾಗಿ ಬಂದರೂ ಅದಕ್ಕೆ ಭಂಗವುಂಟಾಗಬಾರದಾಗಿದೆ. ಈ ನಿಯಮ ಪರವಾದ ಸಮತ್ವ ಇಸ್ಲಾಮಿಕ ಗ್ರಂಥಗಳಲ್ಲಿ ಒಂದು ಭೂಷಣ ಮಾತ್ರವಾಗಿರದೆ ಎಲ್ಲಾ ಕಾಲದಲ್ಲೂ ಅನುಷ್ಠಾನದಲ್ಲಿದೆ. ಇದಕ್ಕೆ ಇಸ್ಲಾಮಿನ ಚರಿತ್ರೆಯಲ್ಲಿ ಅನೇಕ ದೃಷ್ಟಾಂತಗಳನ್ನು ಕಾಣಬಹುದಾಗಿದೆ. ಹಝ್ರತ್ ಖಲೀಫ ಉಮರರ ಆಡಳಿತ ಕಾಲದಲ್ಲಿ ಸಾಮಾನ್ಯ ಪ್ರಜೆಗಳಿಗಿಂತ ತನಗೆ ಉನ್ನತ ಮಟ್ಟದ ಸ್ಥಾನ ಲಭಿಸದ ಕಾರಣದಿಂದ ಅರೇಬ್ಯಾದ ಓರ್ವ ಸಾಮಂತ ರಾಜನಾಗಿದ್ದ ಜಬಲ ಎಂಬವರು ತನ್ನ ಪೂರ್ವ ಧರ್ಮವಾದ ಕ್ರೈಸ್ತ ಮತಕ್ಕೆ ಹಿಂತೆರಳಿದುದು ಇಸ್ಲಾಮಿನ ಈ ಸಮಭಾವನೆಗೆ ಒಂದು ಉತ್ತಮ ನಿದರ್ಶನವಾಗಿದೆ.

ಸಂಕ್ಷಿಪ್ತವಾಗಿ, ಮನುಷ್ಯನು ಅನ್ಯೋನ್ಯ ಸಮತ್ವ ಭಾವದಿಂದಲೂ ಸಹೋದರಭಾವದಿಂದಲೂ ವರ್ತಿಸಿ ಮಾನವ ಕುಲದಲ್ಲಿ ಶಾಂತಿ ಸಮಾಧಾನ ಸ್ಥಾಪಿಸಬೇಕೆಂದು ಇಸ್ಲಾಂ ಉದ್ದೇಶಿಸುತ್ತದೆ. ಈ ಉದ್ದೇಶ ಸಿದ್ಧಿಗಾಗಿ ಮನುಷ್ಯರು ದೇವನ ಗುಣ ಮಹಿಮೆಗಳನ್ನು ತಮ್ಮಲ್ಲಿ ಪ್ರತಿಬಿಂಬಿಸಲು ಇಸ್ಲಾಂ ಬೋಧಿಸುತ್ತದೆ. ಪೈಗಂಬರರು ಹೀಗೆ ನುಡಿದಿದ್ದರು: "ನೀವು ಅಲ್ಲಾಹನ ಗುಣಗಳನ್ನು ನಿಮ್ಮಲ್ಲಿ ಪ್ರತಿಫಲನಗೊಳಿಸಿರಿ." ಈ ನಿರ್ದೇಶಾನುಸಾರ ವಿಶ್ವಾಸಿಗಳು ದೇವನ ಗುಣಮಹಿಮೆಗಳನ್ನು ತಮ್ಮಲ್ಲಿ ಪ್ರತಿಬಿಂಬಿಸುವಂತೆ ಪ್ರಯತ್ನಿಸುವ ಪಕ್ಷದಲ್ಲಿ ಭೂವಾಸವು ಶಾಂತಮಯವಾಗಿ ಮಾರ್ಪಡಲು ಸಾಧ್ಯ. ಜಗತ್ಪಾಲಕನಾದ ದೇವನು ತನ್ನ ಅಸ್ತಿತ್ವವನ್ನು ನಿರಾಕರಿಸುವ ನಾಸ್ತಿಕರಿಗೂ ತನ್ನನ್ನು ದೂಷಿಸುವ ಪಾಷಂಡರಿಗೂ ತನ್ನ ಆಜ್ಞೆಗಳನ್ನು ಉಲ್ಲಂಘಿಸಿ ಜೀವಿಸುವ ಅಧರ್ಮಿಗಳಿಗೂ ಎಲ್ಲಾ ತನ್ನ ಸೃಷ್ಟಿಗಳೆಂಬ ಸ್ಥಿತಿಯಲ್ಲಿ ಉಪಕಾರ ಮಾಡುತ್ತಿರುತ್ತಾನೆ. ಸಕಲ ಮನುಷ್ಯರ ಸುಖ ಸೌಕರ್ಯಗಳಿಗಾಗಿ ಅವನು ತನ್ನ ಅನುಗ್ರಹಗಳನ್ನು ಪ್ರಕೃತಿಯಲ್ಲಿ ಸಜ್ಜುಗೊಳಿಸಿದ್ದಾನೆ. ತನ್ನ ಈ ಅನುಗ್ರಹಗಳನ್ನು ಅವನು ಯಾರಿಗೂ ನಿರಾಕರಿಸುವುದಿಲ್ಲ. ಇದು ಅವನ 'ರಹ್ಮಾನಿಯ್ಯತ್' ಎಂಬ ಸರ್ವವ್ಯಾಪಕವಾದ ಕಾರುಣ್ಯಾತಿರೇಕದ ಒಂದು ಪ್ರಕಟನೆ ಮಾತ್ರವಾಗಿದೆ. ಈ ಗುಣವನ್ನು ವಿಶ್ವಾಸಿಗಳು ತಮ್ಮಲ್ಲಿ ಪ್ರತಿಫಲನಗೊಳ್ಳುವಂತೆ ಮಾಡಿದರೆ, ಅವರು ತಮ್ಮ ಅಧೀನದಲ್ಲಿರುವ ಸುಖಸೌಕರ್ಯಗಳನ್ನೂ ಉಪಕಾರ ವಸ್ತುಗಳನ್ನೂ ಶತ್ರುಗಳಿಗೆ ಕೂಡ ನಿರಾಕರಿಸಲು ಒಡಂಬಡಲಿಕ್ಕಿಲ್ಲ. ಬದಲಾಗಿ, ಅವರು ಇತರರಿಗೆ ಅಧಿಕ ಸುಖವನ್ನು ನೀಡಲಿಕ್ಕೂ ಶಕ್ತ್ಯಾನುಸಾರ ಸಹಾಯೋಪಕಾರ ಮಾಡಲಿಕ್ಕೂ ಪ್ರಯತ್ನಿಸುವರು. ಈ ಉತ್ಕೃಷ್ಟ ಮನಃಸ್ಥಿತಿ ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರರಲ್ಲಿ ಅದರ ಪರಾಕಾಷ್ಠೆಯನ್ನು ಪಡೆದಿತ್ತು. ಪೈಗಂಬರರು ತನ್ನ ಕೊನೆಯ ತೀರ್ಥಯಾತ್ರೆಯ ವೇಳೆಯಲ್ಲಿ, ಮಕ್ಕಾದಲ್ಲಿ ಸೇರಿದ್ದ ಆ ಬೃಹತ್ ಸಮ್ಮೇಳನದಲ್ಲಿ ಲೋಕಕ್ಕೆ ನೀಡಿದ ಅಂತಿಮ ಸಂದೇಶದಲ್ಲಿ ಹೀಗೆ ನುಡಿದಿದ್ದರು:

"ಪ್ರಿಯ ಜನರೆ, ಈ ಸ್ಥಳವೂ ಈ ದಿನವೂ ಪಾವನವಾದುದೆಂದು ನಿಮಗೆ ಗೊತ್ತಿರುವುದಷ್ಟೆ. ನಿಮ್ಮ ದೇಹದೇಹಿಗಳೂ ನಿಮ್ಮ ಆರ್ಜಿತಗಳೂ ಅಷ್ಟೇ ಪವಿತ್ರವಾಗಿವೆ. ನಿಮ್ಮೊಡನೆ ನೀತಿಯಿಂದ ವರ್ತಿಸಬೇಕೆಂದಾದರೆ ನೀವು ಅನ್ಯರೊಡನೆ ಅನೀತಿಯಿಂದ ವರ್ತಿಸಬಾರದು. ಈ ವಿಷಯವನ್ನು ಇಲ್ಲಿ ಹಾಜರಿರುವವರು ಹಾಜರಿಲ್ಲದವರಿಗೆ ತಿಳಿಸಲಿ."

ನೋಡಿರಿ, ಒಂದು ತೀರ್ಥಸ್ಥಳದಂತೆ ಅಷ್ಟರ ಮಟ್ಟಿಗೆ ಪರಿಶುದ್ಧಿಯಿಂದ ಕೂಡಿದವನಾಗಿದ್ದಾನೆ ಮನುಷ್ಯನು. ಹಾಗಿರುವ ಮನುಷ್ಯನನ್ನು ಕೆಲವರು ನಾಯಿಗಿಂತ ಕೀಳಾಗಿ ಕಾಣುತ್ತಾರೆ! ಹಾ ಕಷ್ಟ!!


READ

**The Holy Prophet Muhammad**

Being a short sketch of the life, teachings and character of the Holy Prophet Muhammad.

By: **Hazrat Mirza Bashiruddin Mahmud Ahmad**

Write to: **Nazir Dawat-O-Tabligh, Qadian-143516 (Punjab)**

# ಪವಿತ್ರ ಖುರ್‌ಆನಿನ ಪ್ರಭಾವ

★ ಎ. ಅಬ್ದುಲ್ ಹಕ್

ಒಂದು ಕಾಲದಲ್ಲಿ ಪಾಶ್ಚಾತ್ಯರು ಇಸ್ಲಾಮಿನ ಧರ್ಮ ಗ್ರಂಥವಾದ ಪವಿತ್ರ ಖುರ್‌ಆನನ್ನು ಅತ್ಯಂತ ದ್ವೇಷಿಸಿದ್ದರು. ಅದು ಮನುಷ್ಯನಿಗೆ ಹಾನಿಯನ್ನುಂಟುಮಾಡುವ ಸಿದ್ಧಾಂತಗಳಿಂದ ಕೂಡಿದ ಒಂದು ಧರ್ಮಗ್ರಂಥವಾಗಿದೆಯೆಂದು ಅವರು ಚಿಕ್ಕಂದಿನಲ್ಲೇ ಕಲಿಯಲು ಪ್ರೇರಿತರಾಗಿದ್ದರು. ಕ್ರೈಸ್ತ ಪುರೋಹಿತರು ಅವರನ್ನು ಹಾಗೆ ನಂಬಿಸಿದ್ದರು. ಖುರ್‌ಆನಿನ ತರ್ಜುಮೆ ಮತ್ತು ವ್ಯಾಖ್ಯಾನ ಎಂಬ ಹೆಸರಿನಲ್ಲಿ ಪಾದ್ರಿಗಳು ಯುರೋಪ್ಯನ್ ಭಾಷೆಗಳಲ್ಲಿ ಬರೆದು ಪ್ರಕಟಿಸಿದ ಗ್ರಂಥಗಳ ಮುಖಾಂತರವೂ ಖುರ್‌ಆನಿಗೆ ಸಂಬಂಧಿಸಿದ ತಪ್ಪು ಕಲ್ಪನೆ ಇನ್ನೂ ಪ್ರಚಾರಗೊಂಡಿತು. ಅಮುಸ್ಲಿಮರನ್ನು ಬಲಾತ್ಕರಿಸಿ, ಖಡ್ಗ ತೋರಿಸಿ ಹೆದರಿಸಿ, ಮತಪರಿವರ್ತನೆ ಮಾಡಲಿಕ್ಕೂ, ಒಪ್ಪದವರನ್ನು ಕೊಂದು ಬಿಡಲಿಕ್ಕೂ ಖುರ್‌ಆನ್ ಪ್ರಬೋಧಿಸುತ್ತದೆಯೆಂದೂ ಅದೇ ಪ್ರಕಾರವೇ ಇಸ್ಲಾಂ ಪ್ರಚಾರಗೊಂಡಿತೆಂದೂ ಖುರ್‌ಆನಿನ ಹೆಸರಿನಲ್ಲಿ ಆರೋಪಿಸಲಾಯಿತು. ಈ ಆರೋಪ ಸುಳ್ಳೆಂದು ಖುರ್‌ಆನಿನ ಸರಿಯಾದ ತರ್ಜುಮೆ ಓದುವವರಿಗೆ ಮಾತ್ರವಲ್ಲ, ಕ್ರೈಸ್ತರು ಬರೆದ ಭಾಷಾಂತರವನ್ನು ಸಹ ನಿಷ್ಪಕ್ಷಪಾತದಿಂದ ಓದುವವರಿಗೆ ಮನವರಿಕೆಯಾಗಬಹುದು.

ಹಾಗೆ ನಿಷ್ಪಕ್ಷಪಾತದಿಂದಲೂ ಸತ್ಯಾನ್ವೇಷಣ ಆಸಕ್ತಿಯಿಂದಲೂ ಆತ್ಮಾರ್ಥವಾಗಿಯೂ ಖುರ್‌ಆನಿನ ತರ್ಜುಮೆಗಳನ್ನಾಗಲಿ ಮೂಲಭಾಷೆಯಲ್ಲಿರುವ ಖುರ್‌ಆನನ್ನಾಗಲಿ ಅಧ್ಯಯನ ಮಾಡಿದ ಅನೇಕ ಪಾಶ್ಚಾತ್ಯ ಕ್ರೈಸ್ತರು ಆ ಪರಿಶುದ್ಧ ಗ್ರಂಥದ ಮಾಹಾತ್ಮೆಯನ್ನು ಶ್ಲಾಘಿಸಿ ಅದರ ಹೆಸರಿನಲ್ಲಿ ಪ್ರಚರಿಸಲ್ಪಟ್ಟ ತಪ್ಪು ಅಭಿಪ್ರಾಯಗಳನ್ನು ಅಲ್ಲಗಳೆದು ಪವಿತ್ರ ಖುರ್‌ಆನಿನ ಅಭಿಮಾನಿಗಳಾಗಿ ಪರಿವರ್ತಿತರಾದರು. ಮಾತ್ರವಲ್ಲ, ಅವರಲ್ಲಿ ಕೆಲವರು ಖುರ್‌ಆನಿನ ಪಾಠಗಳನ್ನು ತಮ್ಮ ಜೀವನಚರ್ಯೆಗಳಲ್ಲಿ ಅಳವಡಿಸಲಿಕ್ಕೆ ಪ್ರಯತ್ನಿಸಿದರು; ಕೆಲವರು ಅವನ್ನು ಸತ್ಯ ತತ್ವಗಳೆಂದು ಸ್ವೀಕರಿಸಿ ಮುಸ್ಲಿಮರಾಗಿ ಜೀವಿಸಿದರು.

ಕ್ರೈಸ್ತ - ಮುಸ್ಲಿಂ ಧರ್ಮಯುದ್ಧ ಕಾಲದಲ್ಲಿ ಫೆಲಸ್ತೀನ್, ಶಾಂ ಮೊದಲಾದ ರಾಜ್ಯಗಳಿಗೆ ಬಂದು ಮುಸ್ಲಿಮರೊಂದಿಗೆ ಧರ್ಮದ ಹೆಸರಿನಲ್ಲಿ ಹೋರಾಡಿದ ಪಾಶ್ಚಾತ್ಯ ಕ್ರೈಸ್ತರ ಪೈಕಿ ಅಸಂಖ್ಯಾತ ಜನರು ಮುಸ್ಲಿಮರ ಸಂಪರ್ಕದಿಂದ ಖುರ್‌ಆನಿನ ಯಥಾರ್ಥ ಪಾಠಗಳನ್ನು ತಿಳಿದುಕೊಂಡು ತಮ್ಮ ತಪ್ಪು ಭಾವನೆಗಳ ಬಗ್ಗೆ ಪಶ್ಚಾತ್ತಾಪಗೊಂಡು ಇಸ್ಲಾಂ ಮತವನ್ನು ಸ್ವೀಕರಿಸಿ, ಮುಸ್ಲಿಮರೊಂದಿಗೆ ತಮ್ಮ ಉಳಿದ ಬಾಳನ್ನು ನಡೆಸಿದ್ದರೆಂದು ಚರಿತ್ರೆ ಹೇಳುತ್ತದೆ. ಮಾತ್ರವಲ್ಲ, ಕ್ರೈಸ್ತ ಸೈನಿಕರಾಗಿ ಬಂದ ಪಾಶ್ಚಾತ್ಯರಲ್ಲಿ ಕೆಲವರು ಸ್ವದೇಶಗಳಿಗೆ ಮರಳಿ ಹೋದುದು ತಮ್ಮ ಎದುರಾಳಿಗಳಾದ ಮುಸ್ಲಿಮರು ತಮಗಿಂತ ಹೆಚ್ಚು ಸಂಸ್ಕೃತಮತಿಗಳೂ ಉತ್ಕೃಷ್ಟ ಸ್ವಭಾವಿಗಳೂ ಆಗಿದ್ದರೆಂಬ ಅಭಿಪ್ರಾಯ ಸಹಿತವಾಗಿತ್ತು. ಆದ್ದರಿಂದ ಆ ಬಳಿಕ ಅವರಲ್ಲಿ ಕೆಲವರು ಇಸ್ಲಾಂ ಮತವನ್ನವಲಂಬಿಸಿ ಅವರ ಸಂತಾನ ಪರಂಪರೆ ಮುಸ್ಲಿಮರಾಗಿಯೇ ಜೀವಿಸಿದರು. ಇಂಥ ಪಾಶ್ಚಾತ್ಯ ಮುಸ್ಲಿಮರನ್ನು ಫ್ರಾನ್ಸ್, ಪೂರ್ವ ಜರ್ಮನಿ, ರಶ್ಯಾ, ಪೋಲೆಂಡ್, ಯುಗೋಸ್ಲಾವಿಯಾ ಎಂಬೀ ರಾಜ್ಯಗಳಲ್ಲಿ ಕಾಣಬಹುದಾಗಿತ್ತು. ಇವರ ಮತಪರಿವರ್ತನೆ ಸಹ ನಮಗೆ ಖುರ್‌ಆನಿನ ಪ್ರಭಾವವನ್ನು ತಿಳಿಯಪಡಿಸುತ್ತದೆ. ಯಾವ ರೀತಿಯ ಬಲಪ್ರಯೋಗವಿಲ್ಲದೆಯೇ ಅವರು ಪರಿವರ್ತನೆಗೊಂಡಿದ್ದರು.

ಇಸ್ಲಾಂ ಇತರರೆಡೆಯಲ್ಲಿ ಪ್ರಚಾರಗೊಂಡದ್ದು ಮುಸ್ಲಿಮರಿಗೆ ರಾಜಕೀಯ ಪ್ರತಾಪ ಮತ್ತು ವಿಜಯ ಕರಗತವಾದ ಕಾಲದಲ್ಲಿ ಮಾತ್ರವಲ್ಲ. ರಾಜಕೀಯ ಬಲ ಕುಂದಿ ಮುಸ್ಲಿಂ ಆಡಳಿತೆಗಳು ಪಾಶ್ಚಾತ್ಯ ಮಹಾಶಕ್ತಿಗಳ ಸ್ವಾಧೀನವಲಯದಲ್ಲಿ ಕೇವಲ ಕೈಗೊಂಬೆಗಳಂತೆ ವರ್ತಿಸುತ್ತಿದ್ದ ಕಾಲದಲ್ಲಿ ಸಹ ಆಡಳಿತಾಧಿಕಾರಿಗಳೆಡೆಯಲ್ಲೂ ವಿದ್ಯಾಸಂಪನ್ನರೆಡೆಯಲ್ಲೂ ಸಂಸ್ಕಾರ ಸಂಪನ್ನರೆಂದು ಕರೆಯಲ್ಪಡುವವರೆಡೆಯಲ್ಲೂ ಇಸ್ಲಾಂ ಸ್ವೀಕಾರಾರ್ಹವಾಗಿತ್ತು. ಮಾತ್ರವಲ್ಲ, ಖುರ್‌ಆನಿನ ವಶೀಕರಣ ಶಕ್ತಿಗೆ ವಶಗತರಾಗಿ ಅದಕ್ಕನುಸಾರವಾಗಿ ನಡೆದು ಉತ್ತಮ ಭಕ್ತರಾಗಿ ಬಾಳಿ ತಮ್ಮ ಪ್ರಭಾವ ಸುತ್ತುಮುತ್ತಲೆಲ್ಲಾ ವ್ಯಾಪಿಸುವಂತೆ ಮಾಡಿದ ವ್ಯಕ್ತಿಗಳೂ ಪಾಶ್ಚಾತ್ಯರೆಡೆಯಲ್ಲಿದ್ದರು. ಇವೆಲ್ಲಾ

ಪವಿತ್ರ ಖುರ್‌ಆನಿನ ಪ್ರಭಾವವನ್ನೂ ವೈಶಿಷ್ಟ್ಯವನ್ನು ತೋರಿಸಿಕೊಡುತ್ತದೆ.

ಪವಿತ್ರ ಖುರ್‌ಆನನ್ನೂ ಮುಹಮ್ಮದ್ ಪೈಗಂಬರರನ್ನೂ ಅತ್ಯಂತ ವಿಕೃತ ರೂಪದಲ್ಲಿ ಲೋಕಕ್ಕೆ ತೋರಿಸಿಕೊಡಲು ಪಾದ್ರಿಗಳು ಅತಿ ಶ್ರಮವಹಿಸಿದ್ದು 19ನೇ ಶತಮಾನದಲ್ಲಾಗಿತ್ತು. ಇಸ್ಲಾಮಿಗೆ ಅತ್ಯಂತ ಪ್ರತಿಕೂಲ ಪರಿಸ್ಥಿತಿ ಉಂಟಾಗಿರುವ ಈ ಶತಕದಲ್ಲೂ ಅನೇಕ ಚಿಂತನಾಶೀಲರೂ ಸಂಸ್ಕಾರ ಸಂಪನ್ನರೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದಾರೆ. ಅವರಲ್ಲೋರ್ವ ಇಂಗ್ಲೆಂಡಿನ ಆಲ್ಡರ್ಲೀ ಎಂಬಲ್ಲಿನ ಪ್ರಭುವೂ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರೂ ಆಗಿದ್ದ ಲಾರ್ಡ್ ಸ್ಟಾನ್ಲಿ. ಇವರು ಎರಡು ದಶಕಗಳ ಕಾಲ ಮುಸ್ಲಿಮಾಗಿ ಭಕ್ತ ಜೀವನ ನಡೆಸಿದ್ದರೆಂದು ತಿಳಿದು ಬರುತ್ತದೆ. 1903ರಲ್ಲಿ ಅವರು ಮೃತಪಟ್ಟಾಗ ಅವರ ಮರಣ ಶಾಸನದ ಅನುಸಾರ ಮೃತ ದೇಹವನ್ನು ಇಸ್ಲಾಮಿನ ಸಂಪ್ರದಾಯದಂತೆ ಆಲ್ಡರ್ಲೀ ಪಾರ್ಕಿನಲ್ಲಿ ಸಂಸ್ಕರಿಸಲಾಯಿತು. ಅವರ ಪತ್ನಿ ಮತ್ತು ಇಬ್ಬರು ಪುತ್ರರೂ ಅವರ ಉತ್ತರಾಧಿಕಾರಿಯಾದ ಸ್ಥಾನಿಕನೂ ಇತರ ಬಂಧುಗಳೂ ಅಂತ್ಯ ಸಂಸ್ಕಾರ ಕ್ರಿಯೆಗಳಲ್ಲಿ ಭಾಗವಹಿಸಿದ್ದರು. ದಿವಂಗತ ಪ್ರಭುವಿನ ಕೊನೆಯ ಇಚ್ಛೆಯಂತೆ ಅಂದಿನ ತುರ್ಕಿ ಸುಲ್ತಾನನ ಲಂಡನ್ ಅಂಬಾಸಿಯ ಮುಖ್ಯಸ್ಥ ಸನ್ಮಾನ್ಯ ಹಾಮಿದ್‌ಬೇ ಅಂತ್ಯಸಂಸ್ಕಾರ ಕ್ರಿಯೆಯ ಮೇಲ್ನೋಟಗಾರರಾಗಿದ್ದರೆಂದೂ ವರದಿಯಾಗಿದೆ. ಇದರಿಂದ, ಪ್ರಭುವಿನ ಇಸ್ಲಾಂ ಮತ ಸ್ವೀಕಾರ ಯಾವುದೇ ಪ್ರಲೋಭನೆಗೂ ಗುರಿಯಾಗದೆ ನಿಸ್ವಾರ್ಥವೂ ಆತ್ಮಾರ್ಥವೂ ಆಗಿತ್ತೆಂದೂ ಅವರ ಇಷ್ಟದಂತೆ ವರ್ತಿಸುವರೆ ಕ್ರೈಸ್ತರಾದ ಪತ್ನಿ, ಮಕ್ಕಳು, ಸಂಬಂಧಿಕರೆಲ್ಲಾ ಸನ್ನದ್ಧರಾಗುವಷ್ಟರ ಮಟ್ಟಿಗೆ ಆ ಪ್ರಭುವಿನ ಭಕ್ತಿಭರಿತವಾದ ಜೀವನಕ್ರಮದಿಂದ ಅವರು ಪ್ರಭಾವಿತರಾಗಿದ್ದರೆಂದೂ ಮನವರಿಕೆಯಾಗುತ್ತದೆ. ಹೀಗೆ ಇಸ್ಲಾಂ ಆವಿರ್ಭಾವಗೊಂಡು 14 ಶತಮಾನಗಳು ಕಳೆದರೂ ಯಾವ ಬದಲಾವಣೆಗೂ ಗುರಿಯಾಗದೆ ಅಂದೂ ಇಂದೂ ಪರಿಶುದ್ಧವಾಗಿಯೇ ಇರುವ ಖುರ್‌ಆನಿನ ಆತ್ಮಿಕ ಪ್ರಭಾವವು ಅದನ್ನು ಆತ್ಮಾರ್ಥವಾಗಿ ಸಮೀಪಿಸುವ ಭಕ್ತದಾಸರಿಗೆ ವರ್ತಮಾನ ಕಾಲದಲ್ಲೂ ಅನುಭವಗೋಚರವಾಗುತ್ತದೆ.

ಭೌತಿಕ ಶಕ್ತಿ ಪ್ರತಾಪಾಧಿಕಾರಗಳಲ್ಲಿ ಉನ್ನತಿ ಪಡೆದ ಆಡಳಿತಾಧಿಕಾರಿಗಳನ್ನು ಸಹ ಪವಿತ್ರ ಖುರ್‌ಆನಿನ ತತ್ವ ಸಂಹಿತೆ ಆಕರ್ಷಿಸಿ ಅಧೀನಪಡಿಸಿದುದಾಗಿ ನಮಗೆ ಕಾಣಬಹುದು. ತಮ್ಮ ರಾಜಕೀಯ ಮತ್ತು ಸಾಮೂಹಿಕ ಸಂಬಂಧಗಳಿಂದ ಬೇರ್ಪಡಲು ಅಸಾಧ್ಯವಾದ ಪರಿಸ್ಥಿತಿಯಲ್ಲಿ ಸಿಲುಕಿದ್ದರೂ ಸಹ ಅವರು ಇಸ್ಲಾಂ ಮತ್ತು ಅದರ ತತ್ವ ಸಂಹಿತೆಯೊಡನೆ ಅನುಸರಣೆ ಮತ್ತು ಭಕ್ತಿ ಪ್ರಕಟಿಸಲು ಪ್ರಚೋದಿತರಾಗಿದ್ದರು. ನೆಪೋಲಿಯನ್ ಬೋನಪಾರ್ಟೆ ಅಂಥವರ ಪೈಕಿ ಒಬ್ಬರಾಗಿದ್ದರು. ಫ್ರೆಂಚ್ ಅಧಿಪನಾಗಿದ್ದ ಅವರು ಮುಸ್ಲಿಂ ಆಗಿದ್ದರೆಂಬ ಹೇಳಿಕೆಯನ್ನು ಹಲವು ಸಲ ನಾವು ಕೇಳಿದ್ದೇವೆ. ಇದರ ಅರ್ಥ ಅವರು ಪ್ರಾರ್ಥನಾದಿ ಕರ್ಮಗಳನ್ನು ಅನುಷ್ಠಿಸುವುದರಲ್ಲಿ ಸಹ ನಿಷ್ಠಾವಂತನಾಗಿ ಪ್ರತ್ಯಕ್ಷದಲ್ಲಿ ಮುಸ್ಲಿಂ ಆಗಿದ್ದರು ಎಂದಾಗಲಿಕ್ಕೆ ಸಾಧ್ಯವಿಲ್ಲ. ತಾನೊಬ್ಬ ಮುಸ್ಲಿಮೆಂದು ಅವರು ಹೇಳುತ್ತಿದ್ದರೆಂಬುದು ವಾಸ್ತವ. ಈ ನಿಜಾಂಶವನ್ನು ಪಾಶ್ಚಾತ್ಯ ಲೇಖಕರು ಸಹ ಉಲ್ಲೇಖಿಸಿದ್ದಾರೆ. ಹಾ! ಪ್ರತ್ಯಕ್ಷದಲ್ಲಿ ಮುಸ್ಲಿಮಾಗಿ ಜೀವಿಸಲು ಸಾಧ್ಯವಾಗಿರುತ್ತಿದ್ದರೆ! ಎಂದು ಅವರು ಒಂದು ಪಕ್ಷ ಆಶಿಸಿರಲೂ ಬಹುದು. ಆದರೆ ಅವರು, ತಾನು ಮುಸ್ಲಿಮೆಂದು ತನ್ನ ಆತ್ಮೀಯ ಸ್ನೇಹಿತರೊಡನೆ ಹೇಳಿದುದಾಗಿಯೂ ಇಸ್ಲಾಮನ್ನು ಪ್ರೀತಿಸಿದುದಾಗಿಯೂ ಮುಸ್ಲಿಮರ ಸಂಪರ್ಕವನ್ನು ಸ್ಥಾಪಿಸಿದುದಾಗಿಯೂ ಮುಸ್ಲಿಂ ಆಡಳಿತಗಳೊಂದಿಗೆ ಮೈತ್ರಿ ಬಂಧವನ್ನು ಸ್ಥಾಪಿಸಲಿಕ್ಕಾಗಿ ಯತ್ನಿಸಿದುದಾಗಿಯೂ ರುಜು ವಾತುಗಳಿವೆ. ಈಜಿಪ್ಟಿನ ಓರ್ವ ಮುಸ್ಲಿಂ ಸಂತರನ್ನು ಅವರು ತನ್ನ ಅಧ್ಯಾತ್ಮ ಗುರುವೆಂದು ಅಂಗೀಕರಿಸಿ ಗುರುದಕ್ಷಿಣೆ ಸೂಚಕವಾಗಿ ಒಬ್ಬ ದಾಸನನ್ನು ಅವರಿಗೆ ನಿಷ್ಠಾವಂತ ಸೇವಕನಾಗಿ ಒಪ್ಪಿಸಿದುದಾಗಿ ಕೆಲವು ಸಂಸ್ಮರಣಗಳಲ್ಲಿ ಉಲ್ಲೇಖಗಳಿವೆ. ಆ ಸೇವಕನು ಆಗಾಗ್ಗೆ ಅಶ್ವಾರೂಢನಾಗಿ ನೆಪೋಲಿಯನ್ ಜತೆ ಸಮ ರೀತಿಯಲ್ಲಿ ಸವಾರಿ ಮಾಡುತ್ತಿದ್ದನು. ಇದರಿಂದ, ಇಸ್ಲಾಮಿನ ಸಮತ್ವ ಸಹೋದರತ್ವ ತತ್ವವನ್ನು ನೆಪೋಲಿಯನ್ ತನ್ನ ಜೀವನ ಚರ್ಯೆಗಳಲ್ಲಿ ಅಳವಡಿಸಿದ್ದರೆಂದು ನಮಗೆ ಮನಗಾಣಬಹುದು. ಅವರ ಇಸ್ಲಾಮಿಕ ಮನೋಭಾವವನ್ನು ಲಾರ್ಡ್ ರೋಸ್‌ಬೆರಿ ಉಲ್ಲೇಖಿಸಿದ ಅಭಿಪ್ರಾಯದಿಂದ ಊಹಿಸಬಹುದಾಗಿದೆ. ರೋಸ್‌ಬೆರಿ ಪ್ರಭು ಹೀಗೆ ಬರೆದಿದ್ದಾರೆ:

"ಒಂದು ಕಾಲದಲ್ಲಿ ಫ್ರಾನ್ಸಿನ ಅಧಿಪನಾಗಿದ್ದ ನೆಪೋಲಿಯನ್ ಚರಿತ್ರೆಯಲ್ಲಿ ಪ್ರಭಾವಶಾಲಿಯಾದ ಒಬ್ಬ ವ್ಯಕ್ತಿಯೆಂದು ಪರಿಗಣಿಸಲ್ಪಡುತ್ತಾನೆ. ಆತನ ಶಕ್ತಿ

ಪ್ರತಾಪವೂ ಪ್ರತಿಭೆಯೂ ಮಿತ್ರರಿಂದ ಮಾತ್ರವಲ್ಲ, ಶತ್ರುಗಳಿಂದಲೂ ಶ್ಲಾಘಿಸಲ್ಪಟ್ಟಿದೆ. ಆತನು ಇಸ್ಲಾಮಿನ ಕಡೆಗೆ ಅತ್ಯಂತ ಒಲವು ಇದ್ದ ವ್ಯಕ್ತಿಯಾಗಿದ್ದನೆಂದು ಕೆಲವರಿಗೆ ಮಾತ್ರವೇ ಗೊತ್ತಿರಬಹುದು."

ಅವರು ಇನ್ನೂ ಬರೆಯುತ್ತಾರೆ:" ನೆಪೋಲಿಯನ್ ಇಸ್ಲಾಮಿನ ಮೂಲ ಪ್ರಮಾಣವನ್ನೇ ಪಠಿಸಿದ ವ್ಯಕ್ತಿಯಾಗಿದ್ದನು. ಇಸ್ಲಾಂ ಒಂದು ದಶಾಬ್ದದಲ್ಲಿ(ಅಂದು ತಿಳಿಯಲ್ಪಟ್ಟ) ಅರ್ಧಗೋಳವನ್ನು ಜಯಿಸಿತೆಂಬ ಸ್ಥಿತಿಯಲ್ಲಿ ಅದು ಕ್ರೈಸ್ತ ಧರ್ಮಕ್ಕಿಂತ ಶ್ರೇಷ್ಠತರದ್ದಾಗಿದೆ; ಕ್ರೈಸ್ತ ಮತಕ್ಕೆ ಅದರ ಅಸ್ತಿತ್ವವನ್ನು ನೆಲೆಗೊಳಿಸಲಿಕ್ಕೆ ಮೂವತ್ತು ದಶಾಬ್ದಗಳು ಬೇಕಾದುವು; ಇಸ್ಲಾಂ ಸರ್ವ ಧರ್ಮಗಳ ಪೈಕಿ ಮನೋಹರವಾದ ಧರ್ಮವಾಗಿದೆಯೆಂದು ಆತನು ಸ್ಪಷ್ಟವಾಗಿ ಹೇಳುತ್ತಿದ್ದನು. ಮಾತ್ರವಲ್ಲ ತನ್ನನ್ನು ತಾನೇ ಸಂಬೋಧನೆ ಮಾಡುತ್ತಾ 'ನಾನೊಬ್ಬ ಮುಸ್ಲಿಂ' ಎಂದು ಆತ ಹೇಳುತ್ತಿದ್ದನು" (Nepolean – The Last Phase)

ಹೀಗೆ ಉನ್ನತ ಪ್ರಭಾವಶಾಲಿಯಾದ ಪಾಶ್ಚಾತ್ಯ ಸಾಮ್ರಾಟನನ್ನು ಸಹ ಸ್ವಾಧೀನಪಡಿಸಲು ಸಾಮರ್ಥ್ಯವುಳ್ಳ ಪವಿತ್ರ ಖುರ್‌ಆನಿಗೆ ಅದರ ತತ್ವಪ್ರಚಾರಣಾರ್ಥ ಬಲ ಪ್ರಯೋಗ ತತ್ವವನ್ನು ಬೋಧಿಸುವ ಅವಶ್ಯವಿಲ್ಲವೆಂಬುದು ಸ್ವತಸಿದ್ಧ. ಆ ಪ್ರಕಾರ ಉಪದೇಶಿಸುವುದಿಲ್ಲವೆಂದು ಸಾಕ್ಷ್ಯ ವಹಿಸಲಿಕ್ಕೆ ತೆರೆದಿರಿಸಲ್ಪಟ್ಟ ಆ ಪವಿತ್ರ ಗ್ರಂಥ ಲೋಕವನ್ನು ಆಹ್ವಾನಿಸುತ್ತಲೂ ಇದೆ.

—o—o—o—

★

## "ಯುಗರಶ್ಮಿ"ಗೆ ರೂ. 100/- ಮತ್ತು ಅಧಿಕ ದೇಣಿಗೆ ನೀಡಿದ ಉದಾರಮತಿಗಳು

( ಯಾದಿ ನಂ. 2 )

| | | |
|---|---|---|
| 1. | ಜನಾಬ್ ಕೆ. ಪಿ. ಮಸ್‌ವೂದ್ ಅಹ್ಮದ್ ಸಾಹೇಬ್, ಸೌದಿ ಅರೇಬಿಯಾ | 750_00 |
| 2. | ,, ಸಿದ್ದೀಖ್ ಅಶ್ರಫಲಿ ಸಾಹೇಬ್, ಸೌದಿ ಅರೇಬಿಯಾ | 500_00 |
| 3. | ,, ಕೆ. ಪಿ. ಅಸ್ಲೂ ಸಾಹೇಬ್, ಕಲ್ಲಿಕೋಟೆ | 350_00 |
| 4. | ,, ಪಿ. ಕೆ. ಉಮರ್ ,, ಮಡಿಕೇರಿ | 300_00 |
| 5. | ,, ಎಂ. ಎ. ರಶೀದ್ ,, ಮಂಜೇಶ್ವರ | 100_00 |
| 6. | ,, ತಯ್ಯಿಬ್ ಅಹ್ಮದ್ ರಶೀದ್ ಸಾಹೇಬ್, ಫುಜೀರಾ | 100_00 |
| 7. | ,, ಸಿ. ಮುತೀಯುಲ್ಲಾ ಸಾಹೇಬ್, ಇರಾಕ್ | 100_00 |
| 8. | ,, ಎಂ ಎ. ಮುಹಮ್ಮದ್ ,, ಕಲ್ಲಿಕೋಟೆ | 100-00 |
| 9. | ,, ಎಂ. ಇ. ಮೊಹಿಯುದಿನ್ ,, ವಿರಾಜಪೇಟೆ | 100_00 |
| 10. | ,, ಎಸ್. ಜೆ. ಅಬ್ದುಸ್ಸಮದ್ ಸಾಹೇಬ್, ಭದ್ರಾವತಿ | 100_00 |
| 11. | ,, ಶಫೀವುರ್ರಹ್ಮಾನ್ ಸಾಹೇಬ್, ಶಿವಮೊಗ್ಗ | 100_00 |
| 12. | ,, ಆರ್. ಎಂ. ನಸ್ರುಲ್ಲಾ ,, ,, | 100_00 |
| 13. | ,, ಜೆ. ಮುಶೀರ್ ಅಹ್ಮದ್ ,, ,, | 100_00 |
| 14. | ಮೆ। ಅಹ್ಮದಿ ಟ್ರೇಡರ್ಸ್ | 100_00 |

ಓದಿದ್ದು.........

# MAUDOODI'S SON SUES MOTHER

From Our Correspondent

ISLAMABAD–Jamaat Islami founder late Maulana Maudoodi's son Syed Haider Farooq Maudoodi has filed a suit against his mother for withholding payment of his share in his father's inheritance of cash of over Rs. 1 million.

In his case, Haider said his mother violated a commitment made before a court of law that she would pay him, along with other children of Maulana Maudoodi, his share of cash amounting to Rs. 1.04 million left by the late Maulana in bank deposits. His mother paid him only Rs. 37,000 instead of his actual share of Rs. 121,000.

Maulana Maudood's children are also involved in litigation against a number of Jamaat Islami leaders, including Jamaat chief Mian Tufail Mohammad, for having published Maulana Maudoodi's books and circulated cassettes without copyright which lay with the family.

– Khaleej Times : 8-4-'83.

# ಮೌದೂದಿಯ ಪತ್ನಿಯ ವಿರುದ್ಧ ಪುತ್ರನ ಮೊಕದ್ದಮೆ

( ನಮ್ಮ ಪ್ರತಿನಿಧಿಯಿಂದ )

ಇಸ್ಲಾಮಾಬಾದ್ – ಜಮಾತೆ ಇಸ್ಲಾಮಿ ಸ್ಥಾಪಕ ದಿವಂಗತ ಮೌಲಾನ ಮೌದೂದಿಯವರ ಮಗ ಸಯದ್ ಹೈದರ್ ಫಾರೂಕ್ ಮೌದೂದಿ, ಪಿತ್ರಾರ್ಜಿತವಾಗಿ ತನಗೆ ಸಲ್ಲತಕ್ಕ 10 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ತಡೆಹಿಡಿಯಲ್ಪಟ್ಟುದುದಕ್ಕಾಗಿ ತನ್ನ ತಾಯಿಯ ವಿರುದ್ಧ ಮೊಕದ್ದಮೆ ಹೂಡಿದ್ದಾರೆ.

ದಿವಂಗತ ಮೌಲಾನ ಬೇಂಕಿನಲ್ಲಿ ಬಾಕಿ ಇರಿಸಿದ್ದ ಠೇವಣಿಯಿಂದ ಇತರ ಮಕ್ಕಳಿಗೆಂಬಂತೆ ತನಗೂ ರೂ. 10,4,000 ನೀಡಲಾಗುವುದೆಂದು ಒಂದು ನ್ಯಾಯಾಲಯದ ಮುಂದೆ ಮಾಡಿದ ಕರಾರನ್ನು ತನ್ನ ತಾಯಿ ಉಲ್ಲಂಘಿಸಿದ್ದಾರೆಂದು ಪ್ರಸ್ತಾವಿತ ಖಟ್ಲೆಯಲ್ಲಿ ಹೈದರ್ ದೂರಿದ್ದಾರೆ. ಅವರ ಯಥಾರ್ಥ ಪಾಲಿನ 1,21,000 ರೂಪಾಯಿಗಳ ಬದಲಿಗೆ ಕೇವಲ ರೂ. 37,000 ತಾಯಿಯಿಂದ ಅವರಿಗೆ ಸಂದಿದೆ.

ಮೌಲಾನ ಮೌದೂದಿಯ ಗ್ರಂಥ ಮತ್ತು ಕ್ಯಾಸೆಟ್ಟುಗಳ ಕಾಪಿರೈಟ್ ಮೌದೂದಿ ಕುಟುಂಬದಲ್ಲಿ ಕಾದಿರಿಸಲ್ಪಟ್ಟಿರುವಾಗ, ಕಾಪಿರೈಟ್ ಹಕ್ಕನ್ನು ಪಡೆಯದೆ ಮೌದೂದಿಯ ಗ್ರಂಥಗಳನ್ನು ಪ್ರಕಾಶನಗೊಳಿಸಿದುದಕ್ಕಾಗಿಯೂ ಕ್ಯಾಸೆಟ್ಟುಗಳನ್ನು ಪ್ರಚಾರ ಪಡಿಸಿದುದಕ್ಕಾಗಿಯೂ ಜಮಾತೆ ಇಸ್ಲಾಮಿ ನೇತಾರ ಮಿಯಾನ್ ತುಫೈಲ್ ಮುಹಮ್ಮದ್ ಸಹಿತ ಅನೇಕ ನಾಯಕರ ವಿರುದ್ಧ ಹೂಡಿದ ಖಟ್ಲೆಯಲ್ಲಿ ಮೌಲಾನ ಮೌದೂದಿಯ ಮಕ್ಕಳೂ ಸೇರಿಕೊಂಡಿದ್ದಾರೆ.

—ಖಲೀಜ್ ಟೈಮ್ಸ್ 8-4-'83

## ಕ್ರಿಸ್ತನ ಸಮಾಧಿ ಕಾಶ್ಮೀರದಲ್ಲಿ ?

ಕ್ರಿಸ್ತ ಮತ್ತು ಮೊಸೆಸ್ ಅಬುವಿನಲ್ಲಿ ಸತ್ತರು ಮತ್ತು ಕಾಶ್ಮೀರ ಕಣಿವೆಯ ಬೇರೆ ಬೇರೆ ಸ್ಥಳಗಳಲ್ಲಿ ಅವರನ್ನು ಸಮಾಧಿ ಮಾಡಲಾಯಿತು ಎಂಬ ಹೇಳಿಕೆಯನ್ನು ಪರೀಕ್ಷಿಸಲು ಇಸ್ರೇಲಿನ ಹನ್ನೊಂದು ಮಂದಿ ಇತಿಹಾಸಕಾರರ ತಂಡವೊಂದು ಕಾಶ್ಮೀರದ ಕಣಿವೆಗೆ ಬಂದಿದೆ.

ಕ್ರಿಸ್ತನನ್ನು ಹೂಳಲಾಗಿದೆ ಎಂದು ಹೇಳಲಾಗಿರುವ ಶ್ರೀನಗರದ ಮಧ್ಯ ಭಾಗದಲ್ಲಿರುವ "ರೋಜಾಬಾಲ್"

( 24ನೇ ಪುಟ ನೋಡಿರಿ )

# ಅಹ್ಮದಿಯಾ ವಾರ್ತೆಗಳು

## ಇಂಡೋನೇಶ್ಯಾದಲ್ಲಿ ಮಹಿಳಾ ವಾರ್ಷಿಕ ಸಮ್ಮೇಳನ

ಕಳೆದ ಜನವರಿ 15ರಿಂದ 17ರ ವರೆಗೆ ಮೂರು ದಿನಗಳ ಕಾಲ ಇಂಡೋನೇಶ್ಯಾದ "ಲಜ್ನಇಮಾಇಲ್ಲಾಹ್" (ಅಹ್ಮದಿಯಾ ಮಹಿಳಾ ಸಂಘ) ವಾರ್ಷಿಕ ಸಮ್ಮೇಳನ ಜಕಾರ್ತಾ ಅಹ್ಮದಿಯಾ ಮಸೀದಿಯಲ್ಲಿ ಯಶಸ್ವಿಯಾಗಿ ನಡೆಯಿತು. ಸಮ್ಮೇಳನದಲ್ಲಿ 80 ಜಮಾಅತುಗಳಿಂದ 500ಕ್ಕೂ ಮಿಕ್ಕ ಪ್ರತಿನಿಧಿಗಳು ಭಾಗವಹಿಸಿದರು.

ಆರ್ಯಾವರ್ತ ಇಂಟರ್‌ನ್ಯಾಶನಲ್ ಹೋಟೇಲಿನಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ 150 ಅಹ್ಮದಿಯೇತರ ಮಹಿಳೆಯರೂ ಪಾಲ್ಗೊಂಡಿದ್ದರು.

ಇಂಡೋನೇಶ್ಯನ್ ಲಜ್ನಇಮಾಇಲ್ಲಾಹ್ ಅಧ್ಯಕ್ಷೆ ಖದೀಜ ಆರಿ ಸತಿಯಾರ್ ಸೂ, ಯೂಗಯಾ ಕರ್‌ತಾದ ನೂರುನ್ನಿಸಾ, ಶರೀಕತ್ತುನ್ನಿಸಾ ಹಕೀಂ ಮೊದಲಾದವರು ಭಾಷಣ ಮಾಡಿದರು. ಧರ್ಮ ಪ್ರತಿನಿಧಿಗಳೂ ಸರಕಾರಿ ಪ್ರತಿನಿಧಿಗಳೂ ಸಮ್ಮೇಳನದಲ್ಲಿ ಭಾಗವಹಿಸಿದರು. ಜುಬೈದ ಅವರು ಸರಕಾರದ ವತಿಯಿಂದ ಅಹ್ಮದಿಯಾ ಮಹಿಳಾ ಸಂಘಕ್ಕೆ ಕೃತಜ್ಞತೆ ಸಲ್ಲಿಸಿದರು.

---

( 23ನೇ ಪುಟದಿಂದ )

ಮತ್ತು ಮೋಸೆಸ್‌ರನ್ನು ಹೂಳಲಾಗಿದೆಯೆನ್ನಲಾಗಿರುವ ಉತ್ತರ ಶ್ರೀನಗರದ "ಬಂಡಿಪೊರ" ಎಂಬ ಸ್ಥಳಗಳಿಗೆ ಭೇಟಿ ನೀಡಿದ ಈ ತಂಡ ಕಾಶ್ಮೀರದ ಪ್ರಾಚ್ಯವಸ್ತು ಸಂಶೋಧನಾ ತಜ್ಞರು ಮತ್ತು ಇತರೆ ಅಧಿಕಾರಿಗಳನ್ನೂ ಭೇಟಿಯಾಯಿತು.

ಕ್ರಿಸ್ತ ಶಿಲುಬೆಯಲ್ಲಿ ಸಾಯದೆ, ತನ್ನ ಕೆಲವು ಅನುಯಾಯಿಗಳೊಡಗೂಡಿ ಕಾಶ್ಮೀರಕ್ಕೆ ಬಂದು ಶ್ರೀನಗರದಲ್ಲಿ ಸತ್ತನೆಂದು ಕೆಲವು ಭಾರತೀಯ ಇತಿಹಾಸಕಾರರು ಈ ಹಿಂದೆ ಹೇಳಿದ್ದರ ಹಿನ್ನೆಲೆಯಲ್ಲಿ ಕಾಶ್ಮೀರ ಕಣಿವೆ ಇತ್ತೀಚೆಗೆ ನೂರಾರು ವಿದೇಶಿಯರನ್ನು ಆಕರ್ಷಿಸಿದೆ.

(ಪ್ರಜಾವಾಣಿ : 18-9-1982)

## ಅಮೇರಿಕನ್ ದಂಪತಿಗಳ ಪ್ರಶಂಸನೀಯ ತ್ಯಾಗ

ಅಮೇರಿಕದಲ್ಲಿ ಐದು ಪ್ರಚಾರ ಕೇಂದ್ರಗಳನ್ನು ಸ್ಥಾಪಿಸಲಿಕ್ಕೆ ಕರೆ ನೀಡುತ್ತಾ ಅಹ್ಮದಿಯಾ ಜಮಾಅತಿನ ಇಮಾಂ ಖಲೀಫತುಲ್ ಮಸೀಹ್ IV ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು 25 ಲಕ್ಷ ಡಾಲರುಗಳ ಒಂದು ಯೋಜನೆಯನ್ನು ಪ್ರಕಟಪಡಿಸಿದಾಗ, ಲಾಸ್ ಏಂಜಲೀಸ್‌ನಲ್ಲಿ ನಿರ್ಮಿಸಲಾಗುವ ಪ್ರಚಾರ ಕೇಂದ್ರದ ಎಲ್ಲಾ ಖರ್ಚನ್ನು (ಐದು ಲಕ್ಷ ಡಾಲರ್) ನೀಡಲು ಅಮೇರಿಕದ ಸಾಯಿನ್ ಎಂಬಲ್ಲಿನ ಡಾಕ್ಟರ್ ಖುರೈಶಿ ಸಾಹೇಬರೂ ಅವರ ಪತ್ನಿಯೂ ಮುಂದೆ ಬಂದಿದ್ದಾರೆ. ಐದು ಲಕ್ಷ ಡಾಲರ್ (ಸುಮಾರು ರೂ. 50 ಲಕ್ಷ 55 ಸಾವಿರ) ಬೆಲೆಬಾಳುವ ತಮ್ಮ ಇಪ್ಪತ್ತೆರಡು ಎಕರೆ ಜಾಗವನ್ನು ಮಾರಿ ಮಿಶನ್ ಹೌಸ್ ನಿರ್ಮಾಣಕ್ಕೆ ನೀಡಲಾಗುವುದು ಅಥವಾ ಪ್ರಸ್ತಾವಿತ ನಿವೇಶನವನ್ನೇ ಜಮಾಅತಿನ ಹೆಸರಿಗೆ ವರ್ಗಾಯಿಸಲಾಗುವುದೆಂದು ಭಾಗ್ಯವಂತರಾದ ಈ ದಂಪತಿಗಳು ಖಲೀಫರಿಗೆ ತಿಳಿಸಿದ್ದಾರೆ.

## ಗ್ಲಾಸ್ಗೋ ಪ್ರಚಾರ ಕೇಂದ್ರಕ್ಕೆ ಹೊಸ ಕಟ್ಟಡ

ಸ್ಕಾಟ್‌ಲೇಂಡ್ ಮಿಶನ್ ಹೌಸಿಗೆ ಮನೋಹರವಾದೊಂದು ಕಟ್ಟಡವನ್ನು ನಿರ್ಮಿಸುವ ಏರ್ಪಾಡುಗಳು ಸಿದ್ಧಗೊಳ್ಳುತ್ತಿವೆ. ಸುಮಾರು 40,000 ಸ್ಕಾಟ್‌ಲೇಂಡ್ ಪೌಂಡ್ ವ್ಯಯದಲ್ಲಿ ಕಟ್ಟಡ ನಿರ್ಮಿಸುವುದರ ಸಂಬಂಧಿಸಿ ಇಂಗ್ಲೆಂಡಿನ ಅಮೀರ್ ಜ॥ ಶೇಖ್ ಮುಬಾರಕ್ ಅಹ್ಮದ್ ಸಾಹೇಬ್ ಅವರಿಂದ ವಿವರ ಲಭಿಸಿದ ಕೂಡಲೇ ಸ್ಥಳೀಯ ಅಹ್ಮದೀ ಸಹೋದರರು ತಮ್ಮ ದೇಣಿಗೆಗಳನ್ನು ಬರೆಯಿಸಲು ಪ್ರಾರಂಭಿಸಿದಾಗ ಮೊತ್ತವು 15 ಸಾವಿರ ಪೌಂಡಿಗೆ ತಲುಪಿತು. ಅದಲ್ಲದೆ ಅಹ್ಮದಿ ವನಿತೆಯರಿಂದಲೂ 2 ಸಾವಿರ ಪೌಂಡ್ ದೇಣಿಗೆಯ ವಾಗ್ದಾನ ಲಭಿಸಿತು. ಮೂರೂವರೆ ವರ್ಷಗಳ ಅವಧಿಯಲ್ಲಿ ಇಂಗ್ಲೆಂಡಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಎಂಟನೆಯ ಪ್ರಚಾರಕೇಂದ್ರವಾಗಿದೆ ಇದು.

## ಗ್ರೆನೆಡದಲ್ಲಿ ಪ್ರಚಾರ ಕೇಂದ್ರ

ಸ್ಪೈನಿನ ಗ್ರೆನೆಡದಲ್ಲಿ ಅಹ್ಮದಿಯಾ ಮಿಶನರಿ ಮೌಲಾನ ಕರಂ ಇಲಾಹಿ ಝಫರ್ ಅವರ ನಾಯಕತ್ವದಲ್ಲಿ ಅಹ್ಮದಿಯಾ ಪ್ರಚಾರ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ. ಇತ್ತೀಚೆಗೆ ಅಲ್ಲಿ ಹೊಸ ಒಂದು ಪ್ರಚಾರ ಕೇಂದ್ರವನ್ನು ಸ್ಥಾಪಿಸಲಾಗಿದೆಯೆಂದು "EL IDEAL" ಎಂಬ ಸ್ಥಳೀಯ ಪತ್ರಿಕೆ ವರದಿ ಮಾಡಿದೆ.

## ನೈಜೀರಿಯಾ ಕೈಗಾರಿಕಾ ಪ್ರದರ್ಶನದಲ್ಲಿ ಬುಕ್ ಸ್ಟಾಲ್

ಕಳೆದ ಡಿಸೆಂಬರ್ 6ರಂದು ಸಂಸ್ಥಾನ ಗವರ್ನರರಿಂದ ಉದ್ಘಾಟಿಸಲ್ಪಟ್ಟ ನೈಜೀರಿಯಾದ ಓಂಡೋ ಸ್ಟೇಟ್ ವಾರ್ಷಿಕ ಕೈಗಾರಿಕಾ ಪ್ರದರ್ಶನದಲ್ಲಿ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಒಂದೇ ಒಂದು ಬುಕ್ ಸ್ಟಾಲ್ ಅಹ್ಮದಿಯಾ ಜಮಾಅತಿನದು ಮಾತ್ರವಾಗಿತ್ತು. ಗವರ್ನರರ ಜೊತೆಯಲ್ಲಿ ಮಂತ್ರಿಗಳೂ ಇತರ ಅಧಿಕಾರಿಗಳೂ ಬುಕ್ ಸ್ಟಾಲ್ ಸಂದರ್ಶಿಸಿ ತಮ್ಮ ಸಂತುಷ್ಟಿಯನ್ನು ಪ್ರಕಟಿಸಿದರು. ಅಂದೇ ಬುಕ್‌ಸ್ಟಾಲಿಗೆ ಭೇಟಿಯಿತ್ತ ಬಿಷಪ್ ಫ್ರಾನ್ಸ್ ಆಲೋಂಗೆ ಅವರಿಗೆ ಕೆಲವು ಸಾಹಿತ್ಯಗಳನ್ನು ಪಾರಿತೋಷಕವಾಗಿ ನೀಡಲಾಯಿತು. 10 ದಿನಗಳ ಕಾಲ ನಡೆದ ಈ ಪ್ರದರ್ಶನದಲ್ಲಿ ಸಾವಿರಾರು ಜನರಿಗೆ ಇಸ್ಲಾಂ ಮತ್ತು ಅಹ್ಮದಿಯಾ ಸಂದೇಶವನ್ನು ತಲಪಿಸುವ ಸದವಕಾಶ ಒದಗಿತು.

## ಅಹ್ಮದಿಯಾ ಮಿಶನರಿಗಳು ಅಂಡಮಾನ್ ಹಿಂದೂ ಸಮ್ಮೇಳನದಲ್ಲಿ

ಅಂಡಮಾನ್ ದ್ವೀಪಗಳ ಚರಿತ್ರೆಯಲ್ಲಿ ಮೊತ್ತಮೊದಲಿಗೆ ಕಳೆದ ಎಪ್ರಿಲ್ 16 ಮತ್ತು 17ರಂದು ಪೋರ್ಟ್ ಬ್ಲೇರ್‌ನ ಮರೀನಾ ಪಾರ್ಕಿನಲ್ಲಿ ವಿಶ್ವ ಹಿಂದೂ ಸಮ್ಮೇಳನ ಜರಗಿತು. ಭಾರತದ ವಿವಿಧ ಕಡೆಗಳಿಂದ ಪ್ರಮುಖ ಹಿಂದೂ ಸನ್ಯಾಸಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದರು.

ಹಿಂದೂ ವಿಶ್ವಾಸದಂತೆ ದೈವೇಕತ್ವವನ್ನೂ ಮಾನವ ಸಾಹೋದರ್ಯವನ್ನೂ ಬಲಪಡಿಸುವುದಾಗಿತ್ತು ಸಮ್ಮೇಳನದ ಉದ್ದೇಶ. ಅಹ್ಮದಿಯಾ ಮಿಶನರಿ ಮೌಲವಿ ಅಬ್ದುಸ್ಸಲಾಂ, ಜಮಾಅತಿನ ಅಧ್ಯಕ್ಷರು ಹಾಗೂ ಇತರ ಸದಸ್ಯರು ಎರಡು ದಿನಗಳ ಸಮ್ಮೇಳನದಲ್ಲೂ ಭಾಗವಹಿಸಿದರು. ಸನ್ಯಾಸಿಗಳಿಗೂ ಇತರರಿಗೂ ಅವರು ಅಹ್ಮದಿಯಾ ಸಾಹಿತ್ಯಗಳನ್ನು ವಿತರಣೆ ಮಾಡಿದರು. ದೈವೇಕತ್ವ ಹಾಗೂ ಮಾನವ ಸಾಹೋದರ್ಯದ ಕುರಿತು ಅವರು ಚರ್ಚೆ ಮಾಡಿದರು.

ಸನ್ಯಾಸಿಗಳು ನಿರ್ಗಮಿಸುವಾಗ ವಿಮಾನ ನಿಲ್ದಾಣದಲ್ಲಿ ಮೌಲವಿ ಅಬ್ದುಸ್ಸಲಾಂ ಅವರನ್ನು ಇನ್ನೊಮ್ಮೆ ಭೇಟಿಯಾಗಿ ಬೇರೆಯೂ ಕೆಲವು ಸಾಹಿತ್ಯಗಳನ್ನು ಪಾರಿತೋಷಕವಾಗಿ ನೀಡಿದರು. ಅತ್ಯಂತ ಸಂತೋಷದಿಂದ ಅವರು ಅವನ್ನು ಸ್ವೀಕರಿಸಿದರು. ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್‌ರವರು ದೇವ ಸಂದೇಶ ವಾಹಕರೆಂದೂ ಮನುಷ್ಯರ ಪರಸ್ಪರ ಪ್ರೀತಿಗೂ ಸಹೋದರತೆಗೂ ಮಾನವತೆಯ ಸರ್ವವಿಧ ಪಾರತಂತ್ರ್ಯ ವಿಮೋಚನೆಗೂ ಅವರು ಮಹತ್ತಾದ ಸೇವೆಯರ್ಪಿಸಿದ್ದಾರೆಂದೂ ಸನ್ಯಾಸಿಗಳು ಹೇಳಿದರು.

ಹಝ್ರತ್ ಅಹ್ಮದ್ ಅವರ ಅನುಯಾಯಿಗಳು ಲೋಕದಾದ್ಯಂತ ಹರಡಿಕೊಂಡಿದ್ದಾರೆ. ದೇವನ ಏಕತ್ವದಲ್ಲೂ, ಎಲ್ಲಾ ಪ್ರವಾದಿಗಳನ್ನೂ ಶ್ರೀಕೃಷ್ಣ, ಶ್ರೀರಾಮ, ಶ್ರೀಬುದ್ಧ ಮೊದಲಾದ ಮಹಾಪುರುಷರನ್ನೂ ಮನ್ನಿಸುವುದರಲ್ಲೂ, ಭಾವೈಕ್ಯ ಮತ್ತು ಮಾನವ ಸಹೋದರ್ಯದಲ್ಲೂ ಹಝ್ರತ್ ಅಹ್ಮದರ ಅಧ್ಯಾಪನಗಳು ಅಧಿಷ್ಟಿತವಾಗಿವೆ.

(The Light of Andamans : 25-4-83)

## ಖಾದಿಯಾನದಲ್ಲಿ ಸರ್ವಧರ್ಮ ಸಮ್ಮೇಳನ

ಕಳೆದ ಎಪ್ರಿಲ್ 10ರಂದು ಅಹ್ಮದಿಯಾ ಜಮಾಅತಿನ ಆಶ್ರಯದಲ್ಲಿ ಸ್ಥಳೀಯ ಮುನಿಸಿಪಲ್ ಮೈದಾನಿನಲ್ಲಿ ಸರ್ವಧರ್ಮ ಸಮ್ಮೇಳನ ಬಹಳ ವಿಜೃಂಭಣೆಯಿಂದ ಜರಗಿತು. ಅಹ್ಮದಿಯಾ ಜಮಾಅತಿನ ಅಮೀರ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು. ಸರ್ದಾರ್ ಸತನಾಂ ಸಿಂಘ್ ಬಾಜ್ವ ಮುಖ್ಯ ಅತಿಥಿಯಾಗಿದ್ದರು.

ಮದ್ರಸಾ ಅಹ್ಮದಿಯಾದ ಮುಖ್ಯೋಪಾಧ್ಯಾಯ ಮೌಲಾನ ಹಕೀಂಮುಹಮ್ಮದುದ್ದೀನ್ ಸಾಹೇಬರ ಖುರ್‌ಆನ್ ಪಠನದೊಂದಿಗೆ ಅಧಿವೇಶನದ ಆರಂಭವಾಯಿತು.

ಕಾರ್ಯದರ್ಶಿ ಚೌಧರಿ ಹಕೀಂ ಬದ್ರುದ್ದೀನ್ ಸಾಹೇಬ್ ಸಮ್ಮೇಳನದ ಉದ್ದೇಶವನ್ನು ವಿವರಿಸಿದರು. ಧರ್ಮ ಸಾಮರಸ್ಯದ ಗುರಿಯನ್ನಿಟ್ಟುಕೊಂಡು ಕಳೆದ 45 ವರ್ಷಗಳಿಂದ ಲೋಕಾದ್ಯಾಂತವಿರುವ ಅಹ್ಮದಿಯರು ಪ್ರತಿ ವರ್ಷ ಈ ರೀತಿಯ ಸಮ್ಮೇಳನವನ್ನು ನಡೆಸುತ್ತಿದ್ದಾರೆಂದು ಅವರು ಹೇಳಿದರು.

ರೆವರೆಂಡ್ ಪ್ರೀತಮ್‌ಚಂದ್, ಮೌಲಾನ ಶರೀಫ್ ಅಹ್ಮದ್ ಅಮೀನಿ, ಪ್ರೊಫೆಸರ್ ಪ್ರಕಾಶ್ ಸಿಂಘ್ (ಪ್ರಿನ್ಸಿಪಾಲ್ ಶಹೀದ್ ಮಿಶನರಿ ಕಾಲೇಜ್, ಅಮೃತಸರ), ಮನೋಹರಲಾಲ್ ಶರ್ಮಾ, ಗ್ಯಾನಿ ಪ್ರೀತಂ ಸಿಂಘ್, ಪ್ರಕಾಶ್ ದೇವ್‌ಜಿ ಬಟಾಲ, ಸುಖ್‌ದೇವ್‌ಪಾಲ್‌ನ ಮೌಲಾ ಬಶೀರ್ ಅಹ್ಮದ್ ದೆಹಲ್ವಿ ಮೊದಲಾದವರು ವಿವಿಧ ಧರ್ಮಗಳ ಕುರಿತು ಮಾತನಾಡಿದರು.

## ಏಶ್ಯಾಡ್‌ನಲ್ಲಿ ಪ್ರಚಾರ

ಕಳೆದ ನವೆಂಬರ್ 19ರಿಂದ ಡಿಸೆಂಬರ್ 4ರ ವರೆಗೆ ದೆಹಲಿಯಲ್ಲಿ ನಡೆದ ಭಾರತ ಮತ್ತು ಏಶ್ಯಾದ 33 ರಾಷ್ಟ್ರಗಳ ಕ್ರೀಡಾ ಕೂಟ ಸಂದರ್ಭದಲ್ಲಿ ಕೇಂದ್ರ ಅಹ್ಮದಿಯಾ ಯುವಜನ ಸಂಘದ ವತಿಯಿಂದ ಅಹ್ಮದಿಯಾ ಕಿರು ಸಾಹಿತ್ಯಗಳ ವಿತರಣೆ ನಡೆಯಿತು. ಇಂಗ್ಲಿಷ್, ಹಿಂದಿ, ಪಂಜಾಬಿ, ಜಪಾನಿ, ಇಂಡೋನೇಶ್ಯನ್ ಮತ್ತು ಜರ್ಮನಿ ಭಾಷೆಗಳಲ್ಲಿರುವ ಕಿರುಕೃತಿಗಳನ್ನು ಹಂಚಲಾಯಿತು.

## ಅಹ್ಮದಿ ಬಾಲಕನ ಯಶಸ್ಸು

1982-83ನೇ ಸಾಲಿನಲ್ಲಿ ನಡೆದಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಗಂದಿಗವಾಡದ ಪರಂಜ್ಯೋತಿ ಶಾಲೆಯ ಓರ್ವ ಅಹ್ಮದಿ ವಿದ್ಯಾರ್ಥಿ ಮಂಜೂರ್ ಅಹ್ಮದ್ ಚಿಕ್ಕೋಡಿ ತಾಲೂಕಿನಲ್ಲಿ ಪ್ರಥಮ ರ್‍ಯಾಂಕನ್ನು ಗಳಿಸಿದ್ದಾನೆ.

## ಪಯಂಗಾಡಿಯಲ್ಲಿ ಮಹಿಳಾ ವಲಯ ಸಮ್ಮೇಳನ

ಕಳೆದ ಮೇ 1ರಂದು ಅಹ್ಮದಿಯಾ ಮಹಿಳಾ ವಿಭಾಗವಾದ ಲಜ್ನ ಇಮಾಇಲ್ಲಾಹ್ ವಲಯ ಸಮ್ಮೇಳನ ಪಯಂಗಾಡಿಯಲ್ಲಿ ಯಶಸ್ವಿಯಾಗಿ ಜರಗಿತು. ಕಲ್ಲಿಕೋಟೆಯಿಂದ ಉತ್ತರ ಕೇರಳದ ಜಮಾಅತುಗಳ ಸುಮಾರು 200 ವನಿತಾ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು.

ಮಾಡಾಯಿ ಸಂತುನ್ಸ್ ಕಾಲೇಜ್ ಸಭಾಂಗಣದಲ್ಲಿ ಪೂರ್ವಾಹ್ನ ಹತ್ತೂವರೆ ಗಂಟೆಗೆ ಶೈಕ್ಷಣಿಕ ಅಧಿವೇಶನ ನಡೆಯಿತು. ಅಪರಾಹ್ನ ಮೂರು ಗಂಟೆಗೆ ಜರಗಿದ ಅಧಿವೇಶನದಲ್ಲಿ ಸ್ಥಳೀಯ ಖದೀಜಾ ನರ್ಸಿಂಗ್ ಹೋಮಿನ ಮೆಡಿಕಲ್ ಆಫೀಸರ್ ಡಾಕ್ಟರ್ ಮುಬಾರಕ ಅಧ್ಯಕ್ಷತೆ ವಹಿಸಿದರು. ಸಮಾಜ ಸೇವೆಯರ್ಪಿಸುವ ವಿವಿಧ ರಂಗಗಳು ಸ್ತ್ರೀಯರಿಗೆ ತೆರೆದಿರಿಸಲ್ಪಟ್ಟಿದೆಯೆಂದೂ ಸ್ತ್ರೀಯರ ಮಧ್ಯದಲ್ಲೇ ರೋಗಿಗಳ ಶುಶ್ರೂಷೆ ಮತ್ತು ಶೈಕ್ಷಣಿಕ ಕಾರ್ಯಗಳಲ್ಲಿ ಸ್ತ್ರೀಯರಿಗೆ ಘನವಾದ ಕೊಡುಗೆ ನೀಡಲು ಸಾಧ್ಯವೆಂದೂ ಅವರು ತನ್ನ ಭಾಷಣದಲ್ಲಿ ಹೇಳಿದರು.

ಬಿ. ಜೈನಬ, ಸಿ. ವಿ. ರಶೀದ, ಪಿ. ಪಿ. ಬೀವಿ (ಪಯಂಗಾಡಿ), ಪಿ. ಜೈಬುನ್ನೀಸ (ಕಣ್ಣನ್ನೂರು), ಮೈಮುನ (ಕಲ್ಲಿಕೋಟೆ), ಇ. ವಿ. ಫಾತಿಮ, ಯು. ರಹ್ಮತ್ (ಕೂಡಾಳಿ), ಸಿ. ಆಯಿಶಾಬಿ, ತಾಹಿರ ಸಿದ್ದೀಖ (ಮೊಗ್ರಾಲ್) ಮೊದಲಾದವರು ವಿವಿಧ ವಿಷಯಗಳಲ್ಲಿ ಭಾಷಣವಿತ್ತರು. ಕನ್ವೀನರ್ ಬಿ. ತಯ್ಯಿಬ ಸ್ವಾಗತಿಸಿದರು. ಕಾರ್ಯದರ್ಶಿ ಜುಹರ ಕೃತಜ್ಞತೆ ಸಲ್ಲಿಸಿದರು.

## ಕಲ್ಕುಳಮಿನಲ್ಲಿ ಶಿಕ್ಷಣ ಶಿಬಿರ

ಕೇರಳ "ಖುದ್ದಾಮುಲ್ ಅಹ್ಮದಿಯಾ" (ಅಹ್ಮದಿಯಾ ಯುವಜನ ಸಂಘ) ತ್ರಿದಿನ ಶಿಕ್ಷಣ ಶಿಬಿರ ಕಲ್ಕುಳಂ ಎಂಬಲ್ಲಿ ಕಳೆದ ಮೇ 13, 14, 15ರಂದು ಅಹ್ಮದಿಯಾ ಮಸೀದಿ ವಠಾರದಲ್ಲಿ ಯಶಸ್ವಿಯಾಗಿ ನಡೆಯಿತು. ಶಿಬಿರದಲ್ಲಿ ಸುಮಾರು 250 ಮಂದಿ ಭಾಗವಹಿಸಿದರು.

ಖುರ್‌ಆನ್ ಪಾರಾಯಣ, ಅಝಾನ್ ಕರೆ, ಭಾಷಣ, ಪದ್ಯ ಇತ್ಯಾದಿ ಸ್ಪರ್ಧೆಗಳನ್ನೂ ಶಿಬಿರದಲ್ಲಿ ಏರ್ಪಡಿಸಲಾಗಿತ್ತು.

## ವಯನಾಡು ಜಿಲ್ಲೆಯಲ್ಲಿ ಪ್ರಚಾರ ಕಾರ್ಯಕ್ರಮ

ಕಳೆದ ಮೇ 30ರಿಂದ 8 ದಿನಗಳ ಕಾಲ ಜ। ಸಿ. ಎಚ್. ಇಸ್‌ಹಾಕ್ ಸಾಹೇಬ್ (ಚುಂಗತ್ತರ) ಅವರ ನಾಯಕತ್ವದಲ್ಲಿ 8 ಮಂದಿಯ ಯುವ ತಂಡವೊಂದು ಕೇರಳದ ವಯನಾಡು ಜಿಲ್ಲೆಯ ಹಲವೆಡೆಗಳಲ್ಲಿ ವಾಹನದಲ್ಲಿ ಸಂಚರಿಸಿ ಅಹ್ಮದಿಯಾ ಪ್ರಚಾರವನ್ನು ಬಹಳ ವಿಜಯಕರವಾಗಿ ನಡೆಸಿದರು. ಅನೇಕ ಕಿರುಕೃತಿಗಳ ವಿತರಣೆಯೊಂದಿಗೆ ಸಾವಿರಾರು ರೂಪಾಯಿಗಳ ಪುಸ್ತಕ ಮಾರಾಟವಾಯಿತು.

## ರಾಷ್ಟ್ರಪತಿಯವರಿಗೆ ಖುರ್‌ಆನ್ ಪಾರಿತೋಷಕ

ಕಳೆದ ಮಾರ್ಚ್ 7ರಂದು ಭದ್ರಕ್ ಎಂಬಲ್ಲಿ ಒಂದು ಬೃಹತ್ ಕಾರ್ಖಾನೆಯ ಉದ್ಘಾಟನೆ ಮಾಡಲಿಕ್ಕಾಗಿ ಆಗಮಿಸಿದ ರಾಷ್ಟ್ರಪತಿ ಜೈಲ್ ಸಿಂಘ್ ಅವರಿಗೆ ಸ್ಥಳೀಯ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಯೂಸುಫ್ ಅನ್ವರ್ ಅವರು ಪವಿತ್ರ ಖುರ್‌ಆನಿನ ಇಂಗ್ಲೀಷ್ ಭಾಷಾಂತರ ಮತ್ತು ಇನ್ನಿತರ ಅಹ್ಮದಿಯಾ ಸಾಹಿತ್ಯಗಳನ್ನು ಕೊಡುಗೆಯಿತ್ತರು. ಅವನ್ನು ಅವರು ಸಂತೋಷದಿಂದ ಸ್ವೀಕರಿಸಿದರು.

## ಖುರ್‌ಆನಿನ ಗುರುಮುಖಿ ಭಾಷಾಂತರ

ಅಹ್ಮದಿಯಾ ಜಮಾಅತಿನ ವತಿಯಿಂದ ಸಂಕ್ಷಿಪ್ತ ವ್ಯಾಖ್ಯಾನ ಸಹಿತ ಖುರ್‌ಆನಿನ ಗುರುಮುಖಿ ಭಾಷಾಂತರ ಪ್ರಕಾಶನಗೊಂಡಿದೆಯೆಂದು ಭಾರತದ ಕೇಂದ್ರ ಅಹ್ಮದಿಯಾ ಪ್ರಚರಣಾಧಿಕಾರಿ ತಿಳಿಸಿದ್ದಾರೆ.

## ಕುಂಡೂರಿನಲ್ಲಿ ಮಸೀದಿ

ಕಳೆದ ಮೇ 2ರಂದು ಆಂಧ್ರಪ್ರದೇಶದ ಕುಂಡೂರ್ ಎಂಬಲ್ಲಿ ಅಹ್ಮದಿಯಾ ಮಸೀದಿಯೊಂದಕ್ಕೆ ಶಂಕು ಸ್ಥಾಪನೆ ಮಾಡಲಾಯಿತು. ಮೌಲಾನಾ ಬಶೀರ್ ಅಹ್ಮದ್ ದೆಹ್ಲ್ವಿ ಅವರು ಶಿಲಾಸ್ಥಾಪನಾ ಕರ್ಮವನ್ನು ನೆರವೇರಿಸಿದರು.

## ಸಿರಾಲಿಯೋನಿನ ಯುವ ಅಹ್ಮದಿಯ ತ್ಯಾಗ

ಸಿರಾಲಿಯೋನಿನ ಬೋ ಎಂಬಲ್ಲಿನ ಯುವ ಅಹ್ಮದಿ ಸುಲೈಮಾನ್ ಅವರು ತನ್ನ ಐದು ಎಕರೆ ಕಾಫಿ ತೋಟವನ್ನು ಅಹ್ಮದಿಯಾ ಜಮಾಅತಿಗೆ ಅರ್ಪಿಸಿದ್ದಾರೆ. ಅವರು ತನ್ನ ಪುತ್ರನನ್ನು ಖುರ್‌ಆನ್ ಕಂಠಪಾಠ ಕಲಿಯಲಿಕ್ಕಾಗಿ ಪಾಕಿಸ್ತಾನದ ಅಹ್ಮದಿಯಾ ಕೇಂದ್ರವಾದ ರಬ್ವಾಕ್ಕೆ ಕಳುಹಿಸಿದ್ದಾರೆ.

## ಅರಿಜೋನಾದಲ್ಲಿ ಮಸೀದಿ

ಅಮೇರಿಕದ ಅರಿಜೋನಾ ಪ್ರಾಂತ್ಯದ ತೊಸಾನ್ ಎಂಬಲ್ಲಿ ಕಳೆದ ಮಾರ್ಚ್ 13ರಂದು ಮಧ್ಯಾಹ್ನ ಅಹ್ಮದಿಯಾ ಮಸೀದಿಯೊಂದು ಉದ್ಘಾಟಿಸಲ್ಪಟ್ಟಿತು. ಅಮೇರಿಕದ ಮೊತ್ತಮೊದಲಿನ ಅಹ್ಮದಿಯಾ ಮಿಶನರಿ ಮುಫ್ತೀ ಮುಹಮ್ಮದ್ ಸಾದಿಕ್ ಸಾಹೇಬರ ಪುತ್ರ ಅಹ್ಮದ್ ಸಾದಿಕ್ ಸಾಹೇಬರು ಜುಹರ್ ನಮಾಜಿಗೆ ಕರೆ ನೀಡಿದರು. ಈ ಮಸೀದಿಗೆ ಮಸ್ಜಿದ್ ಯೂಸುಫ್ ಎಂದು ನಾಮಕರಣ ಮಾಡಲಾಗಿದೆ. ಈ ಮಸೀದಿ ನಿರ್ಮಾಣದ ಪೂರ್ಣ ವೆಚ್ಚವನ್ನು (ಸುಮಾರು ರೂ. 9 ಲಕ್ಷ) ಡಾಕ್ಟರ್ ಝುಫರ್ ಸಾಹೇಬ್ ಕುರೈಶಿ ಅವರು ವಹಿಸಿದರು.

## ಮ್ಯಾಡ್ರಿಡ್‌ನಲ್ಲಿ ಸಾರ್ವಜನಿಕ ಸಭೆ

ಕಳೆದ ಎಪ್ರಿಲ್ 22ರಂದು ಸ್ಪೈನಿನ ರಾಜಧಾನಿ ಮ್ಯಾಡ್ರಿಡ್‌ನಲ್ಲಿ ಅಹ್ಮದಿಯಾ ಜಮಾಅತಿನ ಆಶ್ರಯದಲ್ಲಿ ಮೊತ್ತ ಮೊದಲ ಬಾರಿ ಸಾರ್ವಜನಿಕ ಸಭೆಯೊಂದು ಜರಗಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಸ್ಪೈನಿನ ಬಿಶಾರತ್ ಮಸೀದಿಯ ಇಮಾಂ ಮಿರ್ ಮಹ್‌ಮೂದ್ ಸಾಹೇಬ್‌ರವರು ಇಸ್ಲಾಮಿನ ಅಧ್ಯಾಪನಗಳ ಬಗ್ಗೆ ಮಾತನಾಡಿದರು. ಮೌಲವಿ ಅಬ್ದುಸ್ಸತ್ತಾರ್ ಸಾಹೇಬ್ ಅಹ್ಮದಿಯಾ ಜಮಾಅತಿನ ಕುರಿತು ವಿವರಿಸಿದರು. ಇಸ್ಲಾಂ ಮತ್ತು ಇಸ್ಲಾಮಿನಲ್ಲಿ ಸ್ತ್ರೀಯ ಸ್ಥಾನದ ಕುರಿತು ಶ್ರೋತೃಗಳು ಕೇಳಿದ ಪ್ರಶ್ನೆಗಳಿಗೆ ಸಮಂಜಸ ಉತ್ತರಗಳನ್ನು ನೀಡಲಾಯಿತು. ಅಹ್ಮದಿಯಾ ಸಾಹಿತ್ಯಗಳನ್ನು ಸಭಿಕರಿಗೆ ಹಂಚಲಾಯಿತು.

## ಫ್ರಾಂಕ್‌ಫರ್ಟ್‌ನಲ್ಲಿ ವಾರ್ಷಿಕ ಸಮ್ಮೇಳನ

ಕಳೆದ ಎಪ್ರಿಲ್ 2 ಮತ್ತು 3ರಂದು ಪ. ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ಅಹ್ಮದಿಯಾ ವಾರ್ಷಿಕ ಸಮ್ಮೇಳನ ಜರಗಿತು. ದೇಶದಾದ್ಯಂತದಿಂದ ಅಹ್ಮದಿಯರು ಸಮ್ಮೇಳನದಲ್ಲಿ ಭಾಗವಹಿಸಿದರು.

ಅಹ್ಮದಿಯಾ ಮಿಶನರಿಗಳಾದ ಜ। ಕರಂ ಇಲಾಹಿ ಝುಫರ್ (ಸ್ಪೈನ್) ಮತ್ತು ಜ। ಬಶೀರ್ ಅಹ್ಮದ್ ಆರ್ಚರ್ಡ್ (ಸ್ಕಾಟ್‌ಲೇಂಡ್) ಸಭೆಯಲ್ಲಿ ಪಾಲ್ಗೊಂಡರು.

## ಕೆನಡಾದಲ್ಲಿ ಪ್ರಚಾರ

ಕೆನಡಾದ ಬ್ರೆಮ್ಲಿ ಎಂಬಲ್ಲಿ ಕಳೆದ ಮಾರ್ಚ್ 19 ರಂದು ಅಹ್ಮದಿಯಾ ಪ್ರಚಾರ ದಿನವನ್ನು ಆಚರಿಸಲಾಯಿತು. ಪಟ್ಟಣದಲ್ಲೆಲ್ಲಾ ಅಹ್ಮದಿಯಾ ಸಾಹಿತ್ಯಗಳನ್ನು ವಿತರಣೆ ಮಾಡಲಾಯಿತು. 18 ಮಂದಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## ಇಂಗ್ಲೆಂಡಿನಲ್ಲಿ ಒಂದೇ ದಿನದಲ್ಲಿ 60 ಕಡೆಗಳಲ್ಲಿ ಪ್ರಚಾರ

ಕಳೆದ ಎಪ್ರಿಲ್ 13ರಂದು ಇಂಗ್ಲೆಂಡಿನಲ್ಲಿ ಅಹ್ಮದಿಯಾ ಪ್ರಚಾರ ದಿನವನ್ನು ಆಚರಿಸಲಾಯಿತು. 200 ಮಂದಿ ಭಾಗವಹಿಸಿದ ಪ್ರಚಾರ ಕಾರ್ಯಕ್ರಮದಲ್ಲಿ ದೇಶದ 60 ಕಡೆಗಳಲ್ಲಿ ಕಿರು ಸಾಹಿತ್ಯಗಳನ್ನು ವಿತರಣೆ ಮಾಡಲಾಯಿತೆಂದು ಇಂಗ್ಲೆಂಡಿನ ಪ್ರಚಾರ ಕಾರ್ಯದರ್ಶಿ ಜ| ಮುಹಮ್ಮದ್ ಶರೀಫ್ ಸಾಹೇಬ್ ಅಶ್ರಫ್ ತಿಳಿಸಿದ್ದಾರೆ.

## ದೇವದುರ್ಗದಲ್ಲಿ ಸಮ್ಮೇಳನ

ಕಳೆದ ಮೇ 6 ಮತ್ತು 7 ರಂದು ದೇವದುರ್ಗದಲ್ಲಿ ಅಹ್ಮದಿಯಾ ಸಮ್ಮೇಳನ ಜರಗಿತು. ಪ್ರಥಮ ದಿನದ ಅಧಿವೇಶನದ ಅಧ್ಯಕ್ಷತೆಯನ್ನು ಮೌಲಾನ ಬಶೀರ್ ಅಹ್ಮದ್ ಸಾಹೇಬ್ ವಹಿಸಿದರು. ರಫತುಲ್ಲಾ ಸಾಹೇಬ್ ಘೋರಿ, ಮೌಲವಿ ಅಬ್ದುಲ್ ಮೂಮಿನ್ ಸಾಹೇಬ್, ಮೌಲವಿ ಹಮೀದುದ್ದೀನ್ ಸಾಹೇಬ್ ಶಮ್ಸ್ ಮೊದಲಾದವರು ಮಾತನಾಡಿದರು.

ದ್ವಿತೀಯ ದಿನದ ಅಧಿವೇಶನ ದೇವದುರ್ಗ ಬಸ್ ಸ್ಟೇಂಡಿನ ಸಮೀಪ ಸಮಾವೇಶಗೊಂಡಿತು. ಅಬ್ದುಸ್ಸಮದ್ ಸಾಹೇಬ್ ಯಾದಗಿರಿ ಅವರು ಅಧ್ಯಕ್ಷತೆ ವಹಿಸಿದರು. ಎಡ್ವಕೇಟ್ ಫಹೀಂ ಅಹ್ಮದ್ ಸಾಹೇಬ್, ಮುಹಮ್ಮದ್ ಇಸ್ಮಾಯಿಲ್ ಸಾಹೇಬ್ ಮೊದಲಾದವರು ಮಾತನಾಡಿದರು. ಎರಡೂ ದಿನಗಳಲ್ಲಿ ಪಟ್ಟಣವೆಲ್ಲೆಲ್ಲಾ ಅಹ್ಮದಿಯಾ ಸಾಹಿತ್ಯಗಳನ್ನು ಹಂಚಲಾಯಿತು.

## ವಾಜಪೇಯಿಗೆ ಸಾಹಿತ್ಯ

ಕಳೆದ ಮೇ 19ರಂದು ಭಾರತೀಯ ಜನತಾ ಪಕ್ಷದ ಅಧ್ಯಕ್ಷ ಶ್ರೀ ಅಟಲ ಬಿಹಾರಿ ವಾಜಪೇಯಿ ಅವರು ಪೂಂಛ್‌ಗೆ ಆಗಮಿಸಿದಾಗ ಸ್ಥಳೀಯ ಅಹ್ಮದಿಯಾ ಮಿಶನರಿ ಮೌಲವಿ ಬಶಾರತ್ ಅಹ್ಮದ್‌ರವರು ಅವರನ್ನು ಭೇಟಿಯಾಗಿ ಅಹ್ಮದಿಯಾ ಸಾಹಿತ್ಯಗಳನ್ನಿತ್ತರು. ಶ್ರೀ ವಾಜಪೇಯಿ ಸಂತೋಷದಿಂದ ಕೊಡುಗೆಯನ್ನು ಸ್ವೀಕರಿಸಿ ಅಹ್ಮದಿಯಾ ಜಮಾಅತಿನ ಬಗ್ಗೆ ವಿಚಾರ ವಿನಿಮಯ ನಡೆಸಿದರು. ಅಹ್ಮದಿಯಾ ಧ್ಯೇಯಧೋರಣೆಗಳ ಬಗ್ಗೆ ಮೌಲವಿ ಬಶಾರತ್ ಅಹ್ಮದ್ ಸಾಹೇಬರು ವಿವರಿಸಿದರು.

## ಅಮೃತಸರ ರೋಟರಿ ಕ್ಲಬ್‌ನಲ್ಲಿ ಅಹ್ಮದಿ ಪ್ರತಿನಿಧಿಯ ಭಾಷಣ

ಕಳೆದ ಜೂನ್ 4ರಂದು ಅಮೃತಸರ ಮಿಡ್ ಟೌನ್ ರೋಟರಿ ಕ್ಲಬ್ ಏರ್ಪಡಿಸಿದ "Mankind is one" ಎಂಬ ವಿಚಾರ ಗೋಷ್ಠಿಯಲ್ಲಿ ಅಹ್ಮದಿಯಾ ಪ್ರತಿನಿಧಿಯಾಗಿ ಮೌಲಾನ ಶರೀಫ್ ಅಹ್ಮದ್ ಅಮೀನಿ ಸಾಹೇಬರು ಭಾಷಣ ಮಾಡಿದರು.

## ಫಿಜಿ ರೇಡಿಯೋದಲ್ಲಿ ಅಹ್ಮದಿಯಾ ಖಲೀಫರ ಭಾಷಣ

ಕಳೆದ ಎಪ್ರಿಲ್ ತಿಂಗಳಲ್ಲಿ ಫಿಜಿ ರೇಡಿಯೋ ನಿಲಯವು ಪಾಕಿಸ್ತಾನದ ರಬ್ವಾದಲ್ಲಿ ಕಳೆದ ಡಿಸೆಂಬರ್‌ನಲ್ಲಿ ಜರಗಿದ ವಾರ್ಷಿಕ ಮಹಾ ಸಮ್ಮೇಳನದಲ್ಲಿ ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ ರವರು ಮಾಡಿದ ಎರಡು ಭಾಷಣಗಳ ಕೆಲವು ಭಾಗಗಳನ್ನು ಪ್ರಸಾರ ಮಾಡಿದೆಯೆಂದು ಸ್ಥಳೀಯ ಅಹ್ಮದಿಯಾ ಮಿಶನರಿ ಎಸ್. ಅಹ್ಮದ್ ಖಾಲಿದ್ ಸಾಹೇಬ್ ತಿಳಿಸಿದ್ದಾರೆ.

## ಹೈದರಾಬಾದ್ ಆಸ್ಪತ್ರೆಗೆ ಕೊಡುಗೆ

ಹೈದರಾಬಾದಿನಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲಾಗುವ ಆಸ್ಪತ್ರೆಗೆ ಜಡ್‌ಚರ್ಲ ಎಂಬಲ್ಲಿನ ಯುವ ಅಹ್ಮದಿಯೋರ್ವರು ರೂ. ಎರಡೂಕಾಲು ಲಕ್ಷ ಬೆಲೆಬಾಳುವ ತನ್ನ 4 ಎಕರೆ ಜಮೀನನ್ನು ದಾನ ಮಾಡಿರುವರು. ಮಾತ್ರವಲ್ಲದೆ ಡಾಕ್ಟರರ ವೇತನ ಇತ್ಯಾದಿಗಳಿಗಾಗಿ ಒಂದು ಲಕ್ಷ ರೂಪಾಯಿ ಠೇವಣಿಯನ್ನು ಬೇಂಕಿನಲ್ಲಿರಿಸಿದ್ದಾರೆ.

## ರಾಜೀವ ಗಾಂಧಿಗೆ ಸಾಹಿತ್ಯ

ಕಳೆದ ಜೂನ್ 2ರಂದು ಸಂಸತ್ ಸದಸ್ಯ ಶ್ರೀ ರಾಜೀವ ಗಾಂಧಿಯವರು ಪೂಂಛ್‌ಗೆ ಬಂದಿದ್ದಾಗ, ಸ್ಥಳೀಯ ಅಹ್ಮದಿಯಾ ಮಿಶನರಿ ಮೌಲವಿ ಬಶಾರತ್ ಅಹ್ಮದ್ ಸಾಹೇಬ್ ಮತ್ತು ಜಮಾಅತ್ ಅಧ್ಯಕ್ಷ ಶಂಸುದ್ದೀನ್ ಸಾಹೇಬ್‌ರವರು ಅವರನ್ನು ಭೇಟಿಯಾಗಿ ಅಹ್ಮದಿಯಾ ಸಾಹಿತ್ಯಗಳನ್ನು ನೀಡಿದರು.

## ಒರಿಸ್ಸಾದಲ್ಲಿ 19ನೇ ವಾರ್ಷಿಕ ಸಮ್ಮೇಳನ

ಕಳೆದ ಮೇ 21 ಮತ್ತು 22ರಂದು ಒರಿಸ್ಸಾದ ಕೇರಂಗ್‌ನಲ್ಲಿ 19ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನ ಜರಗಿತು.

ಪ್ರಥಮ ದಿನದ ಅಧಿವೇಶನ ಮೌಲವಿ ಶರಾಫತ್ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು. ಮೌಲವಿ ಮುಹಮ್ಮದ್ ಉಮರ್ ಸಾಹೇಬ್, ಮೌಲವಿ ಶರಾಫತ್ ಅಹ್ಮದ್ ಖಾನ್ ಸಾಹೇಬ್, ಮೌಲವಿ ಮುಹಮ್ಮದ್ ಅಲಿ ಸಾಹೇಬ್, ಇಹ್‌ಸಾನುಲ್ ಹಕ್ ಸಾಹೇಬ್, ಲೋಕ ಸೇವಾ ಮಂಡಲದ ಅಧ್ಯಕ್ಷ ಹಾಗೂ "ಸಮಾಜ್" ಪತ್ರಿಕೆಯ ಸಂಪಾದಕ ಡಾ। ರಾಧಾನಾಥ್, ಡಾ। ತಾರೀಕ್ ಅಹ್ಮದ್ ಸಾಹೇಬ್ ಮೊದಲಾದವರು ಮಾತನಾಡಿದರು.

ದ್ವಿತೀಯ ದಿನದ ಅಧಿವೇಶನ ಮೌಲವಿ ಮುಹಮ್ಮದ್ ಉಮರ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಮೌಲವಿ ಮುಹಮ್ಮದ್ ಯೂಸುಫ್ ಸಾಹೇಬ್ ಅನ್ವರ್, ಮಾಸ್ಟರ್ ಮುಸ್ತಾಕ್ ಅಹ್ಮದ್ ಸಾಹೇಬ್, ಮೌಲವಿ ಅಬ್ದುಲ್ ಹಲೀಂ ಸಾಹೇಬ್, ಸಯ್ಯದ್ ಅನೀಸುದ್ದೀನ್ ಸಾಹೇಬ್ ಮೊದಲಾದವರು ಮಾತನಾಡಿದರು.

## ವಾರಂಗಲ್ ರೋಟರಿ ಕ್ಲಬ್‌ನಲ್ಲಿ ಅಹ್ಮದಿ ಪ್ರತಿನಿಧಿಯ ಭಾಷಣ

ಕಳೆದ ಜೂನ್ 29ರಂದು ನಿಜಾಮಿಯಾ ಒಬ್ಸರ್ವೇಟರಿಯ ಡೈರೆಕ್ಟರ್ ಹಾಗೂ ಉಸ್ಮಾನಿಯಾ ವಿಶ್ವವಿದ್ಯಾಲಯದ ಖಗೋಳ ಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಫಿಝ್ ಡಾ। ಸಾಲಿಹ್ ಮುಹಮ್ಮದ್ ಅಲ್ಲಾದಿನ್ ಸಾಹೇಬರು ವಾರಂಗಲ್‌ರೋಟರಿ ಕ್ಲಬ್‌ನಲ್ಲಿ "ಧರ್ಮ ಮತ್ತು ವಿಜ್ಞಾನ" ಎಂಬ ವಿಷಯದಲ್ಲಿ ಭಾಷಣ ಮಾಡಿದರು. ವಿಜ್ಞಾನವು ಧರ್ಮಕ್ಕೆ ವಿರುದ್ಧವಲ್ಲವೆಂದು ತನ್ನ ಭಾಷಣದಲ್ಲಿ ಅವರು ಖುರ್‌ಆನಿನ ಆಧಾರದಲ್ಲಿ ಸಾಬೀತು ಪಡಿಸಿದರು. ಭಾಷಣದ ಬಳಿಕ ಸಭಿಕರ ಪ್ರಶ್ನೆಗಳಿಗೆ ಅವರು ಸಮಂಜಸ ಉತ್ತರ ವನ್ನಿತ್ತರು.

ಕ್ಲಬ್‌ನ ಪರವಾಗಿ ಹಾಫಿಝ್ ಸಾಹೇಬರಿಗೆ ಅಮೂಲ್ಯವಾದೊಂದು ಪಾರಿತೋಷಕವನ್ನು ನೀಡಲಾಯಿತು. ಖುರ್‌ಆನಿನ ಇಂಗ್ಲಿಷ್ ಭಾಷಾಂತರವನ್ನೂ ಇತರ ಅಹ್ಮದಿಯಾ ಸಾಹಿತ್ಯಗಳನ್ನೂ ಹಾಫಿಝ್ ಸಾಹೇಬರು ಕ್ಲಬ್‌ಗೆ ನೀಡಿದರು.

## ಖಾದಿಯಾನಿನಲ್ಲಿ ಈದ್ ಸ್ನೇಹ ಕೂಟ

ಕಳೆದ ಜುಲಾಯಿ 15ರಂದು ಸಂಜೆ ಅಹ್ಮದಿಯಾ ಜಮಾಅತಿನ ಆಶ್ರಯದಲ್ಲಿ ಖಾದಿಯಾನಿನ ತಅ್‌ಲೀಮುಲ್ ಇಸ್ಲಾಂ ಹೈಸ್ಕೂಲಿನಲ್ಲಿ ಈದ್ ಸ್ನೇಹಕೂಟವನ್ನು ಏರ್ಪಡಿಸಲಾಗಿತ್ತು. ಗುರುದಾಸಪುರ ಜಿಲ್ಲಾಧಿಕಾರಿ ಸರ್ದಾರ್ ಜಿ. ಎಸ್. ಮೈನಿ, ಶ್ರೀ ಸೋಮನಾಥ್, ಸರ್ದಾರ್ ಜೋಗಿಂದರ್ ಸಿಂಘ್ (ಬಟಾಲ), ಶ್ರೀ ರೋಶನ್‌ಲಾಲ್, ಮಾಜಿ ಸಚಿವ ಸರ್ದಾರ್ ಗುರುಬಚನ್ ಸಿಂಘ್ ಬಾಜ್ವ ಮೊದಲಾದವರಲ್ಲದೆ ವಿವಿಧ ಧರ್ಮಾನುಯಾಯಿಗಳಾದ ಸುಮಾರು ನೂರು ಮಂದಿ ಅತಿಥಿಗಳು ಸಭೆಯಲ್ಲಿ ಪಾಲ್ಗೊಂಡರು.

ಅಧ್ಯಕ್ಷತೆ ವಹಿಸಿದ್ದ ಮೌಲವಿ ಶರೀಫ್ ಅಹ್ಮದ್ ಅಮೀನಿ ಸಾಹೇಬರು ಇಂಥ ಸ್ನೇಹ ಕೂಟದ ಮಹತ್ವವನ್ನೂ ಉದ್ದೇಶವನ್ನೂ ಹೇಳಿ ವಿವಿಧ ಧರ್ಮೀಯರ ಮಧ್ಯೆ ಸಾಮರಸ್ಯವನ್ನುಂಟು ಮಾಡುವ ಕಾರ್ಯದಲ್ಲಿ ಅಹ್ಮದಿಯಾ ಜಮಾಅತ್ ವಹಿಸುವ ಪಾತ್ರವನ್ನು ವಿವರಿಸಿದರು. ಜಿಲ್ಲಾಧಿಕಾರಿಯವರು ತನ್ನ ಭಾಷಣದಲ್ಲಿ ರಾಷ್ಟ್ರೀಯ ಭಾವೈಕ್ಯಕ್ಕಾಗಿ ಅಹ್ಮದಿಯಾ ಸಂಘಟನೆ ಗೈಯ್ಯುವ ಸೇವೆಯನ್ನು ಶ್ಲಾಘಿಸಿದರು. ಅಹ್ಮದೀ ಮುಸ್ಲಿಮರು ಸದಾ ಕಾನೂನುಗಳನ್ನು ಪಾಲಿಸುವ ದೇಶ ಪ್ರೇಮಿ ಪ್ರಜೆಗಳೆಂದು ಜಮಾಅತಿನ ಅಮೀರ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ತನ್ನ ಭಾಷಣದಲ್ಲಿ ಹೇಳಿದರು.

---

(30ನೇ ಪುಟದಿಂದ)
ಅವರಿಗೆ ಸುಮಾರು 65 ವರ್ಷ ಪ್ರಾಯವಾಗಿತ್ತು. ಸುಮಾರು 25 ವರ್ಷಗಳ ಮೊದಲು ಅವರು ಅಹ್ಮದಿಯಾ ಜಮಾಅತಿಗೆ ಸೇರಿದರು.

ದಿವಂಗತರಿಗೆ ಪತ್ನಿಯೂ ಆರು ಮಂದಿ ಪುತ್ರರೂ ಮೂವರು ಪುತ್ರಿಯರೂ ಇದ್ದಾರೆ. ಹಿರಿಯ ಪುತ್ರ ಎಂ. ಅಬ್ದುಲ್ ಲತೀಫ್ ಸಾಹೇಬ್ ವಿಜಯಾ ಬೇಂಕ್ ಕೊಯಿಲಾಂಡಿ ಶಾಖೆಯ ಮೆನೇಜರ್ ಆಗಿದ್ದಾರೆ.

ಮೃತ ದೇಹವನ್ನು ಮಂಜೇಶ್ವರದಲ್ಲಿ ದಫನ ಮಾಡಲಾಯಿತು. ದಿವಂಗತರಿಗೆ ಅಲ್ಲಾಹು ಮಗ್‌ಫಿರತನ್ನು ನೀಡಲಿ. ಅಮೀನ್.

## ಹಜ಼್ರತ್ ಮೌಲ್ವಿ ಮುಹಮ್ಮದ್ ದೀನ್ ಸಾಹೇಬ್

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಜ಼್ರತ್ ಅಹ್ಮದ್‌ರವರ ಶಿಷ್ಯಾನುಯಾಯಿಗಳ ಪೈಕಿ ಒಬ್ಬರಾದ ಹಜ಼್ರತ್ ಮೌಲ್ವಿ ಮುಹಮ್ಮದ್ ದೀನ್ ಸಾಹೇಬರು ಕಳೆದ ಮಾರ್ಚ್ 7ರಂದು ತನ್ನ 102ನೇ ವಯಸ್ಸಿನಲ್ಲಿ ರಬ್ವಾದಲ್ಲಿ ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್". ಅವರು ಅಲಿಘಡ್ ವಿಶ್ವವಿದ್ಯಾಲಯದ ಪದವೀಧರರಾಗಿದ್ದು, 1907ರಲ್ಲಿ ಇಸ್ಲಾಮಿನ ಸೇವೆಗಾಗಿ ಜೀವಿತಾರ್ಪಣ ಮಾಡಬೇಕೆಂಬ ಹಜ಼್ರತ್ ಅಹ್ಮದರ ಕರೆಗೆ ಓಗೊಟ್ಟ 13 ಮಂದಿಯ ಪ್ರಥಮ ತಂಡದಲ್ಲಿ ಸೇರಿದವರಾಗಿದ್ದಾರೆ. 1914ರಿಂದ 21ರ ವರೆಗೆ ಅವರು ಖಾದಿಯಾನಿನ ತಅ್‌ಲೀಮುಲ್ ಇಸ್ಲಾಂ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. 1923ರಿಂದ 25ರ ವರೆಗೆ ಅಮೇರಿಕದಲ್ಲಿ ಮಿಶನರಿಯಾಗಿದ್ದರು. ಆ ಬಳಿಕ 1965ರ ವರೆಗೆ ರಬ್ವಾ ಅಹ್ಮದಿಯಾ ಕೇಂದ್ರದಲ್ಲಿ ವಿದ್ಯಾ ಇಲಾಖೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. ಸದರ್ ಅಂಜುಮನ್ ಅಹ್ಮದಿಯಾ, ರಬ್ವಾದ ಪ್ರೆಸಿಡೆಂಟ್ ಸ್ಥಾನವನ್ನೂ ಅವರು ವಹಿಸಿದ್ದರು.

ಅಲ್ಲಾಹು ಅವರಿಗೆ ಮಗ್‌ಫಿರತನ್ನೂ ಜನ್ನತಿನಲ್ಲಿ ಉನ್ನತ ಸ್ಥಾನವನ್ನೂ ನೀಡಲಿ. ಆಮೀನ್.

## ಸಿ. ಬೀಫಾತಿಮ ಸಾಹಿಬ

ಸದರ್ ಅಂಜುಮನ್ ಅಹ್ಮದಿಯಾ (ಅಹ್ಮದಿಯಾ ಕೇಂದ್ರ ಸಂಸ್ಥೆ) ಸದಸ್ಯ, ಮೊಗ್ರಾಲ್ ಅಹ್ಮದಿಯಾ ಜಮಾಅತಿನ ಅಧ್ಯಕ್ಷ ಮತ್ತು "ಸತ್ಯದೂತನ್" ಪತ್ರಿಕೆಯ ಸಂಪಾದಕರಾದ ಜನಾಬ್ ಸಿದ್ದೀಖ್ ಅಮೀರಲಿ ಸಾಹೇಬರ ಪತ್ನಿ ಹಾಗೂ "ಯುಗರಶ್ಮಿ" ಸಂಪಾದಕರ ಪತ್ನಿಯ ಮಾತೃಶ್ರೀ ಸಿ. ಬೀಫಾತಿಮ ಸಾಹಿಬ ಅವರು ಕಳೆದ ಜೂನ್ 16ರಂದು ತನ್ನ 53ನೇ ವಯಸ್ಸಿನಲ್ಲಿ ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್".

1947ರಲ್ಲಿ ಪತಿಯ ಜೊತೆಯಲ್ಲಿ ಅವರು ಅಹ್ಮದಿಯಾ ಜಮಾಅತಿಗೆ ಸೇರಿದರು. ಅಹ್ಮದಿಯಾ ಜಮಾಅತಿಗೆ ಸೇರಿದ ಕಾರಣದಿಂದ ಆಂತರಿಕವಾಗಿಯೂ ಬಾಹ್ಯವಾಗಿಯೂ ಹಲವಿಧ ತೊಂದರೆಗಳನ್ನೂ ವಿರೋಧವನ್ನೂ ಎದುರಿಸಬೇಕಾಗಿ ಬಂದ ಬೀಫಾತಿಮ ಸಾಹಿಬ ಅವರಿಗೆ ಅವನ್ನೆಲ್ಲಾ ಧೀರವಾಗಿ ಅಭಿಮುಖೀಕರಿಸಲು ಸಾಧ್ಯವಾಯಿತು. ಧರ್ಮಭಕ್ತೆಯಾಗಿದ್ದ ಅವರಿಗೆ ಹಜ಼್ರತ್ ಮಸೀಹ್ ಮೌಊದ್ (ಅ)ರ ಕುಟುಂಬದೊಂದಿಗೂ ಅಹ್ಮದಿಯಾ ಕೇಂದ್ರದೊಂದಿಗೂ ಬಹಳ ಒಲವು ಇತ್ತು. ಹಲವು ಸಲ ಅವರು ಖಾದಿಯಾನ್ ಸಂದರ್ಶಿಸಿದ್ದಾರೆ.

ಮಂಗಳೂರಿನ ಪೌರ ಪ್ರಮುಖ ಹಾಗೂ ಪ್ರಸಿದ್ಧ ವ್ಯಾಪಾರಿಯಾಗಿದ್ದ ಜನಾಬ್ ಸಿ. ಮಹಮೂದ್ ಸಾಹೇಬ್ ಮತ್ತು ಮೊಗ್ರಾಲ್ ಸಾಹುಕಾರ್ ಕುಞ್ಞಿಪಕ್ಕಿ ಸಾಹೇಬರ ಮಗಳು ಆಯಿಶಾಬಿಯ ಪುತ್ರಿಯಾದ ಅವರು ಕುಟುಂಬದ ಏಕಮಾತ್ರ ಅಹ್ಮದಿ ಸದಸ್ಯೆಯಾಗಿದ್ದರು. ಅವರಿಗೆ ಈಗ ಇಬ್ಬರು ಸಹೋದರರೂ ಇಬ್ಬರು ಸಹೋದರಿಯರೂ ಇದ್ದಾರೆ. ಹಿರಿಯ ಸಹೋದರ ಸಿ. ಕುಞ್ಞಿಪಕ್ಕಿಸಾಹೇಬ್ ಮಂಗಳೂರಿನ ಸಾಮಾಜಿಕ ಕಾರ್ಯಕರ್ತರಾಗಿದ್ದಾರೆ. ಮತ್ತೋರ್ವ ಸಹೋದರ ಸಿ. ಅಬ್ದುಲ್ ಹಮೀದ್ ಸಾಹೇಬ್ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗಿನ ಕರ್ನಾಟಕ ರಾಜ್ಯದ ಅಧ್ಯಕ್ಷರಾಗಿದ್ದಾರೆ.

ದಿವಂಗತೆಗೆ ಇಬ್ಬರು ಪುತ್ರರೂ ಮೂವರು ಪುತ್ರಿಯರೂ ಇದ್ದಾರೆ. ಹಿರಿಯ ಪುತ್ರ ಖಾದಿಯಾನಿನಲ್ಲಿ ಕಲಿತು H. A. (Honours in Arabic) ಪದವಿ ಪಡೆದವರಾಗಿದ್ದಾರೆ. ಕಿರಿಯ ಪುತ್ರ ಮೊಗ್ರಾಲ್ ಜಮಾಅತಿನ ಯುವಜನ ಸಂಘದ (ಖುದ್ದಾಮುಲ್ ಅಹ್ಮದಿಯಾ) ನಾಯಕ (ಖಾಯಿದ್) ಆಗಿದ್ದಾರೆ.

ಅಲ್ಲಾಹು ಅವರಿಗೆ ಉನ್ನತ ದರ್ಜೆಯನ್ನೂ ಮಗ್‌ಫಿರತನ್ನೂ ನೀಡಲಿ. ಸಂತಪ್ತರಿಗೆ ಮನಃಶಾಂತಿಯನ್ನು ಕರುಣಿಸಲಿ. ಆಮೀನ್.

## ಮೌಲವಿ ಪಿ. ಎ. ಮುಹಮ್ಮದ್ ಸಾಹೇಬ್

ಮೂಲತಃ ಕಾಸರಗೋಡಿನ ಪಟ್ಲಾದವರಾದ ಮೌಲವಿ ಪಿ. ಎ. ಮುಹಮ್ಮದ್ ಸಾಹೇಬರು ಕಳೆದ ಮಾರ್ಚ್ 21ರಂದು ಉಳ್ಳಾಲದಲ್ಲಿರುವ ತನ್ನ ನಿವಾಸದಲ್ಲಿ ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್"

(29ನೇ ಪುಟ ನೋಡಿ)

# INTRODUCTION TO THE STUDY OF THE HOLY QURAN

**A unique book in Theology of the present century**

**Written by: HAZRAT MIRZA BASHIRUDDIN MAHMOOD AHMAD**

Price: **Rs 16/-** Pages: 456

Can be had from: Nazir Dawat-O-Tabligh, Qudian-143516 (Punjab)

---

ಅಹ್ಮದಿಯಾ ಸಂಘಟನೆಯು ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

"……ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು……" —ಉದಯವಾಣಿ

"…… ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ……" —ನವಭಾರತ

ಪುಟಗಳು: **48** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: Book Secretary, Ahmadiyya Muslim Mission,
10-23/1008, Ansari Road, Bunder, Mangalore-575 001.

---

# ಅಹ್ಮದಿಯಾ ಸಂದೇಶ

ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ


ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ: **60** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: Book Secretary, Ahmadiyya Muslim Mission,
10-23/1008, Ansari Road, Bunder, Mangalore-575 001.

Regd. with the Registrar of Newspapers for India. Regd No. R. N. 27354/75
**YUGARASHMI Kannada Quarterly, August 1983 / Zuhoor 1362**


## English Translation of the HOLY QURAN with Arabic Text & Extensive Index




**Price :** **Rs. 15-00**

**Postal Charge** **Extra**

### AHMADIYYA ENGLISH LITERATURE

1. INTRODUCTION TO THE STUDY OF HOLY QURA'N 16-00
   by Hazrath Mirza Bashiruddin Mahmud Ahmad
2. THE TEACHINGS OF ISLAM 6 00
   by Hazrath Mirza Ghulam Ahmad
3. JESUS IN INDIA 2-25
   by Hazrath Mirza Ghulam Ahmad
4. WHERE DID JESUS DIE? 2-25
   by J. D. Shams, Ex Imam, London Mosque
5. THE TOMB OF JESUS 1-00
   by Soofi Mutiurrahman Bengali, M. A.

**Write to: NAZIR DAWAT-O-TABLIGH, Qadian-143 561 [Punjab]**


Edited and Published by Muhammad Yusuf on behalf of Jamath Ahmadiyya at 10-23/1008, Ansari Road, Bunder, Mangalore-575 001.
Printed at Karavali Printers, Azizuddin Road, Bunder, Mangalore-575 001.